ಶುಕ್ರವಾರ, ಮೇ 12, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಪೆಪೆ’ ಸಿನಿಮಾ ಮೂಲಕ ಚಂದನವನದಲ್ಲಿ ಹೊಸ ಛಾಪು ಮೂಡಿಸಲು ಸಜ್ಜಾಗುತ್ತಿದ್ದಾರೆ ವಿನಯ್ ರಾಜ್‌ಕುಮಾರ್



ಶುಕ್ರವಾರ, ಮೇ 12, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 131 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,904 ▼	18,297 ▼	₹63,390 (ಬೆಂಗಳೂರು)	₹77,800 (ಬೆಂಗಳೂರು)	82.09 ▼

ಸಿಂಗಪುರಕ್ಕೆ ಹಾರಿದ ಕುಮಾರಸ್ವಾಮಿ ● ಕಾಂಗ್ರೆಸ್ ನಾಯಕರ ಸರಣಿ ಸಭೆ ● ಹೇಳಿಕೆಗೆ ಸೀಮಿತವಾದ ಬಿಜೆಪಿ

ಯಾರಿಗೆ ಅಧಿಕಾರ; ಶುರು ಲೆಕ್ಕಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಗಟ್ಟೆ ಸಮೀಕ್ಷೆಯ ಮಾಹಿತಿ ಹಾಗೂ ಮತ ಎಣಿಕೆ ಮೂಡಿಸಿರುವ ಕುತೂಹಲದ ಮಧ್ಯೆಯೇ, ಅಧಿಕಾರ ಹಿಡಿಯುವರು ಯಾರು? ಅತಂತ್ರ ಪರಿಸ್ಥಿತಿ ಎದುರಾದರೆ ಯಾರ ಜತೆಗೆ ಕೈ ಗೂಡಿಸಬೇಕು? ಯಾರನ್ನು ಸೆಳೆಯಲು 'ಆಪರೇಷನ್' ಮೊರೆ ಹೋಗಬೇಕೆಂಬ ಲೆಕ್ಕಚಾರ ವಿವಿಧ ರಾಜಕೀಯ ಪಡಸಾಲೆಯಲ್ಲಿ ಚುರುಕುಗೊಂಡಿದೆ.

ತಮ್ಮದೇ ಪಕ್ಷ ಅಧಿಕಾರ ಹಿಡಿಯಲಿದೆ ಎಂದು ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಬಹಿರಂಗದಲ್ಲಿ ಬಲವಾಗಿ ಪ್ರತಿಪಾದಿಸುತ್ತಿದ್ದಾರೆ. ಮತ ಚಲಾವಣೆಯ ಬಳಿಕ, ಮತಗಟ್ಟೆ ಹಂತದಿಂದ ನಾಯಕರು ತರಿಸಿಕೊಂಡ 'ಮತಗಂಟಿ'ನ ಅಂಕಿ ಅಂಶಗಳು ಎಷ್ಟರಮಟ್ಟಿಗೆ ತಮ್ಮನ್ನೇ ಅಧಿಕಾರದ ದಡಕ್ಕೆ ತಲುಪಿಸಲಿವೆ ಎಂಬುದಕ್ಕೆ ಪುರಾವೆ ಒದಗಿಸುವಂತಿಲ್ಲ. ಹೀಗಾಗಿ, ಗುರುವಾರ ದಿನವಿಡೀ ಮುಂದಿನ ಕಾರ್ಯತಂತ್ರದ ಬಗ್ಗೆಯೇ ಪಕ್ಷಗಳ ನಾಯಕರು ಚರ್ಚೆಯಲ್ಲಿ ತೊಡಗಿದ್ದರು.

ತಾವು ಹೇಗೆ ಅಧಿಕಾರ ಹಿಡಿದೇ ತೀರುತ್ತೇವೆ ಎಂದು ಎರಡು ಪ್ರಮುಖ ಪಕ್ಷಗಳ ನಾಯಕರು ತಮ್ಮದೇ ತರ್ಕವನ್ನು ಮುಂದಿಡುತ್ತಿದ್ದಾರೆ. ಮತ್ತೆ ಬಹುಮತ ಪಡೆದು ಮುಖ್ಯಮಂತ್ರಿಯಾಗುವುದು ಖಚಿತ ಎನ್ನುತ್ತಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, 'ನನ್ನ ಷರತ್ತಿಗೆ ಒಪ್ಪುವವರ ಜತೆ ಮೈತ್ರಿಗೆ ಸಿದ್ಧ' ಎನ್ನುವ ಮೂಲಕ, ಕಾಂಗ್ರೆಸ್ ಮತ್ತು ಬಿಜೆಪಿಯವರಿಗೆ ಬಾಗಿಲು ತೆರೆದಿಟ್ಟಿದ್ದಾರೆ.

4ನೇ ಪುಟ ನೋಡಿ

ಮೇ 13 ಚುನಾವಣಾ ಫಲಿತಾಂಶ	224 ಒಟ್ಟು ಕ್ಷೇತ್ರಗಳು	113 ಸರ್ಕಾರ ರಚನೆಗೆ ಬೇಕಾದ ಸಂಖ್ಯೆ	73.19% ಮತದಾನದ ಪ್ರಮಾಣ

'ಬಹುಮತ ಖಚಿತ ಆಪರೇಷನ್‌ಗೂ ಅಣಿ'

ಡಿ.ಕೆ. ಶಿವಕುಮಾರ್ ಹೇಳುತ್ತಿರುವಂತೆ 141 ಸ್ಥಾನ ಅಲ್ಲದಿದ್ದರೂ 120ರ ಗಡಿ ದಾಟುವ ನಿರೀಕ್ಷೆಯಲ್ಲಿ ಕಾಂಗ್ರೆಸ್ ಪಕ್ಷದ ಮುಂಚೂಣಿ ನಾಯಕರು ಇದ್ದಾರೆ.

ಮತಗಟ್ಟೆ ಸಮೀಕ್ಷೆ ಹಾಗೂ ಮತಗಟ್ಟೆ ಹಂತದಿಂದ ತರಿಸಿಕೊಂಡ ಮಾಹಿತಿ ಆಧರಿಸಿ ಪಕ್ಷದ ನಾಯಕರ ಲೆಕ್ಕಾಚಾರಗಳು ಬದಲಾಗುತ್ತಿವೆ. ಅತಂತ್ರದ ಪರಿಸ್ಥಿತಿ ಸೃಷ್ಟಿಯಾದರೆ ಏನು ಮಾಡಬೇಕು ಎಂಬ ಬಗ್ಗೆ ಪಕ್ಷದ ನಾಯಕರು ಚರ್ಚೆ ನಡೆಸಿದ್ದಾರೆ. 115ರ ಆಸುಪಾಸಿನಲ್ಲೇ ನಿಂತರೆ, 'ಆಪರೇಷನ್ ಕಮಲ'ದಿಂದ ಬಂದೊದಗುವ ಸಂಕಷ್ಟವನ್ನು ನಿಭಾಯಿಸುವುದು, ಗೆದ್ದವರನ್ನು ಹಿಡಿದಿಡುವುದು ಹೇಗೆ ಎಂಬ ತಂತ್ರಗಾರಿಕೆಯನ್ನೂ ಈಗಿನಿಂದಲೇ ರೂಪಿಸಲು ಆರಂಭಿಸಿದ್ದಾರೆ.

ಪಕ್ಷದ ನಾಯಕರಿಗೆ ಲಭ್ಯ ಮಾಹಿತಿಯಂತೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ಬಿಜೆಪಿ ತಂತ್ರಗಾರಿಕೆ ಹೆಣೆದರೆ, ಅದಕ್ಕೆ ಮೊದಲೇ 'ಆಪರೇಷನ್ ಹಸ್ತ'ದ ಕಾರ್ಯಾಚರಣೆ ನಡೆಸುವುದು ಕಾಂಗ್ರೆಸ್ ನಾಯಕರ ಆಲೋಚನೆ. ಅದರ ಜತೆಗೆ, ಗೆದ್ದ ಪಕ್ಷೇತರರು, ಗಾಲಿ ಜನಾರ್ದನ ರೆಡ್ಡಿಯವರ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಹುರಿಯಾಳಗಳನ್ನು ಸೆಳೆಯುವುದು ಕಾಂಗ್ರೆಸ್ ಕಾರ್ಯತಂತ್ರದ ಭಾಗ.

ಬಹುಮತ ಸಿಗದಿದ್ದರೆ 'ಆಪರೇಷನ್ ಕಮಲ'

ಸರ್ಕಾರ ರಚಿಸುವಷ್ಟು ಬಹುಮತ ಸಿಗಬಹುದು. ಸಿಗದೇ ಇದ್ದರೆ ಕಾಂಗ್ರೆಸ್ ಅಧಿಕಾರಕ್ಕೆ ಬರದಂತೆ ತಡೆಯಲು ಮೈತ್ರಿಯ ಮೊರೆ ಹೋಗುವುದು ಬಿಜೆಪಿ ನಾಯಕರ ಅಂದಾಜು.

ಕಾಂಗ್ರೆಸ್ ಪಕ್ಷ ಹೆಚ್ಚೆಂದರೆ 105ರ ಆಸುಪಾಸಿನಲ್ಲಿ ಸಾಧನೆ ಮಾಡಬಹುದು. ತಮ್ಮ ಪಕ್ಷ 90ರ ಗಡಿ ದಾಟಿ, ನೂರರ ಅಂಚಿಗೆ ತಲುಪಿದರೆ ಕಾಂಗ್ರೆಸ್‌ಗೆ ತಡೆಯೊಡ್ಡುವ ಅವಕಾಶವನ್ನು ಬಿಟ್ಟುಕೊಡುವುದು ಬೇಡ. ಮುಖ್ಯಮಂತ್ರಿ ಸ್ಥಾನವನ್ನಾದರೂ ಕೊಟ್ಟು ಜೆಡಿಎಸ್‌ಗೆ ಮೈತ್ರಿ ಸರ್ಕಾರ ರಚಿಸುವ ಇರಾದೆ ಬಿಜೆಪಿ ನಾಯಕರ ಒಡಲಲ್ಲಿದೆ.


ದೇಶದ ಪ್ರಖ್ಯಾತ ಸಮೀಕ್ಷಾ ಸಂಸ್ಥೆಗಳು 2014, 2019ರ ಲೋಕಸಭೆ ಹಾಗೂ 2022ರಲ್ಲಿ ನಡೆದ ಚುನಾವಣೆಗಳಲ್ಲಿ ಬಿಜೆಪಿಗೆ ಹೆಚ್ಚಿನ ಸ್ಥಾನ ಬರುತ್ತದೆ ಎಂದು ಭವಿಷ್ಯ ನುಡಿದಿರಲಿಲ್ಲ. ಮೋದಿಯವರಿಗಾಗಿ ಬೂತ್ ಸಮಿತಿ ಕಾರ್ಯಕರ್ತರು ಮತ್ತು ಪೇಜ್ ಪ್ರಮುಖರು ಚುನಾವಣೆ ಎಂಬ ಯುದ್ಧದಲ್ಲಿ ಪ್ರತಿ ಬೂತ್‌ನಲ್ಲೂ ಗೆಲ್ಲಲಿದ್ದಾರೆ. ಬಿಜೆಪಿಗೆ ಪೂರ್ಣ ಬಹುಮತ ಸಿಗಲಿದೆ ಎಂದು ಬಿ.ಎಲ್. ಸಂತೋಷ್ ಟ್ವೀಟ್ ಮಾಡಿದ್ದಾರೆ. ಆದರೆ, ಪಕ್ಷದ ನಾಯಕರಲ್ಲಿ ಅಂತಹ ವಿಶ್ವಾಸದ ನಗೆ ಇಲ್ಲ. '90 ಸ್ಥಾನಗಳಲ್ಲಿ ಗೆಲ್ಲಬಹುದು. ಕಾಂಗ್ರೆಸ್ 115 ಗೆದ್ದರೂ ನಮ್ಮದೇ ಸರ್ಕಾರ. ಆಪರೇಷನ್ ದಾರಿ ಇದೆಯಲ್ಲ' ಎಂದು ಸಚಿವರೇ ಹೇಳುತ್ತಿದ್ದಾರೆ.

ಮೈತ್ರಿಯ ದಾರಿ ತೆರೆದ ಕುಮಾರಸ್ವಾಮಿ

'ಅತಂತ್ರ ಫಲಿತಾಂಶ ಬಂದರೆ ಷರತ್ತುಗಳನ್ನು ಪೂರೈಸುವವರ ಜತೆ ಮೈತ್ರಿ' ಎನ್ನುವ ಮೂಲಕ ಎಚ್.ಡಿ.ಕುಮಾರಸ್ವಾಮಿ ಮೈತ್ರಿಯ ಬಾಗಿಲು ಮುಕ್ತವಾಗಿಸಿದ್ದಾರೆ.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, ಚುನಾವಣೋತ್ತರ ಸಮೀಕ್ಷೆಗಳು ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮುವ ಮಾಹಿತಿ ನೀಡಿವೆ. ಕೆಲ ಸಮೀಕ್ಷೆಗಳು ಜೆಡಿಎಸ್ ಬಲ ವೃದ್ಧಿಸುವ ಕುರಿತೂ ಹೇಳಿವೆ. ಪಕ್ಷ 50 ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದೆ' ಎಂದರು.

'2018ರಲ್ಲಿ 104 ಸ್ಥಾನ ಗಳಿಸಿದ್ದ ಬಿಜೆಪಿ ಬದಲು ಕಾಂಗ್ರೆಸ್ ಜತೆ ಹೋಗಿದ್ದರಿಂದಾಗಿ ಆಪರೇಷನ್ ಕಮಲ ನಡೆಸಲು ಸಾಧ್ಯವಾಯಿತು. ಈ ಬಾರಿ 105ರ ಗಡಿಯನ್ನು ಕಾಂಗ್ರೆಸ್ ದಾಟಲಿದೆಯಾದರೂ, ಬಹುಮತ ಸಿಗುವುದಿಲ್ಲ. ಒಂದು ವೇಳೆ ಸಿಕ್ಕರೆ ತಟಸ್ಥ. ನಮ್ಮ ಪಕ್ಷ 50ಸ್ಥಾನ ಗಳಿಸಿದ್ದೆ ಆದರೆ, ಬಿಜೆಪಿ ಬಲ 75–80ರೊಳಗೆ ಸೀಮಿತವಾಗುತ್ತದೆ. ಅವರು ಆಪರೇಷನ್ ಮಾಡಬೇಕಾದರೆ 38–40 ಶಾಸಕರನ್ನು ಸೆಳೆಯಬೇಕಾಗುತ್ತದೆ. ಅದು ಕಷ್ಟ. ಕಡಿಮೆ ಸಂಖ್ಯೆಯಿರುವ ಬಿಜೆಪಿ ಜತೆ ಹೋದರೆ, ಕಾಂಗ್ರೆಸ್‌ನವರು 10 ಜನರನ್ನು ಆಪರೇಷನ್ ಮಾಡಿದರೂ ಸರ್ಕಾರ ಉಳಿಯುವುದಿಲ್ಲ. ಅತಿ ದೊಡ್ಡ ಪಕ್ಷದ ಜತೆಗೆ ಹೋಗುವುದು ಸೂಕ್ತ' ಎಂಬ ಚರ್ಚೆ ಜೆಡಿಎಸ್ ಪಡಸಾಲೆಯಲ್ಲಿ ನಡೆದಿದೆ.



ಆಸ್ಟ್ರೇಲಿಯಾದ ಲಿವರ್‌ಪೂಲ್ ಕ್ಷೇತ್ರದಲ್ಲಿ ಸಂಸತ್ ಸದಸ್ಯರಾಗಿ ಆಯ್ಕೆಯಾಗಿರುವ ಕೊಡಗಿನ ಚರಿಷ್ಮಾ ಕಲಿಯಂಡ ಅವರು ಮೈಸೂರು ರೇಷ್ಮೆ ಸೀರೆಯನ್ನು ಕೊಡವ ಶೈಲಿಯಲ್ಲಿ ಧರಿಸಿ ಈಚೆಗೆ ಪ್ರಮಾಣ ವಚನ ಸ್ವೀಕರಿಸಿದರು

3 ತಿಂಗಳ ಕಾಲಾವಕಾಶ

ಹೆಚ್ಚಿನ ಪಿಂಚಣಿಗೆ ಹೆಚ್ಚುವರಿ ಮೊತ್ತ

ನವದೆಹಲಿ (ಪಿಟಿಐ): ನೌಕರರ ಭವಿಷ್ಯನಿಧಿ ಸಂಘಟನೆಯ (ಇಪಿಎಫ್‌ಒ) ಪಿಂಚಣಿ ಯೋಜನೆ (ಇಪಿಎಸ್) ಅಡಿಯಲ್ಲಿ ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಿದವರಿಗೆ, ಹೆಚ್ಚುವರಿ ವಂತಿಗೆ ನೀಡುವುದಕ್ಕೆ ಅಥವಾ ಬಾಕಿ ಮೊತ್ತ ಪಾವತಿಗೆ ಒಪ್ಪಿಗೆ ನೀಡಲು ಮೂರು ತಿಂಗಳ ಕಾಲಾವಕಾಶ ಸಿಗಲಿದೆ.

ಹೆಚ್ಚಿನ ಪಿಂಚಣಿಗೆ ಉದ್ಯೋಗದಾತರ ಜೊತೆಗೂಡಿ ಜಂಟಿ ಹೇಳಿಕೆ ಸಲ್ಲಿಸಲು ಇಪಿಎಫ್‌ಒ ಚಂದಾದಾರರಿಗೆ ಜೂನ್ 26ರವರೆಗೆ ಸಮಯಾವಕಾಶ ಇದೆ. ಹೆಚ್ಚಿನ ಪಿಂಚಣಿಗೆ ಆಯ್ಕೆ ಮಾಡಿಕೊಂಡವರು ಕೊಡಬೇಕಿರುವ ಹೆಚ್ಚುವರಿ ಮೊತ್ತವನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ ಹಾಗೂ ಅದನ್ನು ಪಾವತಿ ಮಾಡುವುದು ಹೇಗೆ ಎಂಬ ಬಗ್ಗೆ ಗೊಂದಲ ಇತ್ತು.

ಹೆಚ್ಚುವರಿ ಕೊಡಬೇಕಿರುವ ಮೊತ್ತ ಎಷ್ಟು ಎಂಬುದನ್ನು ಅಧಿಕಾರಿಗಳು ಲೆಕ್ಕಹಾಕಲಿದ್ದಾರೆ. ಇದನ್ನು ಅರ್ಜಿದಾರರಿಗೆ ತಿಳಿಸಲಾಗುತ್ತದೆ. 'ಪಿಂಚಣಿ ಪಡೆಯುವವರಿಗೆ/ಸದಸ್ಯರಿಗೆ ಹೆಚ್ಚಿನ ಮೊತ್ತ ವರ್ಗಾವಣೆ ಮಾಡುವುದಕ್ಕೆ ಸಮ್ಮತಿ ಸಲ್ಲಿಸಲು 3 ತಿಂಗಳ ಅವಕಾಶ ನೀಡಬಹುದು' ಎಂದು ಇಪಿಎಫ್‌ಒ ಹೇಳಿದೆ.



ಶಿವಮೊಗ್ಗದ ಚೋರಡಿ ಬಳಿ ನಡೆದ ಅಪಘಾತದಲ್ಲಿ ನುಜ್ಜುಗುಜ್ಜಾದ ಬಸ್

ಪ್ರತ್ಯೇಕ ಅಪಘಾತ: 5 ಸಾವು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ/ಕಡೂರು: ರಾಜ್ಯದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಡೂರು ಜಿಲ್ಲೆಯಲ್ಲಿ ಗುರುವಾರ ಸಂಭವಿಸಿದ ಪ್ರತ್ಯೇಕ ಅಪಘಾತದಲ್ಲಿ ಐದು ಮಂದಿ ಮೃತಪಟ್ಟಿದ್ದಾರೆ.


ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಮತಿಘಟ್ಟ ಬಳಿ ಟೆಂಪೊ ಟ್ರಾವೆಲರ್ ಮತ್ತು ಕಾರಿನ ನಡುವೆ ಸಂಭವಿಸಿದ ಅಫಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ. ಬೆಂಗಳೂರು ರಾಜಾಜಿನಗರದ ಗಿರಿಧರ (53), ಮಯಾಂಕ್ (3) ಸ್ಥಳದಲ್ಲಿ ಮೃತಪಟ್ಟವರು. ತೀವ್ರ ಗಾಯಗೊಂಡಿದ್ದ ಗಿರಿಧರ ಅವರ ಸಂಬಂಧಿ ಶೋಭಾ (50) ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದೊಯ್ಯುವ ವೇಳೆ ಮೃತಪಟ್ಟಿದ್ದಾರೆ.

ಗಿರಿಧರ ಅವರು ಮದುವೆ ಕಾರ್ಯಕ್ರಮಕ್ಕೆಂದು ಹೊನ್ನಾವರಕ್ಕೆ ತೆರಳುತ್ತಿದ್ದರು. ಈ ಸಮಯ ಮತಿಘಟ್ಟದ ಕುರುಬರಹಳ್ಳಿ ಗೇಟ್ ಬಳಿ ಟೆಂಪೊ ಟ್ರಾವೆಲರ್‌ಗೆ ಮುಖಾಮುಖಿ ಡಿಕ್ಕಿಯಾಗಿ ಅಫಘಾತ ಸಂಭವಿಸಿದೆ. ಟಿ.ಟಿ. ಗಾಡಿಯಲ್ಲಿದ್ದ ಕೇರಳ ಮೂಲದ ಏಳು ಪ್ರವಾಸಿಗರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಿವಮೊಗ್ಗ ತಾಲ್ಲೂಕಿನ ಕುಂಸಿ ಪೊಲೀಸ್ ಠಾಣೆ ವ್ಯಾಪ್ತಿಯ ಚೋರಡಿ ಬಳಿ ಗುರುವಾರ ಸಂಜೆ ಖಾಸಗಿ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಇಬ್ಬರು ಸಾವಿಗೀಡಾಗಿದ್ದಾರೆ.

4ನೇ ಪುಟ ನೋಡಿ

'ಸುಪ್ರೀಂ' ಹೇಳಿದ್ದೇನು?



ಮಹಾರಾಷ್ಟ್ರ ಪ್ರಕರಣ

1 ಮಹಾರಾಷ್ಟ್ರದ ಹಿಂದಿನ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಬಹುಮತ ಸಾಬೀತುಪಡಿಸುವಂತೆ ಅಂದಿನ ರಾಜ್ಯಪಾಲ ಭಗತ್ ಸಿಂಗ್ ಕೊಶಿಯಾರಿ ಅವರು ತಮ್ಮ ವಿವೇಚನೆ ಬಳಸಿ ನೀಡಿರುವ ಆದೇಶ ಕಾನೂನುಬದ್ಧವಾಗಿರಲಿಲ್ಲ

2 ಸ್ವಯಂಪ್ರೇರಣೆಯಿಂದ ಸಲ್ಲಿಸಿದ ರಾಜೀನಾಮೆಯನ್ನು ಈ ನ್ಯಾಯಾಲಯವು ರದ್ದುಗೊಳಿಸಲು ಸಾಧ್ಯವಿಲ್ಲ. ಠಾಕ್ರೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದನ್ನು ತಪ್ಪಿಸಿದ್ದರೆ, ಅವರ ನೇತೃತ್ವದ ಸರ್ಕಾರವನ್ನು ಮರುಸ್ಥಾಪಿಸುವ ಕುರಿತು ಪರಿಗಣಿಸಬಹುದಿತ್ತು

3 ರಾಜ್ಯಪಾಲರು ರಾಜ್ಯ ಸರ್ಕಾರದ ನಾಮಸೂಚಕ ನಾಯಕರಾಗಿದ್ದಾರೆ. ಅವರು ಸಾಂವಿಧಾನಿಕ ಹುದ್ದೆ ಹೊಂದಿದ್ದಾರೆ. ಅವರು ತಮ್ಮ ಸಾಂವಿಧಾನಿಕ ಅಧಿಕಾರದ ಮಿತಿಯನ್ನು ಅರಿತಿರಬೇಕು. ಅವರು ತಮ್ಮ ವ್ಯಾಪ್ತಿಯಲ್ಲಿ ಇರದ ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ

ದೆಹಲಿ ಪ್ರಕರಣ

1 ದೆಹಲಿ ಸರ್ಕಾರಕ್ಕೆ ನಾಗರಿಕ ಸೇವಾ ಅಧಿಕಾರಿಗಳ ಮೇಲೆ ಸಂಪೂರ್ಣ ನಿಯಂತ್ರಣವಿರಲಿದೆ. ಅದು ಆ ಸರ್ಕಾರಕ್ಕೆ ದತ್ತವಾದ ಸಂವಿಧಾನಾತ್ಮಕ ಹಕ್ಕು

2 ಪ್ರಜಾಪ್ರಭುತ್ವದ ಮಾರ್ಗದಲ್ಲಿ ಚುನಾಯಿತಗೊಂಡಿರುವ ಸರ್ಕಾರ ತನ್ನ ಆಡಳಿತದ ಮೇಲೆ ನಿಯಂತ್ರಣ ಹೊಂದಿರಬೇಕು ಮತ್ತು ಈ ಆಡಳಿತ ಸರ್ಕಾರದ ಸೇವೆಗಾಗಿ ನಿಯುಕ್ತಿಗೊಂಡಿರುವ ಹಲವಾರು ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡಿರುತ್ತದೆ

3 ದೆಹಲಿ ಸರ್ಕಾರ ಅಧಿಕಾರಿಗಳ ನೇಮಕಾತಿಯಲ್ಲಿ ಸಕ್ರಿಯವಾಗಿರದೆ ಇದ್ದರೂ ಅವರ ಮೇಲೆ ಅದಕ್ಕೆ ನಿಯಂತ್ರಣ ಇರುತ್ತದೆ. ಜನರಿಂದ ಆಯ್ಕೆಯಾದ ಸರ್ಕಾರಕ್ಕೆ ಅವರ ವ್ಯಾಪ್ತಿಯಲ್ಲಿನ ಅಧಿಕಾರಿಗಳನ್ನು ನಿಯಂತ್ರಿಸುವ ಅಧಿಕಾರ ನೀಡದಿದ್ದರೆ ಸಾಮೂಹಿಕ ಹೊಣೆಗಾರಿಕೆ ಸಿದ್ಧಾಂತ ಅರ್ಥ ಕಳೆದುಕೊಳ್ಳಲಿದೆ

'ರಾಜ್ಯಪಾಲರಿಂದ ಪ್ರಮಾದ'

ಪ್ರಜಾವಾಣಿ ವಾರ್ತೆ

ನವದೆಹಲಿ: ಯಾವುದೇ ರಾಜ್ಯದ ರಾಜ್ಯಪಾಲರಿಗೆ ರಾಜ್ಯದ ರಾಜಕೀಯ ಬಿಕ್ಕಟ್ಟಿನಲ್ಲಿ, ಪಕ್ಷಗಳ ನಡುವಿನ ಅಥವಾ ಪಕ್ಷಗಳ ಆಂತರಿಕ ಕಲಹದಲ್ಲಿ ಮಧ್ಯಪ್ರವೇಶಿಸುವ ಅಧಿಕಾರ ಇಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಸ್ಪಷ್ಟಪಡಿಸಿದೆ.

ಮಹಾ ವಿಕಾಸ ಅಘಾಡಿ ಸರ್ಕಾರದ ಪತನಕ್ಕೆ ಸಂಬಂಧಿಸಿದ ಪ್ರಕರಣ ಕುರಿತು ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಸಾಂವಿಧಾನಿಕ ಪೀಠ ತನ್ನ ತೀರ್ಪಿನಲ್ಲಿ ರಾಜ್ಯಪಾಲರ ಪಾತ್ರದ ಕುರಿತು ನಿಖರವಾಗಿ ವ್ಯಾಖ್ಯಾನಿಸಿದೆ.

ಜತೆಗೆ, ಉದ್ಧವ್ ಠಾಕ್ರೆ ಬಹುಮತ ಸಾಬೀತುಪಡಿಸದೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಏಕನಾಥ ಶಿಂದೆ ಅವರಿಗೆ ಸರ್ಕಾರ ರಚಿಸಲು 2022ರ ಜೂನ್ 30ರಂದು ರಾಜ್ಯಪಾಲರು ನೀಡಿದ್ದ ಆಹ್ವಾನ ಸಮರ್ಥನೀಯ ಎಂದೂ ಪೀಠ ಹೇಳಿದೆ.



ನಾನು ರಾಜೀನಾಮೆ ನೀಡಿದ್ದು ಕಾನೂನಾತ್ಮಕವಾಗಿ ತಪ್ಪಿರಬಹುದು. ಆದರೆ, ನೈತಿಕ ನೆಲೆಗಟ್ಟಿನಲ್ಲಿ ಸ್ಥಾನ ತೊರೆದಿದ್ದೆ

ಉದ್ಧವ್ ಠಾಕ್ರೆ
ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ



ಇದು ಪ್ರಜಾಪ್ರಭುತ್ವದ ಹಾಗೂ ಅದರ ಪ್ರಕ್ರಿಯೆಗೆ ದೊರೆತ ಗೆಲುವು. ಮಹಾ ವಿಕಾಸ ಅಘಾಡಿಯ ಪಿತೂರಿಗೆ ಇಂದು ಸೋಲಾಗಿದೆ.

ದೇವೇಂದ್ರ ಫಡಣವೀಸ್
ಮಹಾರಾಷ್ಟ್ರ ಉಪ ಮುಖ್ಯಮಂತ್ರಿ

6ನೇ ಪುಟ ನೋಡಿ

'ದೆಹಲಿ ಸರ್ಕಾರಕ್ಕೇ ಅಧಿಕಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾರ್ವಜನಿಕ ಭದ್ರತೆ, ಪೊಲೀಸ್ (ಕಾನೂನು ಮತ್ತು ಸುವ್ಯವಸ್ಥೆ) ಹಾಗೂ ಭೂಮಿಯ ವಿಷಯಗಳನ್ನು ಹೊರತುಪಡಿಸಿ ದೆಹಲಿ ಸರ್ಕಾರವು ಇತರೆಲ್ಲ ಸೇವೆಗಳಿಗೆ ಸಂಬಂಧಿಸಿದ ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರವನ್ನು ಹೊಂದಿದೆ ಎಂದು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವು ಗುರುವಾರ ಸರ್ವಾನುಮತದ ತೀರ್ಪು ನೀಡಿದೆ. ಈ ಮಹತ್ವದ ತೀರ್ಪಿನಿಂದಾಗಿ ಕೇಂದ್ರ ಸರ್ಕಾರ ಹಾಗೂ ದೆಹಲಿ ಸರ್ಕಾರದ ನಡುವಿನ ಅಧಿಕಾರ ವ್ಯಾಪ್ತಿಯ ಸಂಘರ್ಷದಲ್ಲಿ ಎಎಪಿ ಸರ್ಕಾರದ ಕೈಮೇಲಾಗಿದೆ.

ಜನರಿಂದ ಆಯ್ಕೆಯಾದ ಚುನಾಯಿತ ಸರ್ಕಾರವು ಆಡಳಿತಾತ್ಮಕ ವಿಷಯಗಳ ಮೇಲೆ ನಿಯಂತ್ರಣ ಹೊಂದಿರಬೇಕು ಎಂದು ಅಭಿಪ್ರಾಯಪಟ್ಟಿರುವ ಮುಖ್ಯ ನ್ಯಾಯಮೂರ್ತಿ (ಸಿ.ಜೆ.) ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಸಾಂವಿಧಾನಿಕ ಪೀಠ, ದೆಹಲಿ ಕೇಂದ್ರಾಡಳಿತ ಪ್ರದೇಶ ವಿಶೇಷ ಅಗತ್ಯತೆಗಳನ್ನು ಒಳಗೊಂಡಿದೆ ಎಂದೂ ಹೇಳಿದೆ.

6ನೇ ಪುಟ ನೋಡಿ

'ಪ್ರಜಾಪ್ರಭುತ್ವದ ಗೆಲುವು'




ಅರವಿಂದ್ ಕೇಜ್ರಿವಾಲ್

'ದೆಹಲಿ ಜನತೆಗೆ ನ್ಯಾಯ ಒದಗಿಸಿದ ಸುಪ್ರೀಂ ಕೋರ್ಟ್‌ಗೆ ಹೃತ್ಪೂರ್ವಕ ಧನ್ಯವಾದಗಳು. ಈ ನಿರ್ಧಾರದಿಂದ ದೆಹಲಿ ಅಭಿವೃದ್ಧಿಯ ವೇಗ ಹಲವು ಪಟ್ಟು ಹೆಚ್ಚಲಿದೆ. ಈ ತೀರ್ಪು ಪ್ರಜಾಪ್ರಭುತ್ವಕ್ಕೆ ಸಂದ ಜಯ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆ.

'ಆಡಳಿತ ಎಂದರೆ ಜನಸೇವೆಯೇ ಹೊರತು ರಾಜಕೀಯವಲ್ಲ. ದೆಹಲಿಯ ಆಡಳಿತವನ್ನು ಹೈಜಾಕ್ ಮಾಡುವ ಮೂಲಕ ಆಡಳಿತವನ್ನು ಸ್ಥಗಿತಗೊಳಿಸುವ ಕೇಂದ್ರ ಸರ್ಕಾರದ ಪ್ರಯತ್ನ ವಿಫಲವಾಗಿದೆ. ದೆಹಲಿ ಗೆದ್ದಿದೆ. ಪ್ರಜಾಪ್ರಭುತ್ವವೂ ಗೆದ್ದಿದೆ' ಎಂದು ಎಎಪಿಯ ರಾಜ್ಯಸಭಾ ಸದಸ್ಯ ರಾಘವ ಛಡ್ಡಾ ಪ್ರತಿಕ್ರಿಯಿಸಿದ್ದಾರೆ.

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಇಮ್ರಾನ್ ಬಿಡುಗಡೆ

ಇಸ್ಲಾಮಾಬಾದ್ (ಪಿಟಿಐ): 'ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಂಧನ ಕಾನೂನುಬಾಹಿರ' ಎಂದು ಸುಪ್ರೀಂ ಕೋರ್ಟ್ ಘೋಷಿಸಿದ್ದು, ತಕ್ಷಣ ಬಿಡುಗಡೆ ಮಾಡುವಂತೆ ಆದೇಶಿಸಿದೆ. ಈ ಬೆಳವಣಿಗೆಯಿಂದಾಗಿ ಇಮ್ರಾನ್ ಖಾನ್ ನಿರಾಳರಾಗಿದ್ದಾರೆ.

ಅಲ್ ಖಾದಿರ್ ಟ್ರಸ್ಟ್ ಪ್ರಕರಣದಲ್ಲಿ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಇಮ್ರಾನ್ ಖಾನ್ ಅವರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಉಮರ್ ಅತ ಬಂದಿಯಾಲ್ ನೇತೃತ್ವದ ಮೂವರು ಸದಸ್ಯರ ಪೀಠ ನಡೆಸಿತು.

ಇಸ್ಲಾಮಾಬಾದ್‌ನಲ್ಲಿರುವ ಹೈಕೋರ್ಟ್ ಆವರಣದಿಂದ ಇಮ್ರಾನ್ ಖಾನ್ ಅವರನ್ನು ಬಂಧಿಸಿದ್ದ ಭದ್ರತಾ ಸಿಬ್ಬಂದಿ ನಡೆಗೆ ತೀವ್ರ ಆಕ್ಷೇಪವನ್ನು ಪೀಠ ವ್ಯಕ್ತಪಡಿಸಿತು. ಸ್ಥಳೀಯ ಕಾಲಮಾನ 4.30ರ ಒಳಗೆ ತನ್ನ ಮುಂದೆ ಹಾಜರುಪಡಿಸಬೇಕು ಎಂದು ರಾಷ್ಟ್ರೀಯ ಭ್ರಷ್ಟಾಚಾರ ನಿಗ್ರಹ ಮಂಡಳಿ (ಎನ್‌ಎಬಿ) ಅಧಿಕಾರಿಗಳಿಗೆ ನಿರ್ದೇಶಿಸಿತ್ತು.

ಅದರಂತೆ ಎನ್‌ಎಬಿ ಅಧಿಕಾರಿಗಳು ಬಿಗಿ ಭದ್ರತೆಯಲ್ಲಿ ಇಮ್ರಾನ್ ಖಾನ್ ಅವರನ್ನು ಪೀಠದ ಎದುರು ಹಾಜರುಪಡಿಸಿದರು.

11ನೇ ಪುಟ ನೋಡಿ

‘ಅಂಬಾರಿ ಉತ್ಸವ’ ಬಸ್‌ಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಹೊಸದಾಗಿ ಆರಂಭಿಸಿರುವ ‘ಅಂಬಾರಿ ಉತ್ಸವ’ ಸ್ಲೀಪರ್ ಬಸ್‌ಗಳಿಗೆ ಭಾರಿ ಬೇಡಿಕೆ ಬಂದಿದ್ದು, ಪ್ರತಿನಿತ್ಯ ಭರ್ತಿಯಾಗಿ ಕಾರ್ಯಾಚರಣೆ ಮಾಡುತ್ತಿವೆ.

ಒಟ್ಟು 20 ಬಸ್‌ಗಳ ಕಾರ್ಯಾಚರಣೆಯನ್ನು ಕೆಎಸ್‌ಆರ್‌ಟಿಸಿ ಆರಂಭಿಸಿದ್ದು, ಒಂಬತ್ತು ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಪ್ರತಿನಿತ್ಯ ಸರಾಸರಿ 4,700 ಕಿಲೋ ಮೀಟರ್‌ಗೂ ಅಧಿಕ ಕಾರ್ಯಾಚರಣೆ ಮಾಡುತ್ತಿವೆ.

ಐಷಾರಾಮಿ ಬಸ್‌ನಲ್ಲಿ ಅರಾಮದಾಯಕ ಪ್ರಯಾಣಕ್ಕೆ ಪ್ರಯಾಣಿಕರು ಒಲವು ತೋರಿಸುತ್ತಿದ್ದು, ಎಲ್ಲ ಬಸ್‌ಗಳು ಭರ್ತಿಯಾಗಿ ಕಾರ್ಯಾಚರಣೆ ಮಾಡುತ್ತಿವೆ. ಫೆಬ್ರುವರಿ 26ರಿಂದ ಕಾರ್ಯಾಚರಣೆ ಆರಂಭಿಸಿದ್ದು, ಪ್ರತಿ ಕಿಲೋ ಮೀಟರ್‌ಗೆ ಸರಾಸರಿ ₹78.15 ವರಮಾನ ಸಂಗ್ರಹವಾಗುತ್ತಿದೆ. ಈವರೆಗೆ ₹4 ಕೋಟಿಗೂ ಅಧಿಕ ವರಮಾನವನ್ನು ನಿಗಮಕ್ಕೆ ತಂದುಕೊಟ್ಟಿವೆ.

ಬೆಂಗಳೂರಿನಿಂದ ಎರ್ನಾಕುಲಂ, ತ್ರಿಶ್ಶೂರು, ಹೈದರಾಬಾದ್, ಪಣಜಿ, ಚೆನ್ನೈ ಮತ್ತು ಮುರುಡೇಶ್ವರಕ್ಕೆ ಬಸ್‌ಗಳು ನಿತ್ಯ ಕಾರ್ಯಾಚರಣೆ ಮಾಡುತ್ತಿವೆ.

‘ದೂರದ ಊರುಗಳಿಗೆ ತೆರಳಲು ಪ್ರಯಾಣಿಕರು ಸ್ಲೀಪರ್ ಬಸ್‌ಗಳನ್ನು ಹೆಚ್ಚಾಗಿ ಬಳಕೆ ಮಾಡುತ್ತಿದ್ದಾರೆ. ಅಂಬಾರಿ ಉತ್ಸವ ಬಸ್‌ಗಳು ನಿಗಮಕ್ಕೆ ವರಮಾನ ತಂದುಕೊಡುತ್ತಿವೆ. ಸ್ಲೀಪರ್ ಬಸ್‌ಗಳಿಗೆ ಬೇಡಿಕೆ ಇದೆ ಎಂಬುದು ಇದರಿಂದ ಅರ್ಥವಾಗಿದೆ. ಮುಂದಿನ ದಿನಗಳಲ್ಲಿ ಖರೀದಿಸುವ ಹೊಸ ಐಷಾರಾಮಿ ಬಸ್‌ಗಳನ್ನು ಸ್ಲೀಪರ್ ಸೇವೆಗಾಗಿಯೇ ಬಳಕೆ ಮಾಡಲಾಗುವುದು’ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದರು.

ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆಗೂ ಪ್ರಯಾಣಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದು ಅವರು ವಿವರಿಸಿದರು.

ಬಿಎಂಟಿಸಿಗೆ ಒಂದೇ ದಿನ ₹8 ಕೋಟಿ ವರಮಾನ

ಮತದಾನದ ಹಿಂದಿನ ದಿನ ಮತ್ತು ಮರುದಿನ ಹೊರ ಜಿಲ್ಲೆಗಳಲ್ಲೂ ಕಾರ್ಯಾಚರಣೆ ಮಾಡಿದ ಬಿಎಂಟಿಸಿ ಬಸ್‌ಗಳು, ಜನರಿಗೆ ಅನುಕೂಲ ಕಲ್ಪಿಸುವ ಜತೆಗೆ ದಾಖಲೆಯ ವರಮಾನ ಸಂಗ್ರಹಿಸಿವೆ.

ಸಾಮಾನ್ಯವಾಗಿ ದಿನಕ್ಕೆ ₹3 ಕೋಟಿಯಿಂದ ₹4 ಕೋಟಿ ತನಕ ವರಮಾನ ಸಂಗ್ರಹಿಸುವ ಬಿಎಂಟಿಸಿ, ಗುರುವಾರ ಒಂದೇ ದಿನ ₹8 ಕೋಟಿ ವರಮಾನ ಸಂಗ್ರಹಿಸಿ ದಾಖಲೆ ಬರೆದಿದೆ.

ಕೆಎಸ್‌ಆರ್‌ಟಿಸಿಯಲ್ಲಿ 8,100 ಬಸ್‌ಗಳಿದ್ದು, ಮತಯಂತ್ರಗಳನ್ನು ಕೊಂಡೊಯ್ಯಲು ಮತ್ತು ಪೊಲೀಸ್ ಸಿಬ್ಬಂದಿ ಕರೆದೊಯ್ಯಲು 3,700 ಬಸ್‌ಗಳನ್ನು ಚುನಾವಣಾ ಆಯೋಗ ಬಳಸಿಕೊಂಡಿತ್ತು. ಪ್ರಯಾಣಿಕರಿಗೆ ಆಗಲಿರುವ ಅನನುಕೂಲ ತಪ್ಪಿಸಲು ಹೊರ ಜಿಲ್ಲೆಗಳಿಗೆ ಬಿಎಂಟಿಸಿ ಬಸ್‌ಗಳ ಕಾರ್ಯಾಚರಣೆಗೂ ಅವಕಾಶ ನೀಡಿತ್ತು.

ಮತದಾನದ ಹಿಂದಿನ ದಿನ ಬಿಎಂಟಿಸಿಯ 550 ಮತ್ತು ಮರು ದಿನ 300 ಬಸ್‌ಗಳು ಹೊರ ಜಿಲ್ಲೆಗಳಿಗೆ ಕಾರ್ಯಾಚರಣೆ ಮಾಡಿವೆ. ವೋಲ್ವೊ ಮತ್ತು ಸಾಮಾನ್ಯ ಬಸ್‌ಗಳನ್ನೂ ಬಿಎಂಟಿಸಿ ಕಾರ್ಯಾಚರಣೆಗೆ ಇಳಿಸಿತ್ತು.

ಚುನಾವಣೆ ಪ್ರಚಾರ • ಸಂಚಾರ ನಿಯಮ ಉಲ್ಲಂಘನೆ • ಕ್ಯಾಮೆರಾದಲ್ಲಿ ಸೆರೆ

25 ದಿನ: 4.12 ಲಕ್ಷ ಪ್ರಕರಣ, ₹22.89 ಕೋಟಿ ದಂಡ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಿಧಾನಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಾಗಿ ಮತದಾನ ಮುಗಿಯುವವರೆಗೂ ನಗರದಲ್ಲಿ ಬಿರುಸಿನ ಪ್ರಚಾರ ನಡೆಸಿದ್ದ ರಾಜಕೀಯ ಪಕ್ಷಗಳ ಕಾರ್ಯಕರ್ತರು, ಹಲವು ಸಂಚಾರ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅವೆಲ್ಲ ದೃಶ್ಯಗಳು ಸಂಚಾರ ಪೊಲೀಸರ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಪ್ರಚಾರ ಮೆರವಣಿಗೆ, ಬೈಕ್ ರ‍್ಯಾಲಿ, ರೋಡ್ ಶೋ ಹಾಗೂ ಇತರೆ ಕಾರ್ಯಕ್ರಮಕ್ಕೆಂದು ರಸ್ತೆಗೆ ಇಳಿದಿದ್ದ ಬಹುತೇಕ ಕಾರ್ಯಕರ್ತರು, ಸಂಚಾರ ನಿಯಮ ಉಲ್ಲಂಘಿಸಿದ್ದಾರೆ. ಇದರ ಜೊತೆ, ಸಾರ್ವಜನಿಕರೂ ಹೆಚ್ಚಿನ ಸಂಖ್ಯೆಯಲ್ಲಿ ಸಂಚಾರ ನಿಯಮ ಮೀರಿದ್ದಾರೆ.

ಏಪ್ರಿಲ್ 15ರಿಂದ ಮೇ 10ರವರೆಗೆ 4.12 ಲಕ್ಷ ಪ್ರಕರಣಗಳು ದಾಖಲಾಗಿದ್ದು, ಸುಮಾರು ₹ 22.89 ಕೋಟಿ ದಂಡ ವಿಧಿಸಲಾಗಿದೆ.

ನೋಂದಣಿ ಸಂಖ್ಯೆ ಆಧರಿಸಿ ಹಲವು ವಾಹನಗಳ ಮೇಲೆ ಪ್ರಕರಣ ದಾಖಲಾಗಿದ್ದು, ಪೊಲೀಸರು ಕೆಲ ವಾಹನಗಳ ಮಾಲೀಕರ ಮೊಬೈಲ್‌ಗಳಿಗೆ ಈಗಾಗಲೇ ದಂಡದ ಸಂದೇಶ ರವಾನಿಸಿದ್ದಾರೆ.

‘ಅತೀ ವೇಗದ ಚಾಲನೆ, ಸಿಗ್ನಲ್ ಜಂಪ್, ಜೀಬ್ರಾ ಕ್ರಾಸಿಂಗ್, ಹೆಲ್ಮೆಟ್ ರಹಿತ ಚಾಲನೆ, ತ್ರಿಬಲ್ ರೈಡಿಂಗ್ ಹಾಗೂ ಚಾಲನೆ ವೇಳೆ ಮೊಬೈಲ್ ಬಳಕೆ ಉಲ್ಲಂಘನೆ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ಮಾಲೀಕರಿಗೆ ಸಂಪರ್ಕ ರಹಿತವಾಗಿ ದಂಡ ವಿಧಿಸಲು ನಗರದ ಹಲವಾರು ಜಂಕ್ಷನ್‌ಗಳಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಸಂಚಾರ ನಿರ್ವಹಣಾ ವ್ಯವಸ್ಥೆಯಡಿ (ಐಟಿಎಂಎಸ್) 250 ಕ್ಯಾಮೆರಾ ಅಳವಡಿಸಲಾಗಿದೆ. ಕೇಂದ್ರ ಸರ್ಕಾರದ ನಿರ್ಭಯಾ ನಿಧಿ ಯೋಜನೆಯಡಿ ಅಳವಡಿಸಿರುವ ‘ನೇತ್ರ’ ಕ್ಯಾಮೆರಾಗಳನ್ನೂ ಸಂಚಾರ ನಿಯಮ ಪ್ರಕರಣ ಪತ್ತೆಗಾಗಿ ಬಳಸಲಾಗುತ್ತಿದೆ.

ದಿನದ 24 ಗಂಟೆಯೂ ಸಕ್ರಿಯವಾಗಿರುವ ಕ್ಯಾಮೆರಾಗಳು, ನಿಯಮ ಉಲ್ಲಂಘಿಸುವವರ ಫೋಟೊ ಕ್ಲಿಕ್ಕಿಸಿ ಸರ್ವರ್‌ನಲ್ಲಿ ಸಂಗ್ರಹಿಸುತ್ತಿವೆ. ವಾಹನ ನೋಂದಣಿ ಸಂಖ್ಯೆ ಆಧರಿಸಿ ಐಟಿಎಂಎಸ್ ವ್ಯವಸ್ಥೆ ಮೂಲಕ ಮಾಲೀಕರಿಗೆ ದಂಡದ ಸಂದೇಶ ಹೋಗುತ್ತಿದೆ.

ನಿಯಮ ಉಲ್ಲಂಘನೆ ಗೊತ್ತಿದ್ದರೂ ಓಡಾಟ: ‘ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಹಾಗೂ ಇತರೆ ಪಕ್ಷಗಳ ಕಾರ್ಯಕರ್ತರು, ಕಾನೂನಿನ ಭಯವಿಲ್ಲದೇ ರಸ್ತೆಯಲ್ಲಿ ಸಂಚರಿಸಿದ್ದರು. ಕೆಲವರು, ಪಕ್ಷಗಳ ಧ್ವಜವನ್ನು ದ್ವಿಚಕ್ರ ವಾಹನಗಳ ಮೇಲೆ ಕಟ್ಟಿಕೊಂಡು ಹೆಲ್ಮೆಟ್ ಧರಿಸದೇ ಓಡಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಬಹುತೇಕ ಪೊಲೀಸರು, ಚುನಾವಣೆ ಕರ್ತವ್ಯದಲ್ಲಿದ್ದರು. ವೃತ್ತ ಹಾಗೂ ಪ್ರಮುಖ ರಸ್ತೆಗಳಲ್ಲಿ ಸಂಚಾರ ಸಿಬ್ಬಂದಿ ಕೊರತೆ ಇತ್ತು. ತಮಗೆ ದಂಡ ವಿಧಿಸುವುದಿಲ್ಲ ಮತ್ತು ಯಾರೂ ನೋಡುವುದಿಲ್ಲ ಎನ್ನುವ ಭಾವನೆಯಿಂದ ಬಹುತೇಕರು ನಿಯಮ ಉಲ್ಲಂಘಿಸಿದ್ದಾರೆ. ಸಿಬ್ಬಂದಿ ಇಲ್ಲದಿದ್ದರೂ ನಮ್ಮ ಕ್ಯಾಮೆರಾಗಳು ಕೆಲಸ ಮಾಡುತ್ತಿದ್ದವು. ಹೀಗಾಗಿಯೇ 25 ದಿನಗಳಲ್ಲಿ 4.12 ಲಕ್ಷ ಪ್ರಕರಣಗಳು ದಾಖಲಾಗಿವೆ’ ಎಂದರು.



ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರು ನಡೆಸಿದ್ದ ಬೈಕ್ ರ‍್ಯಾಲಿಯಲ್ಲಿ ಶಾಸಕ ಉದಯ್ ಗರುಡಾಚಾರ್ (ಹಿಂಬದಿ ಸವಾರ) ಹೆಲ್ಮೆಟ್ ಧರಿಸದೆ ಸ್ಕೂಟಿಯಲ್ಲಿ ಪ್ರಯಾಣಿಸಿದ್ದರು – ಪ್ರಜಾವಾಣಿ ಚಿತ್ರ

‘ಚಿಕ್ಕಪೇಟೆ ಅಭ್ಯರ್ಥಿ: ₹11,500 ದಂಡ’

‘ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬೈಕ್ ರ‍್ಯಾಲಿ ನಡೆಸಿದ್ದ ಬಿಜೆಪಿ ಅಭ್ಯರ್ಥಿ ಉದಯ್ ಗರುಡಾಚಾರ್ ಅವರು ‘ಕೆಎ 05 ಕೆಟಿ 2253’ ನೋಂದಣಿ ಸಂಖ್ಯೆಯ ದ್ವಿಚಕ್ರ ವಾಹನದಲ್ಲಿ ಸಂಚರಿಸಿದ್ದರು. ಸವಾರ ಹಾಗೂ ಹಿಂಬದಿ ಸವಾರರಾದ ಅಭ್ಯರ್ಥಿ ಯಾವುದೇ ಹೆಲ್ಮೆಟ್ ಧರಿಸಿರಲಿಲ್ಲ. ಇದೇ ದ್ವಿಚಕ್ರ ವಾಹನದ ಮೇಲೆ ₹ 11,500 ದಂಡ ಬಾಕಿ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಉಪನ್ಯಾಸ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೂಮಿಗೆ ನಾವೇ ಗೆದ್ದಲು’ ಕುರಿತು ಪತ್ರಕರ್ತ ನಾಗೇಶ ಹೆಗಡೆ ಅವರ ಉಪನ್ಯಾಸ ಮತ್ತು ನಾಗೇಂದ್ರ ಮುತ್ತಮುರಡು ಅವರ ‘ಬೆಳಕು-ಬೆರಗು’ ಛಾಯಾಚಿತ್ರಗಳ ಪ್ರದರ್ಶನ ಆಯೋಜಿಸಲಾಗಿದೆ.

ಆನಂದ ರಾವ್ ವೃತ್ತದಲ್ಲಿರುವ ಕ.ವಿ.ಪ್ರ.ನಿ.ನಿ ಲೆಕ್ಕಾಧಿಕಾರಿಗಳ ಸಂಘದಲ್ಲಿ ಇದೇ ಶನಿವಾರ ಬೆಳಿಗ್ಗೆ 10ಕ್ಕೆ ಈ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾರು ಗುದ್ದಿ ಇಬ್ಬರ ಸಾವು: ಠಾಣೆ ಎದುರು ಪ್ರತಿಭಟನೆ

ಆರೋಪಿಗಳ ವಿರುದ್ಧ ಪ್ರಕರಣ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾನುಕುಂಟೆ ಠಾಣೆ ವ್ಯಾಪ್ತಿಯಲ್ಲಿ ಕಾರು ಗುದ್ದಿ ಇಬ್ಬರು ಮೃತಪಟ್ಟಿದ್ದು, ‘ಇದೊಂದು ಕೊಲೆ’ ಎಂದು ಆರೋಪಿಸಿ ಸಂಬಂಧಿಕರು ಠಾಣೆ ಎದುರು ಪ್ರತಿಭಟನೆ ನಡೆಸಿದರು.

‘ಗುರುವಾರ ಬೆಳಿಗ್ಗೆ 5.30ರ ಸುಮಾರಿಗೆ ಕಾರು ಹಾಗೂ ಬೈಕ್ ನಡುವೆ ಅಪಘಾತವಾಗಿದೆ. ಬೈಕ್‌ನಲ್ಲಿ ಹೊರಟಿದ್ದ ಚಲ್ಲಹಳ್ಳಿ ನಿವಾಸಿಗಳಾದ ನಾಗರಾಜ್ (38) ಹಾಗೂ ರಾಮಯ್ಯ (48) ಎಂಬುವರು ಮೃತಪಟ್ಟಿದ್ದಾರೆ. ಇವರಿಬ್ಬರದ್ದು ಕೊಲೆ ಎಂಬುದಾಗಿ ಆರೋಪಿಸಿ ಸಂಬಂಧಿಕರು ದೂರು ನೀಡಿದ್ದಾರೆ’ ಎಂದು ರಾಜಾನುಕುಂಟೆ ಪೊಲೀಸರು ಹೇಳಿದರು.

‘ದೂರಿನ ಅಂಶಗಳನ್ನು ಆಧರಿಸಿ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಾರಿನಲ್ಲಿದ್ದ ಆರೋಪಿಗಳಾದ ಭರತ್, ನಿಶಾಂತ್ ಹಾಗೂ ವಿನಯ್ ಎಂಬುವವರನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

‘ಮೃತ ನಾಗರಾಜ್ ಹಾಗೂ ರಾಮಯ್ಯ ಅವರು ಕೆಎಂಎಫ್ ಪಶು ಆಹಾರ ತಯಾರಿಕೆ ಘಟಕದಲ್ಲಿ ಕೆಲಸ ಮಾಡುತ್ತಿದ್ದರು. ಅವರಿಬ್ಬರು ಒಟ್ಟಿಗೆ ಬೈಕ್‌ನಲ್ಲಿ ಕೆಲಸಕ್ಕೆ ತೆರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಇದು ಅಪಘಾತವೋ ಅಥವಾ ಕೊಲೆಯೋ ಎಂಬುದನ್ನು ತಿಳಿಯಲು ಡಿವೈಎಸ್ಪಿ ನೇತೃತ್ವದಲ್ಲಿ ತನಿಖೆ ಮುಂದುವರಿದಿದೆ’ ಎಂದರು.

ನೀರು ಕುಡಿದಿದ್ದಕ್ಕೆ ಜಾತಿ ನಿಂದನೆ: ‘ಹೋಟೆಲ್‌ನಲ್ಲಿ ನೀರು ಕುಡಿಯುವ ವಿಚಾರಕ್ಕೆ ನಡೆದಿದ್ದ ಜಗಳದ ವೈಷಮ್ಯ ಇಟ್ಟುಕೊಂಡು ನಾಗರಾಜ್ ಹಾಗೂ ರಾಮಯ್ಯ ಅವರನ್ನು ಕಾರು ಗುದ್ದಿಸಿ ಕೊಲೆ ಮಾಡಲಾಗಿದೆ. ಇದೊಂದು ವ್ಯವಸ್ಥಿತ ಸಂಚು’ ಎಂದು ಆರೋಪಿಸಿ ರಾಜಾನುಕುಂಟೆ ಠಾಣೆ ಎದುರು ಸಂಬಂಧಿಕರು ಪ್ರತಿಭಟನೆ ನಡೆಸಿದರು.

‘ಆರೋಪಿ ಭರತ್, ನಿಶಾಂತ್ ಹಾಗೂ ವಿನಯ್, ಅಪರಾಧ ಹಿನ್ನೆಲೆಯುಳ್ಳವರು. 20 ದಿನಗಳ ಹಿಂದೆ ಹೆಸರಘಟ್ಟದ ಹೋಟೆಲ್‌ಗೆ ಹೋಗಿದ್ದ ನಾಗರಾಜ್, ಜಗ್ಗಿನಲ್ಲಿ ನೀರು ಕುಡಿಯುತ್ತಿದ್ದರು. ಸ್ಥಳದಲ್ಲಿದ್ದ ಭರತ್, ‘ನೀನು ಪರಿಶಿಷ್ಟ ಜಾತಿಯವ. ಜಗ್ಗಿನಲ್ಲಿ ಏಕೆ ನೀರು ಕುಡಿಯುತ್ತಿದ್ದಿಯಾ? ಚುನಾವಣೆ ಮುಗಿಯುತ್ತಿದ್ದಂತೆ ನಿನಗೆ ಒಂದು ಗತಿ ಕಾಣಿಸುತ್ತೇನೆ’ ಎಂದು ಜಾತಿ ನಿಂದನೆ ಮಾಡಿ ಬೆದರಿಸಿದ್ದ. ಇದೇ ವಿಚಾರವನ್ನು ನಾಗರಾಜ್ ಅವರು ತಮ್ಮ ಸಂಬಂಧಿಕರಿಗೆ ತಿಳಿಸಿದ್ದರು’ ಎಂದು ಪ್ರತಿಭಟನಕಾರರು ಹೇಳಿದರು.

‘ಅಪಘಾತದ ಸೋಗಿನಲ್ಲಿ ಇಬ್ಬರನ್ನು ಕೊಲೆ ಮಾಡಿರುವ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ಇದರ ಹಿಂದಿರುವ ವ್ಯಕ್ತಿಗಳನ್ನು ಪತ್ತೆ ಮಾಡಬೇಕು’ ಎಂದು ಆಗ್ರಹಿಸಿದರು. ಸ್ಥಳಕ್ಕೆ ಬಂದ ಪೊಲೀಸ್ ಹಿರಿಯ ಅಧಿಕಾರಿಗಳು, ಕ್ರಮದ ಭರವಸೆ ನೀಡಿದ ಬಳಿಕವೇ ಪ್ರತಿಭಟನೆ ಅಂತ್ಯಗೊಂಡಿತು.



ರಾಜಾನುಕುಂಟೆ ಠಾಣೆ ಎದುರು ಸಂಬಂಧಿಕರು ಪ್ರತಿಭಟನೆ ನಡೆಸಿದರು

ಛಾಯಾಚಿತ್ರ ಪ್ರದರ್ಶನ 18ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವನ್ಯಜೀವಿ ಛಾಯಾಗ್ರಾಹಕ ದೀಪಕ್ ಶಂಕರ್ ಅವರ ‘ಇನ್‌ಟು ದಿ ವೈಲ್ಡ್’ ಏಕವ್ಯಕ್ತಿ ಛಾಯಾಚಿತ್ರಗಳ ಪ್ರದರ್ಶನವು ಮೇ 18ರಿಂದ 21ರವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಲಾಗಿದೆ.

ದಕ್ಷಿಣ ಆಫ್ರಿಕಾ ಮತ್ತು ಭಾರತದ ಕಾಡುಗಳ ಪ್ರಾಕೃತಿಕ ಸೌಂದರ್ಯ ಮತ್ತು ವನ್ಯಜೀವಿಗಳಾದ ಹುಲಿ, ಆನೆ, ಸಿಂಹ ಸೇರಿ ವಿವಿಧ ಪ್ರಾಣಿಗಳ ಸೌಂದರ್ಯ ಮತ್ತು ಗಾಂಭೀರ್ಯವನ್ನು ದೀಪಕ್ ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. ಅವರಿಗೆ 1999ರಲ್ಲಿ ಪ್ರತಿಷ್ಠಿತ ‘ಡ್ಯೂಕ್ ಆಫ್ ಎಡಿನ್‌ಬರ್ಗ್’ ಪ್ರಶಸ್ತಿ ಲಭಿಸಿದೆ.

‘ಮೇ 18ರಂದು ಬೆಳಿಗ್ಗೆ 10ಕ್ಕೆ ಛಾಯಾಚಿತ್ರ ಪ್ರದರ್ಶನ ಪ್ರಾರಂಭವಾಗಲಿದ್ದು, ಸಂಜೆ 5ಗಂಟೆಗೆ ಕುಮಾರನ್ ಗ್ರೂಪ್ ಆಫ್ ಎಜುಕೇಷನಲ್ ಇನ್‌ಸ್ಟಿಟ್ಯೂಟ್ ಅಕಾಡೆಮಿಕ್ಸ್ ನಿರ್ದೇಶಕಿ ದೀಪಾ ಶ್ರೀಧರ್ ಉದ್ಘಾಟನೆ ಮಾಡಲಿದ್ದಾರೆ. ಈ ಪ್ರದರ್ಶನವು ಉಚಿತವಾಗಿದೆ’ ಎಂದು ದೀಪಕ್ ತಿಳಿಸಿದ್ದಾರೆ.

ತ್ಯಾಗರಾಜ ಬ್ಯಾಂಕ್: ಸಾಲಮೇಳ

ಬೆಂಗಳೂರು: ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕಿನ ಸದಸ್ಯರ ಮತ್ತು ಗ್ರಾಹಕರ ಅನುಕೂಲಕ್ಕಾಗಿ ‘ಸಾಲಮೇಳ ಮಾಸ’ವನ್ನು ಆಯೋಜಿಸಲಾಗಿದೆ.

ಮೇ 31ರವರೆಗೆ ಈ ಸಾಲ ಮೇಳ ನಡೆಯಲಿದೆ. ಈ ಅವಧಿಯಲ್ಲಿ ಸಾಲ ಕೋರಿ ಸಲ್ಲಿಸುವ ಅರ್ಜಿಗಳಿಗೆ ಯಾವುದೇ ಸೇವಾಶುಲ್ಕ ವಿಧಿಸುವುದಿಲ್ಲ. ಬ್ಯಾಂಕಿನ ವಿವಿಧ ರೀತಿಯ ಗೃಹ ಸಾಲಗಳು, ಅಡಮಾನ ಸಾಲಗಳು, ವ್ಯಾಪಾರಾಭಿವೃದ್ಧಿ ಸಾಲಗಳು, ಎಂಎಸ್‌ಎಂಇ ವಲಯ ಹಾಗೂ ಗುಡಿ ಕೈಗಾರಿಕೆಗಳಿಗೆ ನೆರವಾಗುವ ಸಾಲಗಳನ್ನು ಆಕರ್ಷಕ ಬಡ್ಡಿ ದರಗಳಲ್ಲಿ ನೀಡಲಾಗುವುದು ಎಂದು ಬ್ಯಾಂಕ್ ಅಧ್ಯಕ್ಷ ಡಾ. ಎಂ.ಆರ್. ವೆಂಕಟೇಶ್ ತಿಳಿಸಿದ್ದಾರೆ.

ಈ ಸಾಲಮೇಳದ ಎಲ್ಲ ಸೌಲಭ್ಯಗಳನ್ನು ಗ್ರಾಹಕರು ಪಡೆದುಕೊಳ್ಳಬೇಕು ಎಂದು ಕೋರಿದ್ದಾರೆ.

ಸದಸ್ಯರ ಮತ್ತು ಗ್ರಾಹಕರ ದಿನನಿತ್ಯದ ನಗದು ರಹಿತ ವ್ಯವಹಾರಿಕ ವಹಿವಾಟಿಗೆ ಅನುಕೂಲವಾಗುವಂತೆ ಕ್ಯೂಆರ್ ಕೋಡ್ ಸ್ಕ್ಯಾನರ್, ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಸಹ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು ಹೊರ ವಲಯದಲ್ಲಿ ಐದು ಹೊಸ ಶಾಖೆಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ ಎಂದಿದ್ದಾರೆ.


ನಗರದ ಗಾಂಧಿ ಬಜಾರ್‌ನ ಮುಖ್ಯ ರಸ್ತೆಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿ

ಗಾಂಧಿ ಬಜಾರ್ ರಸ್ತೆ ವಿಸ್ತರಣೆಗೆ ಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಸವನಗುಡಿಯ ಗಾಂಧಿ ಬಜಾರ್ ರಸ್ತೆ ನವೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ಪಾದಚಾರಿ ಮಾರ್ಗವನ್ನು 40 ಅಡಿ ಅಗಲಕ್ಕೆ ವಿಸ್ತರಿಸುವ ಕಾರ್ಯಕ್ಕೆ ಹೈಕೋರ್ಟ್ ನಿರ್ಬಂಧ ವಿಧಿಸಿದೆ.

ಈ ಸಂಬಂಧ ಗಾಂಧಿ ಬಜಾರ್‌ನ ಅಂಗಡಿ ಮಳಿಗೆ ಮಾಲೀಕ ಎಲ್. ಗುಂಡುರಾವ್ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ರಜಾಕಾಲದ ಏಕಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಗುರುವಾರ ವಿಚಾರಣೆ ನಡೆಸಿ ಮಧ್ಯಂತರ ಆದೇಶ ನೀಡಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್, 'ನವೀಕರಣದ ನೆಪದಲ್ಲಿ ಬಿಬಿಎಂಪಿ ಮುಖ್ಯ ರಸ್ತೆಯನ್ನು ಕಿರಿದು ಮಾಡಿ ಪಾದಚಾರಿ ಮಾರ್ಗವನ್ನು ಅಗಲಗೊಳಿಸುತ್ತಿದೆ. 800 ಮೀಟರ್ ಉದ್ದದ ಈ ಮಾರ್ಗದಲ್ಲಿ ಮೊದಲು 100 ಅಡಿ ಅಗಲದ ರಸ್ತೆ ಇತ್ತು. ಈಗ ಅದನ್ನು 23 ಅಡಿಗೆ ಇಳಿಸಿ ಪಾದಚಾರಿ ಮಾರ್ಗವನ್ನು ಒಂದು ಕಡೆ 40 ಅಡಿಗೆ ಹಾಗೂ ಮತ್ತೊಂದು ಕಡೆ 35 ಅಡಿಗೆ ಅಗಲ ಮಾಡಲಾಗುತ್ತಿದೆ' ಎಂದರು.

'ಇದರಿಂದ ಮುಖ್ಯ ರಸ್ತೆ ತೀರಾ ಕಿರಿದಾಗುತ್ತದೆ. ರಸ್ತೆಯ ಇಕ್ಕೆಲಗಳಲ್ಲಿರುವ ಬೀದಿ ಬದಿ ವ್ಯಾಪಾರಿಗಳಿಗೆ ಅವಕಾಶ ನೀಡಲಾಗುತ್ತದೆ. ಇದರಿಂದ ಈಗಾಗಲೇ ಇರುವ ಅಂಗಡಿ ಮಳಿಗೆಗಳಿಗೆ ಬರುವ ಗ್ರಾಹಕರ ಸಂಖ್ಯೆ ಕಡಿಮೆಯಾಗಲಿದೆ. ಪಾಲಿಕೆಯ ಈ ಕಾಮಗಾರಿ, ಭಾರತೀಯ ರಸ್ತೆ ಕಾಂಗ್ರೆಸ್ ನಿಯಮಗಳಿಗೆ ವಿರುದ್ಧವಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೆ ಸ್ಥಳಾವಕಾಶವೇ ಇರುವುದಿಲ್ಲ. ಆದ್ದರಿಂದ, ಪಾದಚಾರಿ ಮಾರ್ಗ ಅಗಲ ಮಾಡದಂತೆ ಮಧ್ಯಂತರ ಆದೇಶ ನೀಡಬೇಕು' ಎಂದು ಕೋರಿದರು.

ಪಾಲಿಕೆಯ ಕಾರ್ಯ ವೈಖರಿಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, 'ಚೆನ್ನಾಗಿರುವ ರಸ್ತೆಯನ್ನೆಲ್ಲಾ ಅಧ್ವಾನ ಮಾಡಿಟ್ಟಿದ್ದೀರಿ, ಮರಗಳನ್ನು ಕತ್ತರಿಸಿದ್ದೀರಿ, ಜನರು ಅಲ್ಲಿ ಹೇಗೆ ಓಡಾಡಬೇಕು...? ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸಾರ್ವಜನಿಕರಿಗೆ ಯಾಕೆ ಹೀಗೆ ಅನಗತ್ಯ ತೊಂದರೆ ನೀಡುತ್ತಿದೆ' ಎಂದು ಬಿಬಿಎಂಪಿಯನ್ನು ಖಾರವಾಗಿ ಪ್ರಶ್ನಿಸಿತು. ಪ್ರತಿವಾದಿಗಳಾದ ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ ಮತ್ತು ನಗರ ಭೂಸಾರಿಗೆ ನಿರ್ದೇಶನಾಲಯಕ್ಕೆ ನೋಟಿಸ್ ಜಾರಿಗೊಳಿಸಿಸಲು ಆದೇಶಿಸಿ ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ: ಅತಿಥಿಗಳು: ಎಂ.ಕೆ. ರಮೇಶ್, ಓ. ಪ್ರಸನ್ನ ಕುಮಾರ್, ಸಿ.ಎನ್. ಬಾಲಕೃಷ್ಣ, ಕೆ.ವಿ. ರೇಣುಕಾಪ್ರಸಾದ್, ರಾಘವೇಂದ್ರ, ಡಿ. ಹನುಮಂತಯ್ಯ, ಟಿ. ಕೋನಪ್ಪರೆಡ್ಡಿ, ಆಯೋಜನೆ: ರಾಜ್ಯ ಒಕ್ಕಲಿಗರ ಸಂಘ, ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್, ಆ್ಯಂಗ್ಲೋ–ಇಂಡಿಯನ್ ಯೂನಿಟಿ ಸೆಂಟರ್ ಆ್ಯಂಡ್ ಗಾರ್ಷಮ್ ಫೌಂಡೇಷನ್, ಸ್ಥಳ: ಕುವೆಂಪು ಕಲಾಕ್ಷೇತ್ರ, ಕೆ.ಆರ್. ರಸ್ತೆ, ವಿ.ವಿ. ಪುರ, ಬೆಳಿಗ್ಗೆ 8

ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ: **ಅತಿಥಿಗಳು:** ಜಯಕರ ಎಸ್.ಎಂ., ಮಹೇಶ್ ಬಾಬು ಕೆ.ಎನ್., ಶ್ರೀನಿವಾಸ್ ಚೌಡಪ್ಪ, ಎಚ್.ಆರ್. ರವೀಶ, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ರಾಮಶ್ರೀ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್, ಸ್ಥಳ: ಎನ್.ಎಸ್.ಎಸ್ ಭವನ, ಜ್ಞಾನಭಾರತಿ ಆವರಣ, ಮಧ್ಯಾಹ್ನ 1

ಮಕ್ಕಳ ಬೇಸಿಗೆ ರಜೆಯ ಸಾಂಸ್ಕೃತಿಕ ಶಿಕ್ಷಣ ಹಾಗೂ ಮನೋರಂಜನಾ ಶಿಬಿರದ ಸಮಾರೋಪ ಸಮಾರಂಭ: ಅಧ್ಯಕ್ಷತೆ: ಕೆ. ಮೋಹನ್‌ದೇವ್ ಆಳ್ವ, ಅತಿಥಿಗಳು: ಮಹೇಶ ಜೋಶಿ, ರಾಜವರ್ಧನ್, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಸಂಜೆ 4

ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಸ್ವಾಮಿ ಸುವಿರಾನಂದಜಿ ಮಹರಾಜ್, ಅತಿಥಿ: ನಾಗೇಂದ್ರ ಎಚ್.ಆರ್., ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಿಷನ್, ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 4.15ರಿಂದ

ಕ.ವೆಂ. ರಾಘವಾಚಾರ್, ಡಿ.ವಿ.ಜಿ., ಬಿ.ಎಸ್. ಸಣ್ಣಯ್ಯ, ಡಾ. ಎಂ.ಎಲ್. ಲಲಿತಮ್ಮ ದತ್ತಿ ಉಪನ್ಯಾಸ: 'ಕನ್ನಡ ಸಾಹಿತ್ಯಕ್ಕೆ ಕ.ವೆಂ. ರಾಘವಾಚಾರ್ ಅವರ ಕೊಡುಗೆ' ಕುರಿತು ಉಪನ್ಯಾಸ: ಅಮರೇಂದ್ರ ಹೊಲ್ಲಂಬಳ್ಳಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ, ಪ್ರತಿಷ್ಠಾನ, ಎಂ.ವಿ.ಸೀ. ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5


'ಮೌಢ್ಯಾವತಾರ' ನಾಟಕ ಪ್ರದರ್ಶನ: ರಚನೆ, ವಿನ್ಯಾಸ: ಪ್ರವೀಣ ರಬಕವಿ, ನಿರ್ದೇಶನ: ಭರತ್ ಹರಪನಹಳ್ಳಿ, ಅತಿಥಿಗಳು: ದೀಕ್ಷಿತ್ ಶೆಟ್ಟಿ, ರಚನಾ, ಆಯೋಜನೆ: ಅಲೆ, ಸ್ಥಳ: ಅಲೆ ಆಡಿಟೋರಿಯಂ, ರಾಜಾಜಿನಗರ, 2ನೇ ಹಂತ, ಸಂಜೆ 5.30ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ತನುಶ್ರೀ, ಅತಿಥಿಗಳು: ಚೂಡಾಮಣಿ ನಂದಗೋಪಾಲ್, ಅರ್ಚನಾ ಉಡುಪ, ಸುಶ್ಮಾ ರಾವ್, ಆಯೋಜನೆ: ಸುಕೃತಿ ನೃತ್ಯಾಲಯ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.15

ಪ್ರವಚನ ವಾಹಿನಿ: 'ಭಗವದ್ಗೀತೆಯಲ್ಲಿ ಮನೋವಿಜ್ಞಾನ' ಕುರಿತು ಉಪನ್ಯಾಸ: ಗ.ನ. ಭಟ್ಟ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ...
nagaradalli_indu@prajavani.co.in

ಜಿಲ್ಲಾವಾರು ಮತ ಪ್ರಮಾಣ



2018ರಲ್ಲಿ ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಶೇ 74.13ರಷ್ಟು ಮತದಾನ ನಡೆದಿತ್ತು. 2023ರಲ್ಲಿ ಬಳ್ಳಾರಿಯಲ್ಲಿ ಶೇ76.24 ಮತ್ತು ವಿಜಯನಗರ ಜಿಲ್ಲೆಯಲ್ಲಿ ಶೇ 78.07ರಷ್ಟು ಮತದಾನ ನಡೆದಿದೆ

ಸವದತ್ತಿ ಯಲ್ಲಮ್ಮನ ದರ್ಶನ ಪಡೆದ ಮುಖ್ಯಮಂತ್ರಿ ಬೊಮ್ಮಾಯಿ; ಗಡ್ಡ ಟ್ರಿಮ್ ಮಾಡಿಸಿಕೊಂಡ ಡಿಕೆಶಿ

ವಿಶ್ರಾಂತಿಗೆ ಜಾರಿದ ರಾಜಕೀಯ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಪ್ರಚಾರ, ರೋಡ್ ಶೋ, ಸಮಾವೇಶಕ್ಕಾಗಿ ಕಾಲಿಗೆ ಚಕ್ರ ಕಟ್ಟಿಕೊಂಡು ಓಡಾಡಿ ಸುಸ್ತಾಗಿರುವ ವಿವಿಧ ಪಕ್ಷಗಳ ರಾಜಕೀಯ ನಾಯಕರು, ಅಭ್ಯರ್ಥಿಗಳ ಪೈಕಿ ಬಹುತೇಕ ಮಂದಿ ಗುರುವಾರ ಇಡೀ ದಿನ ತಮ್ಮ ಕುಟುಂಬ ಸದಸ್ಯರ ಜೊತೆ ಸಮಯ ಕಳೆದರು. ವಿಶ್ರಾಂತಿಯ ನಡುವೆಯೂ ತಮ್ಮ ಆಪ್ತರ ಜೊತೆ ಮತದಾನೋತ್ತರ ಸಮೀಕ್ಷೆಗಳು ನುಡಿದ ಭವಿಷ್ಯವನ್ನು ಮೆಲುಕು ಹಾಕಿದರು.

ಹುಬ್ಬಳ್ಳಿಯಲ್ಲಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪತ್ನಿ ಮತ್ತು ಪುತ್ರನ ಜೊತೆ ಸವದತ್ತಿ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, '2018ರಲ್ಲೂ ಸಮೀಕ್ಷೆಗಳು ಕಾಂಗ್ರೆಸ್ 107ಕ್ಕೂ ಹೆಚ್ಚು ಸ್ಥಾನ ಗಳಿಸಲಿದೆ ಎಂದು ಹೇಳಿದ್ದವು. ಆದರೆ, ಚುನಾವಣಾ ಫಲಿತಾಂಶದ ದಿನ ಉಲ್ಟಾ ಆಯಿತು. ಈಗಲೂ ಅದೇ ನಂಬಿಕೆಯಿದೆ. ನಾವು ಸಂಪೂರ್ಣ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೆ ಬರುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸಿಂಗಪುರಕ್ಕೆ ತೆರಳಿದ್ದಾರೆ. ಕುಮಾರಸ್ವಾಮಿ ಕಳೆದ ನಾಲ್ಕೈದು ತಿಂಗಳಿನಿಂದ ರಾಜ್ಯದಾದ್ಯಂತ ಪಂಚರತ್ನ ಯಾತ್ರೆ ಮೂಲಕ ಪ್ರಚಾರ ನಡೆಸಿದ್ದರು. ಒಮ್ಮೆ ಅನಾರೋಗ್ಯಕ್ಕೆ ತುತ್ತಾಗಿ ಆಸ್ಪತ್ರೆಗೂ ದಾಖಲಾಗಿದ್ದರು. ಈ ಹಿನ್ನೆಲೆಯಲ್ಲಿ ಸಿಂಗಪುರದಲ್ಲಿ ಅವರು ಆರೋಗ್ಯ ತಪಾಸಣೆಗೆ ಒಳಗಾಗಲಿದ್ದು, ಎರಡು ದಿನ ವಿಶ್ರಾಂತಿ ಪಡೆಯಲಿದ್ದಾರೆ. ಮತ ಎಣಿಕೆ ನಡೆಯಲಿರುವ ಮೇ 13ರಂದು ಮಧ್ಯಾಹ್ನ ಅವರು ಬೆಂಗಳೂರಿಗೆ ವಾಪಸಾಗಲಿದ್ದಾರೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಸ್ವಕ್ಷೇತ್ರ ಕನಕಪುರದಲ್ಲಿ ಕಾಲ ಕಳೆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಹೇರ್ ಕಟಿಂಗ್–ಗಡ್ಡ ಟ್ರಿಮ್ ಮಾಡಿಸಿಕೊಂಡರು. ಚುನಾವಣೆ ಸಂದರ್ಭದಲ್ಲಿ ಶಿವಕುಮಾರ್ ಗಡ್ಡ ಬಿಟ್ಟಿದ್ದು ಕುತೂಹಲಕ್ಕೆ ಕಾರಣವಾಗಿತ್ತು. 'ಬಿಜೆಪಿಯವರ ಕಾಟದಿಂದ ನಮ್ಮ ಅಣ್ಣ ಗಡ್ಡ ಬಿಟ್ಟಿದ್ದಾರೆ. ಮೇ 13ರಂದು ಅದಕ್ಕೆ ಉತ್ತರ ಸಿಗಲಿದೆ' ಎಂದು ಹೇಳಿಕೊಂಡು ಅವರ ಸಹೋದರ, ಸಂಸದ ಡಿ.ಕೆ. ಸುರೇಶ್ ಕಣ್ಣೀರು ಹಾಕಿದ್ದರು. ಆದರೆ, ಫಲಿತಾಂಶಕ್ಕೆ ಮುನ್ನವೇ ಗಡ್ಡಕ್ಕೆ ಕತ್ತರಿ ಹಾಕಿಸಿಕೊಂಡರು. ಬಳಿಕ ಡಿ.ಕೆ. ಸುರೇಶ್ ಜೊತೆ ಕನಕಪುರದ ವಾಸು ಹೋಟೆಲ್‌ನಲ್ಲಿ ಇಡ್ಲಿ, ದೋಸೆ ಸವಿದರು. ಜ್ವರದಿಂದ ಬಳಲುತ್ತಿರುವ ಶಿವಕುಮಾರ್, ಬಳಿಕ ತಾಲ್ಲೂಕಿನ ಕೋಡಿಹಳ್ಳಿಯ ನಿವಾಸದಲ್ಲಿರುವ ತಾಯಿ ಗೌರಮ್ಮನವರ ಆಶೀರ್ವಾದ ಪಡೆದರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಬೆಂಗಳೂರಿನ ಸರ್ಕಾರಿ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಮುಂದಿನ ತಂತ್ರಗಾರಿಕೆ ಬಗ್ಗೆ ಚರ್ಚೆ ನಡೆಸಿದರು.

ತಮ್ಮ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, 'ಚುನಾವಣೆಗಾಗಿ ಮನೆ ಮತ್ತು ಸಂಸಾರ ತೊರೆದು ಕೆಲಸ ಮಾಡಿದ್ದೀರಿ. ಈಗ ಸ್ವಲ್ಪ ಬಿಡುವು ಮಾಡಿಕೊಂಡು ತಂದೆ-ತಾಯಿ, ಹೆಂಡತಿ, ಮಕ್ಕಳ ಜೊತೆ ಕಾಲ ಕಳೆಯಿರಿ. ಪ್ರಾಮಾಣಿಕವಾದ ನಮ್ಮ ಹೋರಾಟ ಖಂಡಿತ ಫಲಪ್ರದವಾಗುತ್ತದೆ' ಎಂದಿದ್ದಾರೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಪದ್ಮನಾಭನಗರದ ತಮ್ಮ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಆರೋಗ್ಯ ಸಮಸ್ಯೆಗಳ ಮಧ್ಯೆಯೂ ಬಿಡುವಿಲ್ಲದೆ ಪಕ್ಷದ ಅಭ್ಯರ್ಥಿಗಳ ಪರ ಅವರು ಪ್ರಚಾರ ನಡೆಸಿದ್ದರು.

ತಮ್ಮ ಮತಕ್ಷೇತ್ರ ಹಿರೇಕೆರೂರಿನ ನಿವಾಸದಲ್ಲಿ ಮೊಮ್ಮಗಳ ಜೊತೆ ಕೃಷಿ ಸಚಿವ ಬಿ.ಸಿ. ಪಾಟೀಲ ಖುಷಿಯ ಕ್ಷಣಗಳನ್ನು ಕಳೆದರೆ, ಬಾಗಲಕೋಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ದೇವರಾಜ ಪಾಟೀಲ ಮಸಾಜ್ ಮಾಡಿಸಿಕೊಂಡರು.





ಉಗರಗೋಳ ಸಮೀಪದ ಯಲ್ಲಮ್ಮನಗುಡ್ಡಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕುಟುಂಬ ಸಮೇತವಾಗಿ ಭೇಟಿ ನೀಡಿದರು(ಎಡಚಿತ್ರ). ಕನಕಪುರದಲ್ಲಿನ ತಮ್ಮ ನಿವಾಸದಲ್ಲಿ ಗುರುವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗಡ್ಡ ಟ್ರಿಮ್ ಮಾಡಿಸಿಕೊಂಡರು

ಬಿಜೆಪಿ ಬೆಂಬಲಿಗನ ₹1 ಕೋಟಿ ಸವಾಲು

ವಿವಿಧ ಕ್ಷೇತ್ರಗಳಲ್ಲಿ ಬೆಟ್ಟಿಂಗ್ ಭರಾಟೆ: ಕಾಂಗ್ರೆಸ್ ಬೆಂಬಲಿಗನ ₹3 ಲಕ್ಷ ಬಾಜಿ

ವಿಧಾನಸಭೆ ಚುನಾವಣೆ ಮುಗಿದ ಬಳಿಕ ರಾಜ್ಯದ ಹಲವೆಡೆ ಸೋಲು–ಗೆಲುವಿನ ಬೆಟ್ಟಿಂಗ್ ದಂಧೆ ನಡೆಯುತ್ತಿದ್ದು, ಹಣದ ಹೊಳೆ ಹರಿಯುತ್ತಿದೆ. ತಮ್ಮ ನೆಚ್ಚಿನ ಅಭ್ಯರ್ಥಿಗಳ ಪರ ಅಭಿಮಾನಿಗಳು, ಕಾರ್ಯಕರ್ತರು ಹಣವನ್ನು ತೋರಿಸಿ, ತಮ್ಮ ಪಕ್ಷದ ಅಭ್ಯರ್ಥಿಯೇ ಗೆಲ್ಲಲಿದ್ದಾರೆ ಎಂದು ಬಹಿರಂಗವಾಗಿ ಸವಾಲು ಹಾಕಿದ್ದಾರೆ.

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ವಿಧಾನಸಭೆ ಚುನಾವಣೆ ಫಲಿತಾಂಶ ಬರಲು ಒಂದು ದಿನವಷ್ಟೇ ಬಾಕಿ ಇದ್ದು, ಗುಂಡ್ಲುಪೇಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿಗರು ಹಣವನ್ನು ತೋರಿಸಿ, ತಮ್ಮ ಪಕ್ಷದ ಅಭ್ಯರ್ಥಿಯೇ ಗೆಲ್ಲಲಿದ್ದಾರೆ ಎಂದು ಬಹಿರಂಗವಾಗಿ ಸವಾಲು ಹಾಕಿದ್ದಾರೆ. ಸವಾಲು ಹಾಕುತ್ತಿರುವ ವಿಡಿಯೊ ತುಣುಕುಗಳು ಗುರುವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

'ಬಿಜೆಪಿ ಅಭ್ಯರ್ಥಿ ಸಿ.ಎಸ್. ನಿರಂಜನಕುಮಾರ್ ಗೆಲ್ಲುತ್ತಾರೆಂದು ₹ 1 ಕೋಟಿಗೂ ಹೆಚ್ಚು ಹಣ ಬಾಜಿ ಕಟ್ಟಲು ಸಿದ್ಧರಿದ್ದೇವೆ' ಎಂದು ಗುಂಡ್ಲುಪೇಟೆ ಪುರಸಭೆ ಸದಸ್ಯ ಕಿರಣ್ ಗೌಡ, ಹಣದ ಕಟ್ಟುಗಳನ್ನು ತೋರಿಸಿ ಹೇಳಿದರೆ, ಕಾಂಗ್ರೆಸ್ ಬೆಂಬಲಿಗರೊಬ್ಬರು, ಪ್ಲಾಸ್ಟಿಕ್ ಕವರ್‌ನಲ್ಲಿ ಹಣ ತೋರಿಸಿ ₹ 3 ಲಕ್ಷ ಬಾಜಿಯ ಸವಾಲನ್ನು ಹಾಕಿದ್ದಾರೆ.

ವಿಡಿಯೊಗಳಲ್ಲೇನಿದೆ?: 'ಸಿ.ಎಸ್. ನಿರಂಜನಕುಮಾರ್ ಅತಿ ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ. ನಾವು ₹1 ಕೋಟಿಗೂ ಹೆಚ್ಚು ಬಾಜಿ ಕಟ್ಟುವುದಕ್ಕೆ ಸಿದ್ದರಿದ್ದೇವೆ. ಕಾಫಿ ಡೇ ಹತ್ತಿರ ಸಂಜೆ 6 ಗಂಟೆವರೆಗೆ ಇರುತ್ತೇವೆ. ನಾವು 50 ಕಾರ್ಯಕರ್ತರು ತಲಾ ₹ 2 ಲಕ್ಷದಂತೆ ₹1 ಕೋಟಿ ಸಿದ್ಧ ಮಾಡಿದ್ದೇವೆ. ಯಾವಾಗ ಬೇಕಾದರೂ ಕಟ್ಟುವುದಕ್ಕೆ ಸಿದ್ಧರಿದ್ದೇವೆ. ಕಾಂಗ್ರೆಸ್ ಮುಖಂಡರೇ ದಯಮಾಡಿ ಇದಕ್ಕೆ ನೀವು ಸ್ಪಂದಿಸಿ ₹1 ಕೋಟಿ ಕಟ್ಟಬೇಕಾಗಿ ವಿನಂತಿ' ಎಂದು ಕಿರಣ್ ಗೌಡ ಹೇಳುವ 27 ಸೆಕೆಂಡ್‌ಗಳ ದೃಶ್ಯ ವಿಡಿಯೊ ತುಣುಕಿನಲ್ಲಿದೆ.

ಮತ್ತೊಂದು ವಿಡಿಯೊದಲ್ಲಿ ಕ್ಷೇತ್ರ ವ್ಯಾಪ್ತಿಯ ಮಲ್ಲಯ್ಯನಪುರದ ಮುದ್ದರಾಮೇಗೌಡ ಎಂಬುವವರು, ಕಾಂಗ್ರೆಸ್ ಗೆದ್ದೇ ಗೆಲ್ಲುತ್ತದೆ ಎಂದು ಕಾಂಗ್ರೆಸ್ ಮುಖಂಡರಿಗೆ ₹ 3 ಲಕ್ಷ ಹಣದ ಸವಾಲು ಹಾಕುವ ದೃಶ್ಯವಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, 'ವಿಡಿಯೊಗಳು ಗಮನಕ್ಕೆ ಬಂದಿಲ್ಲ. ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು' ಎಂದರು.



ಬಿಜೆಪಿಯ ಕಿರಣ್‌ಕುಮಾರ್ ಮತ್ತು ಕಾಂಗ್ರೆಸ್ ಬೆಂಬಲಿಗ ಮುದ್ದರಾಮೇಗೌಡ ಹಣ ಪ್ರದರ್ಶಿಸಿರುವುದು (ವಿಡಿಯೊ ಚಿತ್ರ)

ಹಣ, ಮೇಕೆ, ಫಸಲನ್ನೇ ಪಣಕ್ಕಿಟ್ಟರು

ಮೈಸೂರು: ಜಿಲ್ಲೆಯ ವಿವಿಧೆಡೆ ತಮ್ಮ ನೆಚ್ಚಿನ ಅಭ್ಯರ್ಥಿಗಳ ಪರ ಅಭಿಮಾನಿಗಳು, ಕಾರ್ಯಕರ್ತರು ಬೆಟ್ಟಿಂಗ್‌ನಲ್ಲಿ ತೊಡಗಿದ್ದಾರೆ. ವರುಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಹೆಚ್ಚಿನ ಬೆಟ್ಟಿಂಗ್ ನಡೆದಿದೆ.

ಉಳಿದಂತೆ ತಿ.ನರಸೀಪುರ, ಕೆ.ಆರ್.ನಗರದಲ್ಲಿ ಹಣ, ಬೈಕ್, ಮೇಕೆಯನ್ನೇ ಬೆಟ್ಟಿಂಗ್‌ಗೆ ಕಟ್ಟುತ್ತಿದ್ದಾರೆ. ಕೆ.ಆರ್.ನಗರದ ಕಾಂಗ್ರೆಸ್ ಅಭ್ಯರ್ಥಿ ಡಿ. ರವಿಶಂಕರ್ ಪರ ಬೆಂಬಲಿಗರೊಬ್ಬರು ₹5 ಲಕ್ಷದವರೆಗೂ ಬೆಟ್ಟಿಂಗ್ ಮಾಡಿದ್ದು, ಪ್ರತಿಸ್ಪರ್ಧಿಗಳು ಅಷ್ಟೇ ಮೊತ್ತ ನೀಡಲು ಹಿಂದೇಟು ಹಾಕಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿಯೂ ಈ ವಿಡಿಯೊ ಹರಿದಾಡುತ್ತಿದೆ.

ತಿ.ನರಸೀಪುರದಲ್ಲಿ ಕಾಂಗ್ರೆಸ್–ಜೆಡಿಎಸ್ ಅಭ್ಯರ್ಥಿಗಳ ಪರ ದೊಡ್ಡ ಮೊತ್ತದ ಬೆಟ್ಟಿಂಗ್ ನಡೆದಿದೆ. ತಲಕಾಡು ಗ್ರಾಮದಲ್ಲಿ ಇಬ್ಬರು ಅಭ್ಯರ್ಥಿಗಳ ಪರವಾಗಿ ಮೇಕೆ, ಬೈಕ್‌ನ ಜೊತೆ ಮೆಕ್ಕೆಜೋಳದ ಫಸಲನ್ನೇ ಬೆಟ್ಟಿಂಗ್‌ಗೆ ಇಟ್ಟಿದ್ದಾರೆ.

ಶ್ರೀರಂಗಪಟ್ಟಣದಲ್ಲಿ 'ಸೋಡಿ', ಮಂಡ್ಯದಲ್ಲಿ 'ಡಬಲ್'

ಮಂಡ್ಯ: ಜಿಲ್ಲೆಯಲ್ಲಿ ಬೆಟ್ಟಿಂಗ್ ಬಗ್ಗೆ ಯಾರೂ ಬಹಿರಂಗವಾಗಿ ಮಾತನಾಡುತ್ತಿಲ್ಲ. ಆದರೆ ಈ ಬಗ್ಗೆ ಎಲ್ಲೆಡೆ ಗುಸುಗುಸು ಇದೆ. ಜಿಲ್ಲೆಯ ವಿವಿಧೆಡೆ ಸೋಡಿ ಹಾಗೂ ಡಬಲ್ (ಸಮಸಮ) ವ್ಯಾಪಕವಾಗಿ ನಡೆಯುತ್ತಿವೆ. ಸೋಡಿಯಲ್ಲಿ ಮೂರು ಪಟ್ಟು (₹ 5ಕ್ಕೆ ₹15), ಡಬಲ್ ಬೆಟ್ಟಿಂಗ್‌ನಲ್ಲಿ ಸಮಪಾಲು (₹ 5ಕ್ಕೆ 10) ವಾಪಸ್ ಬರುತ್ತದೆ.

ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ನಡುವೆ ಪೈಪೋಟಿ ಇದ್ದು ಸೋಡಿ ಕಟ್ಟಲು ಹೆಚ್ಚಿನ ಜನರು ಆಸಕ್ತಿ ತೋರಿಸುತ್ತಿದ್ದಾರೆ. ಮೇಲುಕೋಟೆ ಕ್ಷೇತ್ರದ ದುದ್ದ, ಶಿವಳ್ಳಿ, ಹೊಳಲು ಭಾಗದಲ್ಲಿ ಜೆಡಿಎಸ್ ಹಾಗೂ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿಗಳ ಪರವಾಗಿ ಸೋಡಿ ಕಟ್ಟುತ್ತಿದ್ದಾರೆ.

ನಾಗಮಂಗಲ, ಮದ್ದೂರು ಕ್ಷೇತ್ರದಲ್ಲೂ ಸೋಡಿ ಜೋರಾಗಿ ನಡೆಯುತ್ತಿದೆ. ಮಂಡ್ಯ ಕ್ಷೇತ್ರದಲ್ಲಿ ಡಬಲ್ ಹೆಚ್ಚಾಗಿ ನಡೆಯುತ್ತಿದೆ. ಕಾಂಗ್ರೆಸ್, ಜೆಡಿಎಸ್ ಹಾಗೂ ಪಕ್ಷೇತರ ಅಭ್ಯರ್ಥಿಯ ಪರವಾಗಿ ಹೆಚ್ಚು ಹಣ ನೀಡುತ್ತಿದ್ದಾರೆ.

ಹಳ್ಳಿಗಳಲ್ಲಿ ಮತಗಟ್ಟೆವಾರು ಬೆಟ್ಟಿಂಗ್ ನಡೆಯುತ್ತಿದ್ದು ಆಯಾ ಬೂತ್‌ನಲ್ಲಿ ಈ ಪಕ್ಷಕ್ಕೆ ಹೆಚ್ಚು ಲೀಡ್ ಬರುತ್ತದೆ ಎಂದು ಬೆಟ್ಟಿಂಗ್ ಕಟ್ಟುತ್ತಿದ್ದಾರೆ. ಈ ಬೆಟ್ಟಿಂಗ್ ದಂಧೆ ಆಯಾ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ರಾಜ್ಯದಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೆ, ಯಾರು ಮುಖ್ಯಮಂತ್ರಿಯಾಗುತ್ತಾರೆ, ಅತಂತ್ರ ವಿಧಾನಸಭೆ ರಚನೆಯಾಗಲಿದೆ ಎಂಬ ಪರವಾಗಿಯೂ ಬೆಟ್ಟಿಂಗ್ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಬೆಟ್ಟಿಂಗ್ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಈಗಾಗಲೇ ಸೂಚನೆ ನೀಡಲಾಗಿದೆ. ಮಾಹಿತಿ ಸಿಕ್ಕರೆ ಅಂಥವರ ವಿರುದ್ಧ ಕ್ರಮ ಜರುಗಿಸಲಾಗುವುದು'ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.

'ಅತಂತ್ರದ ಮಾತೇ ಇಲ್ಲ, ಯಾರ ಬೆಂಬಲವೂ ಬೇಕಿಲ್ಲ'

ಪ್ರಜಾವಾಣಿ ವಾರ್ತೆ

ಕನಕಪುರ: ಕಾಂಗ್ರೆಸ್ ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದ್ದು, ಬೇರೆಯವರ ಬೆಂಬಲ ಕೇಳುವ ಸಂದರ್ಭವೇ ಉದ್ಭವಿಸುವುದಿಲ್ಲ. ಅತಂತ್ರದ ಮಾತು ಇಲ್ಲ, ಯಾರ ಬೆಂಬಲವೂ ಬೇಕಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟವಾಗಿ ಹೇಳಿದರು.

'ಫಲಿತಾಂಶವನ್ನು ರಾಜ್ಯದ ಜನತೆ ಎದುರು ನೋಡುತ್ತಿದ್ದಾರೆ. ಪಕ್ಷ 141 ಸ್ಥಾನ ಗೆಲ್ಲುತ್ತದೆ. ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚನೆ ಮಾಡಲಿದೆ. ಫಲಿತಾಂಶದ ಬಗ್ಗೆ ನಾನು ಈಗಲೂ ದೃಢವಾಗಿದ್ದೇನೆ. ಯಾವುದೇ ಗೊಂದಲವಿಲ್ಲ' ಎಂದು ತಿಳಿಸಿದರು.

ಕನಕಪುರದಲ್ಲಿ ಗುರುವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಎರಡು ವರ್ಷಗಳ ಹಿಂದೆ ಪಕ್ಷ ಸಂಘಟನೆಗೆ ಇಳಿದಾಗಲೇ ಈ ಬಗ್ಗೆ ಧೃಡ ಸಂಕಲ್ಪ ಮಾಡಿದ್ದೆ. ಈ ಚುನಾವಣೆ ಪ್ರಾರಂಭದಲ್ಲೂ 141 ಸ್ಥಾನ ಗೆಲ್ಲುತ್ತೇವೆ ಎಂದು ಹೇಳುತ್ತಾ ಬಂದಿದ್ದೇವೆ. ಅದು ಮೇ13 ರ ಫಲಿತಾಂಶದಲ್ಲಿ ಗೊತ್ತಾಗಲಿದೆ' ಎಂದರು.

'ಸಮೀಕ್ಷೆಗಳು ಏನು ಬೇಕಾದರೂ ಹೇಳಲಿ, ಬಿಜೆಪಿಯವರು ಮತ್ತು ಜೆಡಿಎಸ್‌ನವರು ಏನಾದರೂ ಅಂದುಕೊಳ್ಳಲಿ, ಅದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ' ಎಂದರು.

ನಾನೂ ಸಿ.ಎಂ ಸ್ಥಾನದ ಆಕಾಂಕ್ಷಿ: ಪರಮೇಶ್ವರ

ತುಮಕೂರು: 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ನಾನೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಷ್ಟೇ. ಪ್ರತಿಯೊಬ್ಬ ಶಾಸಕರೂ ಆಕಾಂಕ್ಷಿಯಾಗಿರುತ್ತಾರೆ' ಎಂದು ಕೊರಟಗೆರೆ ಕ್ಷೇತ್ರದ ಅಭ್ಯರ್ಥಿ ಡಾ.ಜಿ.ಪರಮೇಶ್ವರ ಹೇಳಿದ್ದಾರೆ.

'ಮುಖ್ಯಮಂತ್ರಿ ಸ್ಥಾನ ಕೇಳಿದವರಿಗೆಲ್ಲ ಸಿಗುವುದಿಲ್ಲ. ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರ ಅಭಿಪ್ರಾಯ ಪಡೆದು, ನಂತರ ವರಿಷ್ಠರು ತೀರ್ಮಾನಿಸುತ್ತಾರೆ. ಅರ್ಹರನ್ನು ವರಿಷ್ಠರು ಆಯ್ಕೆ ಮಾಡುತ್ತಾರೆ' ಎಂದು ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮತಗಟ್ಟೆ ಸಮೀಕ್ಷೆಗಳೆಲ್ಲ ಕಾಂಗ್ರೆಸ್‌ಗೆ ಹೆಚ್ಚಿನ ಬೆಂಬಲ ಇರುವುದನ್ನು ತೋರಿಸಿವೆ. ಸಮೀಕ್ಷೆಯನ್ನೂ ಮೀರಿ 130ಕ್ಕೂ ಹೆಚ್ಚು ಸ್ಥಾನಗಳು ಬರುತ್ತವೆ. ಸ್ಪಷ್ಟ ಬಹುಮತ ಸಿಗಲಿದ್ದು, ಕಾಂಗ್ರೆಸ್ ಸರ್ಕಾರ ರಚನೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಪಘಾತ: ಐವರ ಸಾವು

ಒಂದನೇ ಪುಟದಿಂದ...

ಅಪಘಾತದಲ್ಲಿ 37 ಮಂದಿ ಗಾಯಗೊಂಡಿದ್ದು, ಮೂವರ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಿಕಾರಿಪುರದಿಂದ ಶಿವಮೊಗ್ಗದತ್ತ ಹೊರಟಿದ್ದ 'ವೆಂಕಟಮಹಾಲಕ್ಷ್ಮಿ (ಕಾಳಪ್ಪ)' ಬಸ್ ಹಾಗೂ ಶಿವಮೊಗ್ಗದಿಂದ ಶಿಕಾರಿಪುರಕ್ಕೆ ತೆರಳುತ್ತಿದ್ದ 'ಶ್ರೀನಿವಾಸ' ಬಸ್‌ಗಳ ನಡುವೆ ಈ ಅಪಘಾತ ಸಂಭವಿಸಿದೆ.

ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಧಾವಂತದಲ್ಲಿ ಮುಂದಿನ ಬಸ್ ಓವರ್ ಟೇಕ್ ಮಾಡುವಾಗ ಎದುರಿಗೆ ಬಂದ ಬಸ್ ಮುಖಾಮುಖಿ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ವೆಂಕಟ ಮಹಾಲಕ್ಷ್ಮೀ ಬಸ್‌ನ ಚಾಲಕ ಶಿಕಾರಿಪುರ ತಾಲ್ಲೂಕಿನ ಈಸೂರಿನ ನಿವಾಸಿ ಅರುಣ್ ಕುಮಾರ್ (44) ಹಾಗೂ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆಯ ಪ್ರಯಾಣಿಕ ತಿಪ್ಪೇಸ್ವಾಮಿ (40) ಮೃತಪಟ್ಟಿದ್ದಾರೆ.

ಚೋರಡಿ ಬಳಿಯ ಕುಮದ್ವತಿ ಸೇತುವೆ ಮೇಲೆ ಈ ಅವಘಡ ಸಂಭವಿಸಿದೆ. ಅಪಘಾತ ತೀವ್ರತೆಗೆ ಎರಡೂ ಬಸ್‌ಗಳು ಒಂದರೊಳಗೊಂದು ಸಿಲುಕಿಕೊಂಡಿದ್ದವು. ಜೆಸಿಬಿ ಬಳಸಿ ಹೊರಕ್ಕೆ ಎಳೆಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಯಾರಿಗೆ ಅಧಿಕಾರ; ಶುರು ಲೆಕ್ಕಾಚಾರ

ಒಂದನೇ ಪುಟದಿಂದ...

ಏತನ್ಮಧ್ಯೆ, ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಗಾಗಿ ಕುಮಾರಸ್ವಾಮಿ, ಬುಧವಾರ ರಾತ್ರಿಯೇ ಸಿಂಗಪುರಕ್ಕೆ ತೆರಳಿದ್ದಾರೆ. ಶನಿವಾರ ಮಧ್ಯಾಹ್ನದ ಬಳಿಕ ಅವರು ರಾಜ್ಯಕ್ಕೆ ವಾಪಸ್ ಆಗಲಿದ್ದಾರೆ.

ದಿಢೀರ್‌ನೇ ವಿದೇಶ ಹೋಗಿದ್ದು, ಗುರುವಾರ ಇಡೀ ದಿನ ನಾನಾ ವದಂತಿಗಳಿಗೆ ಕಾರಣವಾಗಿತ್ತು. ಬಿಜೆಪಿ ನಾಯಕರೊಬ್ಬರ ಜತೆ ಮೈತ್ರಿ ಮಾತುಕತೆಗಾಗಿ ವಿದೇಶಕ್ಕೆ ಹಾರಿದ್ದಾರೆ ಎಂಬಲ್ಲಿಯವರೆಗೂ ಚರ್ಚೆ ನಡೆಯಿತು.

ಕುಮಾರಸ್ವಾಮಿ ಭೇಟಿಯಾಗಲಿದ್ದಾರೆ ಎಂದು ಹೇಳಲಾದ ಸಚಿವರು, ಎರಡು ದಿನದ ಹಿಂದೆ ಅಧಿಕೃತ ಪ್ರವಾಸದ ಮೇರೆಗೆ ಅಲ್ಲಿಗೆ ಹೋಗಿರುವುದು ನಿಜ. 'ಮೈತ್ರಿಯನ್ನು ಮುಕ್ತವಾಗಿಟ್ಟಿದ್ದಾರೆ. ಫಲಿತಾಂಶದ ಬಳಿಕವಷ್ಟೇ ಯಾರ ಜತೆಗೆ ಹೋಗಬೇಕು ಎಂಬುದು ತೀರ್ಮಾನವಾಗಲಿದೆ. ಬಿಜೆಪಿ ನಾಯಕರ ಜತೆ ರಹಸ್ಯ ಸಭೆ ನಡೆಸುವ ಉದ್ದೇಶ ಖಂಡಿತಾ ಇಲ್ಲ. ಕುಟುಂಬ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆಗಾಗಿ ಹೋಗಿದ್ದಾರೆ' ಎಂದು ಕುಮಾರಸ್ವಾಮಿಯವರ ಆಪ್ತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಮತಗಟ್ಟೆ ಸಮೀಕ್ಷೆ ಊಹಾಪೋಹ. ಬಿಜೆಪಿ ಮರಳಿ ಅಧಿಕಾರಕ್ಕೆ ಬರುವುದು ಖಚಿತ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದರೆ, ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಮತ್ತೊಂದು ಲೆಕ್ಕಾಚಾರವನ್ನು ಮುಂದಿಟ್ಟಿದ್ದಾರೆ. '2018ರಲ್ಲಿ 24 ಸಾವಿರ ಮತಗಟ್ಟೆಗಳಲ್ಲಿ ಅತಿ ಹೆಚ್ಚಿನ ಮತಗಳನ್ನು ಪಡೆದು 104 ಸ್ಥಾನ ಗೆದ್ದಿದ್ದೆವು. ಈ ಬಾರಿ 31 ಸಾವಿರ ಮತಗಟ್ಟೆಗಳಲ್ಲಿ ಅತಿ ಹೆಚ್ಚಿನ ಮತ ಪಡೆದಿದ್ದೇವೆ ಎಂಬ ನಿಖರ ಮಾಹಿತಿ ಇದ್ದು, ಎಷ್ಟು ಸ್ಥಾನ ಗೆಲ್ಲುತ್ತೇವೆ ಎಂದು ಊಹಿಸಿ' ಎನ್ನುವ ಮೂಲಕ ಕುತೂಹಲ ಹುಟ್ಟಿಸಿದ್ದಾರೆ.

ಹಿಂದೆ ಹೇಳುತ್ತಿದ್ದ ಸಂಖ್ಯೆಯಿಂದ ಹೆಜ್ಜೆ ಹಿಂದಿಡದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ 141 ಸ್ಥಾನಗಳಲ್ಲಿ ಗೆಲ್ಲಲಿದ್ದೇವೆ. 'ಆಪರೇಷನ್ ಹಸ್ತ'ದ ಅವಶ್ಯಕತೆಯೇ ಇಲ್ಲ. ಬೇರೆಯವರ ಬೆಂಬಲ ಕೇಳುವ ಸಂದರ್ಭವೇ ಉದ್ಭವಿಸುವುದಿಲ್ಲ. ಅತಂತ್ರದ ಮಾತು ಇಲ್ಲ, ಯಾರ ಬೆಂಬಲವೂ ಬೇಕಿಲ್ಲ' ಎಂದಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಸಮಾಲೋಚನೆ ನಡೆಸಿದ್ದಾರೆ. ಸಮೀಕ್ಷೆಯ ಮಾಹಿತಿ, ಬಿಜೆಪಿಯ 'ಆಪರೇಷನ್ ಕಮಲ' ಎದುರಿಸಬೇಕಾದ ಎಚ್ಚರಿಕೆ, ಪಕ್ಷದಿಂದ ಆಯ್ಕೆಯಾಗುವವರನ್ನು ಹಿಡಿದಿಡಬೇಕಾದ ಕಾರ್ಯತಂತ್ರಗಳ ಬಗ್ಗೆ ಚರ್ಚೆ ನಡೆಯಿತು ಎಂದು ಗೊತ್ತಾಗಿದೆ.

ಗ್ರಾಮೀಣ, ಸೆಂಟ್ರಲ್‌ನಲ್ಲಿ ಬೆಟ್ಟಿಂಗ್ ಜೋರು

ಧಾರವಾಡ /ಹುಬ್ಬಳ್ಳಿ: ಚುನಾವಣೆ ಮುಗಿಯುತ್ತಿದ್ದಂತೆ ಅಭ್ಯರ್ಥಿಗಳ ಸೋಲು, ಗೆಲುವಿನ ಲೆಕ್ಕಾಚಾರದ ಜತೆಗೆ ಬೆಟ್ಟಿಂಗ್ ಜ್ವರವೂ ಏರುತ್ತಿದೆ.

ಜಿಲ್ಲೆಯಲ್ಲಿ ಅತಿ ಹೆಚ್ಚು ಚರ್ಚೆಯಲ್ಲಿರುವ ಧಾರವಾಡ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿನಯ ಕುಲಕರ್ಣಿ ಗೆಲುವಿನ ಕುರಿತು ಬೆಟ್ಟಿಂಗ್ ಜೋರಾಗಿದೆ. ಕುರಿ, ನಗದು ಬೆಟ್ಟಿಂಗ್ ಇಟ್ಟಿರುವುದು ಸಾಮಾನ್ಯವಾಗಿದೆ. ಆದರೆ ಧಾರವಾಡ ತಾಲ್ಲೂಕಿನ ಯಾದವಾಡ ಗ್ರಾಮದಲ್ಲೊಬ್ಬರು ತಮ್ಮ ಮಗನಿಗೆ ವಿನಯ ಎಂದು ಹೆಸರಿಟ್ಟಿದ್ದಾರೆ. ಒಂದೊಮ್ಮೆ ವಿನಯ ಕುಲಕರ್ಣಿ ಸೋತರೆ ಮಗನ ಹೆಸರನ್ನೇ ಬದಲಿಸುವ ಷರತ್ತು ಹಾಕಿದ್ದಾರೆ.

ಹು–ಧಾ ಸೆಂಟ್ರಲ್ ಕ್ಷೇತ್ರದಲ್ಲೂ ಬೆಟ್ಟಿಂಗ್ ನಡೆಯುತ್ತಿದೆ ಎನ್ನಲಾಗಿದೆ. ಕೆಲವರು ₹1 ಸಾವಿರದಿಂದ ₹1 ಲಕ್ಷದವರೆಗೆ ಬೆಟ್ಟಿಂಗ್ ಕಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿ.ಟಿ.ರವಿ ಆಸ್ಪತ್ರೆಗೆ ದಾಖಲು

ಚಿಕ್ಕಮಗಳೂರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಚಿಕ್ಕಮಗಳೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಿ.ಟಿ.ರವಿ ಅವರು ಕಿಡ್ನಿ ಸ್ಟೋನ್ ಸಮಸ್ಯೆಯಿಂದ ನಗರದ ಆಶ್ರಯ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಜಗದೀಶ ಶೆಟ್ಟರ್ ಪ್ರಶ್ನೆ

ಮೋದಿ ರಾಜಕಾರಣ ಬಿಡುತ್ತಾರೆಯೇ?

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪ್ರಧಾನಿ ನರೇಂದ್ರ ಮೋದಿ ಅವರಿಗೆ 73 ವರ್ಷ. ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ದ ಅವರು ಈಗ ಎರಡನೇ ಅವಧಿಗೆ ಪ್ರಧಾನಿಯಾಗಿದ್ದಾರೆ. ಅವರು ರಾಜಕಾರಣ ಬಿಡುತ್ತಾರೆಯೇ? ಬಿಡಲಿ ಎಂದು ನಾನೂ ಹೇಳುವುದಿಲ್ಲ. ಇನ್ನೊಂದು ಬಾರಿ ಪ್ರಧಾನಿಯಾಗಲಿ ಎಂದು ಬಯಸುತ್ತೇನೆ. ಅದರಂತೆ, ಜನ ಬಯಸುವವರೆಗೂ ನಾನೂ ರಾಜಕಾರಣದಲ್ಲಿರುವೆ' ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಗದೀಶ ಶೆಟ್ಟರ್ ಹೇಳಿದರು.

'ರಾಜ್ಯದಲ್ಲಿ ಎಲ್ಲಾ ಹುದ್ದೆಗಳನ್ನು ಶೆಟ್ಟರ್ ಅನುಭವಿಸಿದ್ದಾರೆ' ಎಂಬ ಪ್ರಲ್ಹಾದ ಜೋಶಿ ಅವರ ಆರೋಪ ಕುರಿತು ನಗರದಲ್ಲಿ ಗುರುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಜೋಶಿ ನಾಲ್ಕು ಬಾರಿ ಸಂಸದರಾಗಿದ್ದಾರೆ. ಸಚಿವರೂ ಆಗಿರುವ ಅವರು, ರಾಜಕಾರಣ ಬಿಡುತ್ತಾರೆಯೇ' ಎಂದು ಸವಾಲು ಹಾಕಿದರು.

'ಶಂಕರ ಪಾಟೀಲ ಮುನೇನಕೊಪ್ಪ ಮೂರು ಬಾರಿ ಶಾಸಕರಾಗಿದ್ದರು. ಹೀಗಾಗಿ ಅವರಿಗೆ ಸಚಿವ ಸ್ಥಾನ ಕೊಡಿಸಲು ಪ್ರಯತ್ನಿಸಿದ್ದೆ. ಅದರಲ್ಲಿ ತಪ್ಪೇನಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಅರವಿಂದ ಬೆಲ್ಲದ ಅವರ ಪರ ಏಕೆ ಲಾಬಿ ಮಾಡಿದರು' ಎಂದು ಪ್ರಶ್ನಿಸಿದರು.

'ಬಿಜೆಪಿಯವರು ಸೋಲುವ ಭಯದಿಂದ ಈ ಚುನಾವಣೆಯಲ್ಲಿ ಸೆಂಟ್ರಲ್ ಕ್ಷೇತ್ರದ ಕೊಳೆಗೇರಿಗಳಲ್ಲಿ ಒಂದು ಮತಕ್ಕೆ ₹500ರಿಂದ ₹1,000ವರೆಗೆ ಹಣ ಹಂಚಿದ್ದಾರೆ. ನಾನು ಬಿಜೆಪಿಯಲ್ಲಿದ್ದಾಗ ಎಂದಿಗೂ ಈ ರೀತಿ ಮಾಡಿಲ್ಲ. ಅತ್ಯಂತ ಕಡಿಮೆ ಹಣ ಖರ್ಚು ಮಾಡಿ ಚುನಾವಣೆ ಎದುರಿಸಿದ್ದೇನೆ' ಎಂದರು.

'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಸಂಘಟಿತ ಪ್ರಯತ್ನ ಮಾಡಿದೆ. ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಿದ್ದರಿಂದ ಕಾಂಗ್ರೆಸ್‌ಗೆ ಬಹುಮತ ಸಿಗಲಿದೆ. ಜೊತೆಗೆ ಲಿಂಗಾಯತರಿಗೆ ಬಿಜೆಪಿ ಅನ್ಯಾಯ ಮಾಡಿದೆ ಎಂಬ ಅಂಶವೂ ಪರಿಣಾಮ ಬೀರಿದೆ' ಎಂದರು.

ಉಪ್ಪಿನ ಮೇಲೆ ಕೈ ಇಟ್ಟು ಪ್ರಮಾಣ

ಮೈಸೂರು: 'ಮೂಲ ಕಾಂಗ್ರೆಸ್ಸಿನ ಕೆಲ ಕಿಡಿಗೇಡಿಗಳು ಸಿದ್ದರಾಮಯ್ಯ ಅವರಿಗೆ ಸುಳ್ಳು ಹೇಳಿದ್ದಾರೆ. ಉಪ್ಪಿನ ಮೇಲೆ ಕೈಯಿಟ್ಟು ಹೇಳುತ್ತಿದ್ದೇನೆ, ಸಾಮಾನ್ಯ ರೈತನ ಮಗನಿಗೆ ಟಿಕೆಟ್ ನೀಡಿದ ಪಕ್ಷಕ್ಕೆ ನಾನು ದ್ರೋಹ ಬಗೆದಿಲ್ಲ' ಎಂದು ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಎಸ್.ಸಿದ್ದೇಗೌಡ ಪ್ರಮಾಣ ಮಾಡಿದರು.

'ಸಿದ್ದೇಗೌಡ ಮೋಸಗಾರ ಎಂದು ಗೊತ್ತಿರಲಿಲ್ಲ. ಅವನು ಇಂಥವನು ಎಂದು ಗೊತ್ತಿದ್ದಿದ್ದರೆ ನಮ್ ಹುಡುಗನನ್ನೇ ನಿಲ್ಲಿಸುತ್ತಿದ್ದೆ' ಎಂದು ಸಿದ್ದರಾಮಯ್ಯ ಅವರು ಹೇಳಿದ್ದ ವಿಡಿಯೊ ಬುಧವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದ ಹಿನ್ನೆಲೆಯಲ್ಲಿ ನಗರದಲ್ಲಿ ಗುರುವಾರ ಅವರು ಸುದ್ದಿಗೋಷ್ಠಿ ನಡೆಸಿ ಸ್ಪಷ್ಟನೆ ನೀಡಿದರು. 'ಜಿ.ಟಿ.ದೇವೇಗೌಡ ಅವರೊಂದಿಗೆ ಬುಕ್ ಆಗಿದ್ದಾರೆ ಎಂದು ನನ್ನ ಮೇಲೆ ದೂರು ಹೇಳಿದವರು ಎಷ್ಟು ಮತವನ್ನು ಪಕ್ಷಕ್ಕೆ ತಂದಿದ್ದಾರೆ ಎಂಬುದು ಮತ ಎಣಿಕೆ ದಿನ ಗೊತ್ತಾಗಲಿದೆ' ಎಂದು ತಿರುಗೇಟು ನೀಡಿದರು. '11 ಮಂದಿ ಟಿಕೆಟ್ ಆಕಾಂಕ್ಷಿಗಳಿದ್ದರೂ, ಜೆಡಿಎಸ್ ಬಿಟ್ಟು ಪಕ್ಷಕ್ಕೆ ಸೇರಿದ ನನಗೆ 'ಬಿ' ಫಾರಂ ಕೊಟ್ಟು ಕಣಕ್ಕಿಳಿಸಲು ಡಿ.ಕೆ. ಶಿವಕುಮಾರ್ ಅವರಿಗೆ ಸೂಚಿಸಿದ ಸಿದ್ದರಾಮಯ್ಯ ಅವರೇ ನನ್ನ ನಾಯಕರು. ಟಿಕೆಟ್ ಸಿಗದ್ದಕ್ಕೆ ಕೆ.ಮರೀಗೌಡ ಸೇರಿದಂತೆ ಹಲವರು ಅಪಪ್ರಚಾರದಲ್ಲಿ ತೊಡಗಿದ್ದರು' ಎಂದು ಆರೋಪಿಸಿದರು.

28 ವಿಧಾನಸಭೆ ಕ್ಷೇತ್ರ: ಶೇ 56.23 ಮಹಿಳೆಯರು; ಶೇ 53.87 ಪುರುಷರಿಂದ ಹಕ್ಕು ಚಲಾವಣೆ

6 ಕ್ಷೇತ್ರದ ಮತದಾನ: ಸ್ತ್ರೀಯರೇ ಮುಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 28 ವಿಧಾನಸಭೆ ಕ್ಷೇತ್ರಗಳಲ್ಲಿ ಮತ್ತೆ ಮತದಾನದ ಪ್ರಮಾಣ ಕಡಿಮೆಯಾಗಿದೆ.

ರಾಜ್ಯದಲ್ಲಿನ ಶೇ 73.19 ಪ್ರಮಾಣಕ್ಕೆ ಹೋಲಿಸಿದರೆ, ಶೇ 18.19 ರಷ್ಟು ಕಡಿಮೆಯಾಗಿದೆ. ಆದರೆ, ಆರು ವಿಧಾನಸಭೆ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿದ್ದಾರೆ. ಒಟ್ಟಾರೆ ಶೇಕಡಾವಾರು ಲೆಕ್ಕಾಚಾರದಲ್ಲೂ ಮಹಿಳೆಯರು ಮುಂದಿದ್ದಾರೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ 28 ಕ್ಷೇತ್ರಗಳಲ್ಲಿ ಶೇ 55.12ರಷ್ಟು ಮತದಾನವಾಗಿತ್ತು. ಈ ಬಾರಿ ಶೇ 55ರಷ್ಟು ಮತದಾನವಾಗಿದೆ. ಶೇ 56.23ರಷ್ಟು ಮಹಿಳೆಯರು, ಶೇ 53.87 ಪುರುಷರು ಹಕ್ಕು ಚಲಾವಣೆ ಮಾಡಿದ್ದಾರೆ.

ರಾಜರಾಜೇಶ್ವರಿನಗರ, ಶಾಂತಿನಗರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಪುಲಕೇಶಿನಗರ, ಯಶವಂತಪುರ ವಿಧಾನಸಭೆ ಕ್ಷೇತ್ರಗಳಲ್ಲಿ ನಡೆದಿರುವ ಮತದಾನದಲ್ಲಿ ಪುರುಷರ ಸಂಖ್ಯೆಗಿಂತ ಮಹಿಳೆಯರು ಹೆಚ್ಚಾಗಿ ಮತದಾನದ ಹಕ್ಕು ಚಲಾಯಿಸಿದ್ದಾರೆ.

ಪುಲಕೇಶಿ ನಗರದ ಕ್ಷೇತ್ರದಲ್ಲಿ ಈ ಪ್ರಮಾಣ ಹೆಚ್ಚಾಗಿದ್ದು, ಇಲ್ಲಿ ಒಟ್ಟು 1,22,997 ಮಂದಿ ಮತದಾನ ಮಾಡಿದ್ದು, ಇದರಲ್ಲಿ 57,568 ಪುರುಷರು, 65,417 ಮಹಿಳೆಯರಿದ್ದಾರೆ. ಮಲ್ಲೇಶ್ವರದಲ್ಲಿ ಒಟ್ಟು 1,25,278 ಮತದಾನದಲ್ಲಿ 61,948 ಪುರುಷರು, 63,330 ಮಹಿಳೆಯರು; ರಾಜರಾಜೇಶ್ವರಿನಗರದಲ್ಲಿ 2,61,390ರಲ್ಲಿ 1,29,853 ಪುರುಷರು, 1,31,511 ಮಹಿಳೆಯರು; ಮಹಾಲಕ್ಷ್ಮಿ ಲೇಔಟ್‌ನಲ್ಲಿ 1,58,419ರಲ್ಲಿ 78,734 ಪುರುಷರು, 79,673 ಮಹಿಳೆಯರು; ಯಶವಂತಪುರದಲ್ಲಿ 3,56,737ರಲ್ಲಿ 1,78,107 ಪುರುಷರು, 1,78,620 ಮಹಿಳೆಯರು; ಶಾಂತಿನಗರದಲ್ಲಿ 1,19,514ರಲ್ಲಿ 59,397 ಪುರುಷರು, 60,112 ಮಹಿಳೆಯರು ಮತ ಚಲಾಯಿಸಿದ್ದಾರೆ.



ಜಯನಗರದ ಎಸ್‌.ಎಸ್‌.ಎಂ.ಆರ್‌. ವಿ ಕಾಲೇಜು ಕ್ಯಾಂಪಸ್‌ನಲ್ಲಿ ಇವಿಎಂ ಇಡಲಾದ ಸ್ಟ್ರಾಂಗ್ ರೂಮ್‌ಗಳ ಸುರಕ್ಷತೆಗಾಗಿ ಸೇನಾದಳ ಹಾಗೂ ಪೊಲೀಸ್ ಪಡೆಯನ್ನು ಆಯೋಜಿಸಲಾಗಿದೆ

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ವಿಧಾನಸಭೆ ಕ್ಷೇತ್ರ	ಮತ ಎಣಿಕೆ ಕೇಂದ್ರ
ರಾಜರಾಜೇಶ್ವರಿ ನಗರ, ಶಿವಾಜಿನಗರ, ಶಾಂತಿನಗರ, ಗಾಂಧಿನಗರ, ರಾಜಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ	ಬಿಎಂಎಸ್ ಮಹಿಳೆಯರ ಕಾಲೇಜು, ಬ್ಯೂಗಲ್ ರಾಕ್ ರಸ್ತೆ, ಗಾಂಧಿಬಜಾರ್, ಬಸವನಗುಡಿ.
ಗೋವಿಂದರಾಜನಗರ, ವಿಜಯನಗರ, ಬಸವನಗುಡಿ, ಪದ್ಮನಾಭನಗರ, ಬಿಟಿಎಂ ಲೇಔಟ್, ಜಯನಗರ, ಬೊಮ್ಮನಹಳ್ಳಿ	ಎಸ್‌ಎಸ್‌ಎಂಆರ್‌ವಿ ಪಿಯು ಕಾಲೇಜು, 36ನೇ ಅಡ್ಡರಸ್ತೆ, 4ನೇ ಬ್ಲಾಕ್, ಜಯನಗರ.
ಕೆ.ಆರ್. ಪುರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಹೆಬ್ಬಾಳ, ಪುಲಕೇಶಿನಗರ, ಸರ್ವಜ್ಞನಗರ, ಸಿ.ವಿ. ರಾಮನ್ ನಗರ	ಮೌಂಟ್ ಕಾರ್ಮೆಲ್ ಕಾಲೇಜು, ಪ್ಯಾಲೇಸ್ ರಸ್ತೆ, ವಸಂತನಗರ.
ಯಲಹಂಕ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ, ಆನೇಕಲ್	ಸೇಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲ್, ವೈದೇಹಿ ಆಸ್ಪತ್ರೆ ಹಿಂಭಾಗ, ವಿಠ್ಠಲ ಮಲ್ಯ ರಸ್ತೆ.

ಚುನಾವಣೆ ಜಿಲ್ಲಾವಾರು ಮತದಾನದ ವಿವರ

ಚುನಾವಣಾ ಜಿಲ್ಲೆ	ಪುರುಷರು	ಮಹಿಳೆಯರು	ಇತರೆ	ಒಟ್ಟು	ಶೇಕಡ
ಬೆಂಗಳೂರು ಕೇಂದ್ರ	5,01,241	4,92,423	73	9,93,737	55.50
ಬೆಂಗಳೂರು ಉತ್ತರ	5,78,477	5,76,194	128	11,54,799	52.59
ಬೆಂಗಳೂರು ದಕ್ಷಿಣ	5,46,421	5,27,584	58	10,74,063	52.33
ಬೆಂಗಳೂರು ನಗರ	10,81,148	10,39,262	116	21,20,526	57.71
ಒಟ್ಟು	27,07,287	26,35,463	375	53,43,125	55

ಬಿಬಿಎಂಪಿಯಿಂದ ವಿಧಾನಸಭೆಯತ್ತ ನೋಟ...

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಂಟು ಮಾಜಿ ಸದಸ್ಯರು ವಿಧಾನಸಭೆ ಚುನಾವಣೆಯ ಕಣದಲ್ಲಿದ್ದು, ವಿಧಾನಸೌಧದಲ್ಲಿ ಆಸನ ಅಲಂಕರಿಸುವತ್ತ ನೋಟ ಹರಿಸಿದ್ದಾರೆ.

ಶಾಸಕ ಚುನಾವಣೆಗೆ ಮುನ್ನ ಪಾಲಿಕೆ ಚುನಾವಣೆಗಳು ಮುನ್ನುಡಿಯಾಗಲಿದ್ದು, ಇಲ್ಲಿನ ಜಯ ಹಾಗೂ ಅನುಭವದ ಆಧಾರದ ಮೇಲೆ ವಿಧಾನಸಭೆ ಚುನಾವಣೆ ಕಣಕ್ಕಿಳಿದಿದ್ದಾರೆ.

ಬೆಂಗಳೂರು ನಗರ ಪಾಲಿಕೆಯಾಗಿದ್ದಾಗಿನಿಂದ ಅಂದರೆ 1997ರಿಂದಲೂ ಕಾಚರಕನಹಳ್ಳಿ ವಾರ್ಡ್ ಕಾರ್ಪೊರೇಟರ್ ಆಗಿ, ವಿರೋಧ ಹಾಗೂ ಪ್ರತಿಪಕ್ಷ ನಾಯಕನಾಗಿದ್ದ ಪದ್ಮನಾಭರೆಡ್ಡಿ ಅವರು ಜೆಡಿಎಸ್‌ನಿಂದ ಬಿಜೆಪಿಗೆ ಬಂದವರು. ಅವರು ಎರಡನೇ ಬಾರಿಗೆ ಸರ್ವಜ್ಞನಗರ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

ಎಚ್. ರವೀಂದ್ರ ಕೂಡ ಪಾಲಿಕೆಯ ಹಿರಿಯ ಸದಸ್ಯರಾಗಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದವರು. ವಿಜಯನಗರದಲ್ಲಿ ಕಾರ್ಪೊರೇಟರ್ ಆಗಿದ್ದ ಅವರು ಆಡಳಿತ ಪಕ್ಷ, ವಿರೋಧ ಪಕ್ಷದ ನಾಯಕರಾಗಿದ್ದರು. ಇದೀಗ ಮೂರನೇ ಬಾರಿ ವಿಧಾನಸಭೆ ಕಣದಲ್ಲಿ ಅದೃಷ್ಟ ಪರೀಕ್ಷೆಯಲ್ಲಿದ್ದಾರೆ. ವಿಜಯನಗರ, ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದರು. ಈ ಬಾರಿ ವಿಜಯನಗರ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಪದ್ಮನಾಭರೆಡ್ಡಿ ಹಾಗೂ ರವೀಂದ್ರ ಅವರಿಬ್ಬರೂ ಈ ಹಿಂದೆ ಮೇಯರ್ ಆಗಲು ಸಾಕಷ್ಟು ಪ್ರಯತ್ನಪಟ್ಟಿದ್ದರು.



ಪದ್ಮನಾಭರೆಡ್ಡಿ | ಎಚ್. ರವೀಂದ್ರ | ಕೇಶವಮೂರ್ತಿ | ಕೆ.ಶಿವಕುಮಾರ್ | ರಾಮಮೂರ್ತಿ | ಉಮೇಶ್ ಶೆಟ್ಟಿ | ಎನ್.ಚಂದ್ರ | ಆನಂದ್‌ಕುಮಾರ್

ಕಣದಲ್ಲಿರುವ ಕಾರ್ಪೊರೇಟರ್‌ಗಳು

ಪದ್ಮನಾಭರೆಡ್ಡಿ (ಸರ್ವಜ್ಞನಗರ), ಎಚ್. ರವೀಂದ್ರ (ವಿಜಯನಗರ), ಸಿ.ಕೆ. ರಾಮಮೂರ್ತಿ (ಜಯನಗರ), ಕೇಶವಮೂರ್ತಿ (ಮಹಾಲಕ್ಷ್ಮಿ ಲೇಔಟ್), ಎನ್.ಚಂದ್ರ (ಶಿವಾಜಿನಗರ), ಶಿವಕುಮಾರ್ (ಶಾಂತಿನಗರ), ಆನಂದಕುಮಾರ್ (ಸಿ.ವಿ. ರಾಮನ್‌ನಗರ), ಉಮೇಶ್ ಶೆಟ್ಟಿ (ಗೋವಿಂದರಾಜನಗರ).

ಇನ್ನು, ಸಿ.ಕೆ. ರಾಮಮೂರ್ತಿ ಅವರು ಪಟ್ಟಾಭಿರಾಮನಗರ ವಾರ್ಡ್ ಕಾರ್ಪೊರೇಟರ್ ಆಗಿದ್ದವರು. ಶಾಸಕರಾಗಿದ್ದ ವಿಜಯಕುಮಾರ್ ಅವರಿಗೆ ಚುನಾವಣೆ ನಡೆಸಿರುವ ಅನುಭವ ವಿರುವ ರಾಮಮೂರ್ತಿ ಇದೀಗ ಅದೇ ಜಯನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

ಗೋವಿಂದರಾಜನಗರ ವಾರ್ಡ್ ಕಾರ್ಪೊರೇಟರ್ ಆಗಿದ್ದ ಉಮೇಶ್ ಶೆಟ್ಟಿ ಅವರು ವಿಜಯನಗರ ವಿಧಾನಸಭೆ ಕ್ಷೇತ್ರದ ಆಕಾಂಕ್ಷಿಯಾಗಿದ್ದರು. ಬದಲಾದ ರಾಜಕೀಯ ಸನ್ನಿವೇಶದಿಂದ ವಿ. ಸೋಮಣ್ಣ ಅವರ ಬದಲು ಗೋವಿಂದರಾಜನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

ಕಾಂಗ್ರೆಸ್‌ನ ಕೇಶವಮೂರ್ತಿ ಅವರು ಕಾರ್ಪೊರೇಟರ್ ಆಗಿ ಹಲವು ಹುದ್ದೆಗಳಲ್ಲಿದ್ದರು. ರಾಜಾಜಿನಗರ ಕ್ಷೇತ್ರದಲ್ಲಿ ಕಣಕ್ಕಿಳಿಯಲು ಬಯಸಿದ್ದ ಅವರಿಗೆ ಕಾಂಗ್ರೆಸ್ ಪಕ್ಷ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದಲ್ಲಿ ಕಣಕ್ಕಿಳಿಸಿದೆ. ಕಾರ್ಪೊರೇಟರ್‌ಗಳಾಗಿದ್ದ ಕಾಂಗ್ರೆಸ್‌ನ ಆನಂದಕುಮಾರ್ ಹಾಗೂ ಬಿಜೆಪಿಯ ಶಿವಕುಮಾರ್ ಅವರದ್ದೇ ವಾರ್ಡ್‌ಗಳ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರಗಳಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಕಾಂಗ್ರೆಸ್‌ನಿಂದ ಕಾರ್ಪೊರೇಟ್ ಆಗಿದ್ದ ಎನ್. ಚಂದ್ರ ಅವರು ಬಿಜೆಪಿಯಿಂದ ವಿಧಾನಸಭೆ ಚುನಾವಣೆಯ ಅಭ್ಯರ್ಥಿಯಾಗಿದ್ದಾರೆ. ಮಹಿಳೆಯರಲ್ಲಿ ನಾಮಪತ್ರ ಸಲ್ಲಿಸಿದ್ದ ಮಾಜಿ ಮೇಯರ್ ಗಂಗಾಂಬಿಕೆ ಕಣದಿಂದ ಹಿಂದೆ ಸರಿದರು.

ರಾಮಲಿಂಗಾರೆಡ್ಡಿ, ಸುರೇಶ್ ಕುಮಾರ್, ಕೆ. ಗೋಪಾಲಯ್ಯ, ಮುನಿರತ್ನ, ಬೈರತಿ ಬಸವರಾಜು ಅವರು ಕೂಡ ಪಾಲಿಕೆ ಸದಸ್ಯರಾಗಿದ್ದರು. ನಂತರದ ದಿನಗಳಲ್ಲಿ ಇವರೆಲ್ಲ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ, ಶಾಸಕರಾಗಿ ಸಚಿವರೂ ಆಗಿದ್ದರು ಎಂಬುದು ಗಮನಾರ್ಹ. ಎಸ್. ರಘು ನಾಲ್ಕು ಬಾರಿ ಶಾಸಕರಾಗಿದ್ದಾರೆ.

‘ಮಗು ತಾಯಿ ಬಳಿ ಇದ್ದರೆ ಚೆನ್ನ’

ಬೆಂಗಳೂರು: ಕೌಟುಂಬಿಕ ವ್ಯಾಜ್ಯವೊಂದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಹೈಕೋರ್ಟ್, ‘ತನ್ನ ಮಗಳು ಅನುಕೂಲಕರ ವಾತಾವರಣದಲ್ಲಿ ಬೆಳೆಯಲು ಅವಕಾಶ ಕಲ್ಪಿಸದ ತಂದೆಯ ಮನವಿಯನ್ನು ಪುರಸ್ಕರಿಸಲು ಸಾಧ್ಯವಿಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಸಂಬಂಧ ತಂದೆಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಒಂಬತ್ತು ವರ್ಷದ ಹೆಣ್ಣು ಮಗುವಿಗೆ ಸೌಹಾರ್ದಯುತ ವಾತಾವರಣ ನಿರ್ಮಿಸಲು ಸಾಧ್ಯವಾಗದ ತಂದೆ, ಮಗುವನ್ನು ತನ್ನ ವಶಕ್ಕೆ ಕೇಳುವುದು ಸಮರ್ಥನೀಯವಲ್ಲ. ಅವರು ಅದಕ್ಕೆ ಅರ್ಹರೂ ಅಲ್ಲ. ಹೀಗಾಗಿ, ಬಾಲಕಿಯು ತನ್ನ ತಾಯಿಯೊಂದಿಗೇ ಇರಬೇಕಾಗುತ್ತದೆ’ ಎಂದು ಆದೇಶಿಸಿದೆ.

‘ಪೋಷಕರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಬುದ್ಧಿಶಕ್ತಿ ಮಕ್ಕಳಲ್ಲಿ ಇರುವುದಿಲ್ಲ. ಅಂತೆಯೇ, ಮಗುವಿನ ಸಾಮಾಜಿಕ, ಭೌತಿಕ, ಮಾನಸಿಕ ಹಾಗೂ ಶಾರೀರಿಕ ಬೆಳವಣಿಗೆಗೆ ಪೋಷಕರು ಶ್ರಮಿಸಬೇಕು. ಈ ಪ್ರಕರಣದಲ್ಲಿ ಬಾಲಕಿ ನಾಲ್ಕು ವರ್ಷದವಳಿದ್ದಾಗಿನಿಂದಲೂ ತನ್ನ ತಂದೆ-ತಾಯಿ ಜಗಳವಾಡುತ್ತಿರುವುದನ್ನು ಗಮನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಹೆಣ್ಣು ಮಗು ತನ್ನ ತಾಯಿಯೊಂದಿಗೆ ನೆಲೆಸುವುದು ಸೂಕ್ತ’ ಎಂದು ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ಭಿನ್ನ ಧರ್ಮಗಳಿಗೆ ಸೇರಿದ ದಂಪತಿ 2005ರಲ್ಲಿ ವಿವಾಹವಾಗಿದ್ದರು. ಇವರಿಗೆ 2014ರಲ್ಲಿ ಹೆಣ್ಣು ಮಗು ಜನಿಸಿತ್ತು. ಮನಸ್ತಾಪದ ಕಾರಣ ಪತ್ನಿ ನಾಲ್ಕು ವರ್ಷದ ಮಗುವಿನೊಂದಿಗೆ ಪ್ರತ್ಯೇಕವಾಗಿ ನೆಲೆಸಿದ್ದರು. ನಂತರ ಪತಿ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಇದೇ ವೇಳೆ ಪತಿ, ‘ನಾನು ಮಗುವಿನ ಕಾನೂನು ಬದ್ಧ ಪೋಷಕ’ ಎಂದು ಘೋಷಿಸುವಂತೆ ಕೋರಿದ್ದ ಮತ್ತೊಂದು ಅರ್ಜಿಯ ವಿಚಾರಣೆ ನಡೆಸಿದ್ದ ಕೌಟುಂಬಿಕ ನ್ಯಾಯಾಲಯ, ‘ಮಗಳು ಬೇಸಿಗೆ ರಜೆಯಲ್ಲಿ ತಂದೆಯೊಂದಿಗೆ ನೆಲೆಸಬಹುದು’ ಎಂದು ಅವಕಾಶ ಕಲ್ಪಿಸಿಕೊಟ್ಟಿತ್ತು. ಪತ್ನಿಗೆ ಜೀವನಾಂಶ ನೀಡುವಂತೆ ನಿರ್ದೇಶನ ನೀಡಿತ್ತು.

19ಕ್ಕೆ ಜ್ಞಾನದ ಪರಿಕಲ್ಪನೆ ಬಗ್ಗೆ ಚರ್ಚೆ

ಬೆಂಗಳೂರು: ದೊಮ್ಮಲೂರಿನಲ್ಲಿರುವ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ (ಬಿಐಸಿ) ಇದೇ 19ರಂದು ಸಂಜೆ 4 ಗಂಟೆಗೆ ಜ್ಞಾನದ ಪರಿಕಲ್ಪನೆ ಬಗ್ಗೆ ‘ಸರ್ವಂಟ್ಸ್ ಆಫ್ ನಾಲೆಜ್’ ಶೀರ್ಷಿಕೆಯಡಿ ಚರ್ಚೆ ಹಮ್ಮಿಕೊಳ್ಳಲಾಗಿದೆ.

ಲೇಖಕ ಹಾಗೂ ‘ಪಬ್ಲಿಕ್ ರಿಸೋರ್ಸ್’ ಸಂಸ್ಥಾಪಕ ಕಾರ್ಲ್ ಮಲಾಮುಡ್, ಅಂಬೇಡ್ಕರ್ ಕಾನೂನು ವಿಶ್ವವಿದ್ಯಾಲಯದ ಡೀನ್ ಲಾರೆನ್ಸ್ ಲಿಯಾಂಗ್ ಹಾಗೂ ಡಿಜಿಟಲ್ ತಂತ್ರಜ್ಞ ಓಂಶಿವಪ್ರಕಾಶ್ ಎಚ್.ಎಲ್. ಪಾಲ್ಗೊಳ್ಳಲಿದ್ದಾರೆ.

ಸಾರ್ವಜನಿಕವಾಗಿ ಲಭ್ಯವಿರುವ ಪುಸ್ತಕಗಳು, ಹಸ್ತಪ್ರತಿಗಳ ಡಿಜಿಟಲೀಕರಣಗೊಳಿಸುವ ಪ್ರಕ್ರಿಯೆ ಬಗ್ಗೆ ತಿಳಿಸಲಾಗುತ್ತದೆ. ಡಿಜಿಟಲೀಕರಣಗೊಂಡ ವಿಷಯ ವಸ್ತುವನ್ನು ಪಡೆಯಬಹುದಾದ ಕ್ರಮ ಸೇರಿ ವಿವಿಧ ಪ್ರಕ್ರಿಯೆಗಳ ಬಗ್ಗೆ ತಜ್ಞರು ವಿವರಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರೌಢಶಾಲೆ ದತ್ತು ಪಡೆದ ಗೀತಾ ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಹೊಸಪೇಟೆ: ಚಲನಚಿತ್ರ ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ಅವರು ತಾಲ್ಲೂಕಿನ ಇಂಗಳಗಿ ಸಮೀಪದ ಅನ್ನಪೂರ್ಣೇಶ್ವರಿ ವಿದ್ಯಾಪೀಠ ಉಚಿತ ವಸತಿಯುತ ಪ್ರೌಢಶಾಲೆಯನ್ನು ದತ್ತು ತೆಗೆದುಕೊಂಡಿದ್ದಾರೆ.

ಸಂಡೂರು ತಾಲ್ಲೂಕಿನ ಜೋಗದ ದಿಗಂಬರ ರಾಜಭಾರತಿ ಸ್ವಾಮೀಜಿ 2012ರಲ್ಲಿ ಈ ಶಾಲೆ ಆರಂಭಿಸಿದ್ದರು. ಆದರೆ, ಅನುದಾನದ ಕೊರತೆಯಿಂದ ಶಾಲೆ ಮೂಲಸೌಕರ್ಯದಿಂದ ವಂಚಿತವಾಗಿತ್ತು. ಅದರ ಪ್ರಗತಿ ಕುಂಠಿತಗೊಂಡಿತ್ತು. ಕೆಲ ತಿಂಗಳ ಹಿಂದೆ ‘ವೇದ’ ಸಿನಿಮಾದ ಪ್ರಚಾರಕ್ಕಾಗಿ ನಗರಕ್ಕೆ ಬಂದಿದ್ದ ನಟ ಶಿವರಾಜ್‌ಕುಮಾರ್ ಹಾಗೂ ಅವರ ಪತ್ನಿ ಗೀತಾ ಅವರ ಗಮನಕ್ಕೆ ಶಾಲೆಯ ವಿಚಾರ ತರಲಾಗಿತ್ತು. ಬಳಿಕ ಇಬ್ಬರೂ ಅಲ್ಲಿಗೆ ಭೇಟಿ ನೀಡಿ, ಶಾಲೆ ದತ್ತು ಪಡೆಯುವ ಭರವಸೆ ಕೊಟ್ಟಿದ್ದರು.

ಕೊಟ್ಟ ಮಾತಿನಂತೆ ಗೀತಾ ಅವರು ಗುರುವಾರ ಶಾಲೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಶಾಲೆ ದತ್ತು ತೆಗೆದುಕೊಳ್ಳುವುದಾಗಿ ಘೋಷಿಸಿದರು. ಶೀಘ್ರದಲ್ಲೇ ಟ್ರಸ್ಟ್ ರಚಿಸಿ, ಪದಾಧಿಕಾರಿಗಳನ್ನು ನೇಮಕ ಮಾಡಿ, ಶಾಲೆಯ ಅಭಿವೃದ್ಧಿಗೆ ಕ್ರಮ ಜರುಗಿಸಲಾಗುವುದು ಎಂದು ಭರವಸೆ ಕೊಟ್ಟಿದ್ದಾರೆ ಎಂದು ಸಿನಿಮಾ ಪತ್ರಕರ್ತ ಸತೀಶ್ ಬಿಲ್ಲಾಡಿ ತಿಳಿಸಿದರು.

8 ರಿಂದ 10ನೇ ತರಗತಿಯ ಕನ್ನಡ ಶಾಲೆಯಲ್ಲಿ ಪ್ರಯೋಗಾಲಯ, ಗ್ರಂಥಾಲಯ, ಸುಸಜ್ಜಿತ ಆಟದ ಮೈದಾನ ನಿರ್ಮಿಸುವ ಭರವಸೆ ಕೊಟ್ಟಿದ್ದಾರೆ ಎಂದು ಹೇಳಿದರು.

ನಾಡಿಗ್ ಪ್ರಶಸ್ತಿಗೆ ಆಯ್ಕೆ

ತುಮಕೂರು: ನಾಡಿಗ್ ಸಾಹಿತ್ಯ ಪ್ರತಿಷ್ಠಾನ ಕೊಡಮಾಡುವ 2022ನೇ ಸಾಲಿನ ಡಾ.ಕವಿತಾಕೃಷ್ಣ ಸಾಹಿತ್ಯ ಪ್ರಶಸ್ತಿ ಹಾಗೂ ದಿ.ಡಾ.ನಾಡಿಗ್ ಕೃಷ್ಣಮೂರ್ತಿ ಪತ್ರಿಕೋದ್ಯಮ ಪ್ರಶಸ್ತಿ ಪ್ರಕಟಿಸಲಾಗಿದೆ. ಎರಡು ಪ್ರಶಸ್ತಿಗೆ ತಲಾ ಇಬ್ಬರನ್ನು ಆಯ್ಕೆ ಮಾಡಲಾಗಿದೆ.

ಡಾ.ಕವಿತಾಕೃಷ್ಣ ಸಾಹಿತ್ಯ ಪ್ರಶಸ್ತಿಗೆ ಬೆಂಗಳೂರಿನ ಪ್ರಮೋದ್ ಕುಲಕರ್ಣಿ, ತುಮಕೂರಿನ ಡಾ.ಭರತ್‌ರಾಜ್ ಆಯ್ಕೆಯಾಗಿದ್ದಾರೆ. ದಿ.ಡಾ.ನಾಡಿಗ್ ಕೃಷ್ಣಮೂರ್ತಿ ಪತ್ರಿಕೋದ್ಯಮ ಪ್ರಶಸ್ತಿಗೆ ತೊಗ ಅಡವೀಶಪ್ಪ, ಜೀರಿಗೆ ಲೋಕೇಶ್ ಆಯ್ಕೆಯಾಗಿದ್ದಾರೆ. ಜೂನ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ನಕಲು ಜಾತಿ ಪತ್ರ: ತಹಶೀಲ್ದಾರ್ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಜಾತಿ ಪ್ರಮಾಣ ಪತ್ರ ನೀಡಿದ್ದ ಪ್ರಕರಣದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಸೇರಿದಂತೆ ನಾಲ್ವರ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯ ಇನ್‌ಸ್ಪೆಕ್ಟರ್ ಎ.ವಿ. ವೆಂಕಟೇಶ್ ಮೂರ್ತಿ ಅವರು ದೂರು ನೀಡಿದ್ದಾರೆ.

ನಕಲಿ ಜಾತಿ ಪ್ರಮಾಣ ಪತ್ರ ಪಡೆದಿದ್ದ ಡಿ.ಎಂ. ವಾಗೀಶ್, ಪತ್ರ ಪಡೆಯಲು ಸಹಕರಿಸಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್, ಕಂದಾಯ ನಿರೀಕ್ಷಕ ಹಾಗೂ ಗ್ರಾಮ ಲೆಕ್ಕಾಧಿಕಾರಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಗೆ ನೋಟಿಸ್ ನೀಡಿ, ಮುಂದಿನ ಕ್ರಮ ಜರುಗಿಸಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಾವಣಗೆರೆ ನಿವಾಸಿ ವಾಗೀಶ್, ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಾಸವಿರುವುದಾಗಿ ಸುಳ್ಳು ದಾಖಲೆ ಸೃಷ್ಟಿಸಿದ್ದರು. ಲಿಂಗಾಯತ ಜಾತಿಗೆ ಸೇರಿದ್ದ ವಾಗೀಶ್, ‘ಬೇಡ ಜಂಗಮ’ ಜಾತಿ ಹೆಸರಿನಲ್ಲಿ 2021ರ ಜುಲೈ 6ರಂದು ಪರಿಶಿಷ್ಟ ಜಾತಿ (ಎಸ್.ಸಿ) ಪ್ರಮಾಣ ಪತ್ರ ಪಡೆದಿದ್ದರು. ಇವರದ್ದು ಸುಳ್ಳು ಜಾತಿ ಪ್ರಮಾಣ ಪತ್ರವೆಂಬುದು ಗೊತ್ತಾಗುತ್ತಿದ್ದಂತೆ ಜಾತಿ ಪರಿಶೀಲನೆ ಸಮಿತಿ ಹಾಗೂ ಜಿಲ್ಲಾಧಿಕಾರಿ ತನಿಖೆ ನಡೆಸಿತ್ತು.’

‘ವಾಗೀಶ್ ಅವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿದ್ದು ಗೊತ್ತಾಗುತ್ತಿದ್ದಂತೆ, ಅದನ್ನು ರದ್ದುಪಡಿಸಲಾಗಿದೆ. ಜೊತೆಗೆ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಇನ್‌ಸ್ಪೆಕ್ಟರ್ ದೂರು ನೀಡಿದ್ದಾರೆ. ವಾಗೀಶ್ ಯಾವ ರೀತಿ ಪ್ರಮಾಣ ಪತ್ರ ಪಡೆದಿದ್ದಾರೆ ಎನ್ನುವ ಕುರಿತು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಐವರಿಗೆ ಜೈಲು

ಇಂದೋರ್(ಪಿಟಿಐ): ವೃತ್ತಿಪರ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಹಾಗೂ ನೇಮಕಾತಿ ಸಂಬಂಧ ಮಧ್ಯಪ್ರದೇಶ ವ್ಯವಸಾಯಿಕ್ ಮಂಡಳಿ (ವ್ಯಾಪಂ) ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಐವರಿಗೆ ನ್ಯಾಯಾಲಯ ಗುರುವಾರ ಐದು ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ.

ಕದ್ರಿ ಅಂಗಣ ಪ್ರವೇಶ ಮೂವರ ವಶ

ಮಂಗಳೂರು: ನಗರದ ಕದ್ರಿ ಮಂಜುನಾಥ ದೇವಸ್ಥಾನದ ಅಂಗಣಕ್ಕೆ ಮೂವರು ಯುವಕರು ಬೈಕಿನಲ್ಲಿ ಗುರುವಾರ ರಾತ್ರಿ ಪ್ರವೇಶಿಸಿದ್ದು, ಅವರನ್ನು ಸ್ಥಳೀಯರು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.

ಯುವಕರು ಮಾತನಾಡಿರುವ ವಿಡಿಯೊವನ್ನು ಬಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ತಿನ ಮಾಧ್ಯಮ ಬಳಗದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಹಂಚಿಕೊಳ್ಳಲಾಗಿದೆ. ಅದರಲ್ಲಿ, ಯುವಕರು ತಮ್ಮನ್ನು ಮುಸ್ಲಿಮರೆಂದೂ ಅಸ್ಸೈಗೋಳಿಯವರು ಎಂದೂ ಹೇಳಿಕೊಂಡಿದ್ದಾರೆ. ‘ಕಾಟಿಪಳ್ಳಕ್ಕೆ ಹೊರಟ ತಾವು ಜಿಪಿಎಸ್ ಹಾಕಿಕೊಂಡು ಬೈಕಿನಲ್ಲಿ ಹೋಗುತ್ತಿದ್ದೆವು. ದಾರಿತಪ್ಪಿ ಇಲ್ಲಿಗೆ ಬಂದೆವು’ ಎಂದೂ ಹೇಳಿಕೊಂಡಿದ್ದಾರೆ.

ಪಾದಚಾರಿ ಮಾರ್ಗದಲ್ಲಿ ಟೊಂಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರಿನಿಟಿ ಮೆಟ್ರೊ ನಿಲ್ದಾಣದ ಸಮೀಪದ ಮುಖ್ಯರಸ್ತೆಯ ಮರಗಳ ಟೊಂಗೆಗಳನ್ನು ಕಡಿದು ಪಾದಚಾರಿ ಮಾರ್ಗದಲ್ಲಿ ಹಾಕಲಾಗಿದೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಸಂಚಕಾರ ಬಂದಿದೆ.

ಎಂ.ಜಿ. ರಸ್ತೆಯ ಭಾರತ ಪೆಟ್ರೋಲ್ ಬಂಕ್‌ನಿಂದ ಟ್ರಿನಿಟಿ ಮೆಟ್ರೊ ನಿಲ್ದಾಣದ ಪಾದಚಾರಿ ಮಾರ್ಗದ ಉದ್ದಕ್ಕೂ ಇರುವ ಮರಗಳ ಟೊಂಗೆಗಳನ್ನು ಎರಡು ಮೂರು ದಿನಗಳ ಹಿಂದೆಯೇ ಕತ್ತರಿಸಿ ಪಾದಚಾರಿ ಮಾರ್ಗದಲ್ಲಿ ಹಾಕಲಾಗಿದೆ. ಅವುಗಳನ್ನು ವಿಲೇವಾರಿ ಮಾಡಿಲ್ಲ ಇದರಿಂದ ಸಾರ್ವಜನಿಕರ ಸಂಚಾರಕ್ಕೆ ಸಮಸ್ಯೆಯಾಗಿದೆ.



ಎಂ.ಜಿ. ರಸ್ತೆಯ ಪಾದಚಾರಿ ಮಾರ್ಗದಲ್ಲಿ ಮರದ ಟೊಂಗೆಗಳನ್ನು ಕಡಿದು ಹಾಕಲಾಗಿದೆ —ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ

‘ಅಪಾಯ ಸಂಭವಿಸುವ ಮುನ್ನ ಟೊಂಗೆಗಳನ್ನು ವಿಲೇವಾರಿ ಮಾಡಬೇಕು’ ಎಂದು ಟೆಕ್ಕಿ ಸೂರಜ್ ಆಗ್ರಹಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋಗಾಗಿ ಈ ಟೊಂಗೆಗಳನ್ನು ಕತ್ತರಿಸಲಾಗಿತ್ತು. ಆದರೆ, ಈ ಮಾರ್ಗದ ರೋಡ್ ಶೋ ರದ್ದಾಯಿತು. ನಿರ್ಲಕ್ಷ್ಯವಹಿಸಿರುವ ಬಿಬಿಎಂಪಿ ಸಿಬ್ಬಂದಿ ಈ ಟೊಂಗೆಗಳನ್ನು ತೆರವುಗೊಳಿಸಿಲ್ಲ’ ಎಂದು ರಂಜನ್ ತಿಳಿಸಿದರು.

ಸಿ.ಎಂ.ಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಾರ್ಯಕ್ರಮ

1,201 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಎಂ.ಆರ್ ತಾಂತ್ರಿಕ ಮಹಾವಿದ್ಯಾಲಯದ 1,201 ವಿದ್ಯಾರ್ಥಿಗಳಿಗೆ ಗುರುವಾರ ಪದವಿ ಪ್ರಮಾಣ ಪತ್ರಗಳನ್ನು ನೀಡಲಾಯಿತು.

ಗುರುವಾರ ನಡೆದ 20ನೇ ಪದವಿ ಪ್ರದಾನ ಕಾರ್ಯಕ್ರಮದಲ್ಲಿ 2022–23ನೇ ಸಾಲಿನಲ್ಲಿ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಕಂಪ್ಯೂಟರ್ ಅಪ್ಲಿಕೇಷನ್ ಕೋರ್ಸ್‌ಗಳಲ್ಲಿ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷ ಪ್ರೊ.ಟಿ.ಜಿ. ಸೀತಾರಾಮ್ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ‘ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಕೈಗೊಳ್ಳಬೇಕು. ಈ ಮೂಲಕ ಸದೃಢ ಭಾರತ ನಿರ್ಮಿಸಬೇಕು. ತಂತ್ರಜ್ಞಾನ ಕ್ಷೇತ್ರದಲ್ಲಿ ಸೃಜನಶೀಲತೆ ಪ್ರಮುಖ ಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ನವೀನ ಆಲೋಚನೆಗಳನ್ನು ಮಾಡಬೇಕು. ಉದಯೋನ್ಮುಖ ಎಂಜಿನಿಯರ್‌ಗಳು ಈ ದೇಶದ ಭವಿಷ್ಯ’ ಎಂದು ಹೇಳಿದರು.



ಸಿ.ಎಂ.ಆರ್ ತಾಂತ್ರಿಕ ಮಹಾವಿದ್ಯಾಲಯದ 20ನೇ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯೊಬ್ಬರಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್‌ನ ಅಧ್ಯಕ್ಷ ಪ್ರೊ.ಟಿ.ಜಿ. ಸೀತಾರಾಮ್ ಪದವಿ ಪ್ರಮಾಣ ಪತ್ರ ನೀಡಿದರು. ಸಿ.ಎಂ.ಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಡಾ.ಕೆ.ಸಿ ರಾಮಮೂರ್ತಿ, ಸಬೀತಾ ರಾಮಮೂರ್ತಿ ಇದ್ದಾರೆ

ಸಿ.ಎಂ.ಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಡಾ.ಕೆ.ಸಿ. ರಾಮಮೂರ್ತಿ ಮತ್ತು ಸಿ.ಎಂ.ಆರ್. ಜ್ಞಾನಧಾರ ಟ್ರಸ್ಟ್ ಅಧ್ಯಕ್ಷೆ, ಸಿ.ಎಂ.ಆರ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಸಬೀತಾ ರಾಮಮೂರ್ತಿ ಅವರು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.

ಸಿ.ಎಂ.ಆರ್ ಜ್ಞಾನಧಾರ ಟ್ರಸ್ಟ್‌ನ ಟ್ರಸ್ಟಿ ಡಾ.ಕೆ.ಸಿ. ರಾಜು ರೆಡ್ಡಿ, ಪ್ರಾಂಶುಪಾರಾದ ಡಾ.ಸಂಜಯ್ ಜೈನ್, ಡಾ.ಬಿ.ಎನ್ ನರಸಿಂಹಮೂರ್ತಿ ಇದ್ದರು.

ಪೊಲೀಸ್ ವಾಹನದ ಮೇಲೆ ದಾಳಿ–ಕಮಾಂಡೊ ಹತ್ಯೆ; ಹಲವು ಮನೆಗಳು ಬೆಂಕಿಗಾಹುತಿ

ಮಣಿಪುರ: ಮತ್ತೆ ಭುಗಿಲೆದ್ದ ಹಿಂಸಾಚಾರ

ಪ್ರಜಾವಾಣಿ ವಾರ್ತೆ

ಗುವಾಹಟಿ: 'ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ವಿಷ್ಣುಪುರ ಜಿಲ್ಲೆಯಲ್ಲಿ ದುಷ್ಕರ್ಮಿಗಳು ಗುರುವಾರ ನಡೆಸಿರುವ ಗುಂಡಿನ ದಾಳಿಯಲ್ಲಿ ಪೊಲೀಸ್ ಸಿಬ್ಬಂದಿಯೊಬ್ಬರು ಹತರಾಗಿದ್ದು, ನಾಲ್ವರು ಗಾಯಗೊಂಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮಣಿಪುರ ರೈಫಲ್ಸ್‌ನ ಸಿಬ್ಬಂದಿ ಇದ್ದ ವಾಹನವು ಬೆಳಿಗ್ಗೆ 11 ಗಂಟೆ ಸುಮಾರಿಗೆ ತೊಂಗ್ಲಾವೊಬಿ ಗ್ರಾಮದ ಸಮೀಪ ಸಾಗುತ್ತಿದ್ದಾಗ ಅದರ ಮೇಲೆ ಗುಂಡಿನ ದಾಳಿ ನಡೆದಿದೆ. ಕುಕಿ ಬಂಡುಕೋರರೇ ಹೊಂಚು ಹಾಕಿ ಈ ದಾಳಿ ನಡೆಸಿರಬಹುದು ಎಂಬ ಅನುಮಾನ ವ್ಯಕ್ತವಾಗಿದೆ' ಎಂದು ಮೂಲಗಳು ತಿಳಿಸಿವೆ.

ಕಾಂಗ್‌ಪೋಕ್‌ಪಿ ಜಿಲ್ಲೆಯಲ್ಲಿ ಹಿಂಸಾಚಾರ ಭುಗಿಲೆದ್ದ ಬೆನ್ನಲ್ಲೇ ಈ ದಾಳಿ ನಡೆದಿದೆ.

ರಾಜ್ಯದಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ ಎಂಬ ಆಶಾಭಾವನೆ ಮೂಡುತ್ತಿದ್ದ ಹೊತ್ತಿನಲ್ಲೇ ಕಾಂಗ್‌ಪೋಕ್‌ಪಿ ಜಿಲ್ಲೆಯಲ್ಲಿ ಕುಕಿ ಹಾಗೂ ಮೈತೇಯಿ ಸಮುದಾಯದ ಜನರಿಗೆ ಸೇರಿದ ಹಲವು ಮನೆಗಳಿಗೆ ಬೆಂಕಿ ಹಚ್ಚಲಾಗಿತ್ತು. ಇದರಿಂದ ಕೆರಳಿದ್ದ ಕುಕಿ ಸಮುದಾಯದ ಜನರು ಎಂಟು ಸ್ಥಳಗಳಲ್ಲಿ ಪ್ರತಿಭಟನೆ ಕೈಗೊಂಡಿದ್ದರು.

ರಾಷ್ಟ್ರೀಯ ಹೆದ್ದಾರಿ–2 ಅನ್ನು ಬಂದ್ ಮಾಡಿದ್ದ ಅವರು ಟಯರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದರು. ನಾಗಾಲ್ಯಾಂಡ್‌ನ ದಿಮಾಪುರದಿಂದ ಮಣಿಪುರದ ರಾಜಧಾನಿ ಇಂಫಾಲ್‌ಗೆ ಅಗತ್ಯ ವಸ್ತುಗಳನ್ನು ಸಾಗಿಸುತ್ತಿದ್ದ ಟ್ರಕ್‌ಗಳನ್ನೂ ತಡೆದಿದ್ದರು.

ರಾಜ್ಯದಲ್ಲಿ ಇದೇ 3 ರಿಂದ 6ರವರೆಗೆ ನಡೆದಿದ್ದ ಗಲಭೆ ವೇಳೆ ದುಷ್ಕರ್ಮಿಗಳು ಭದ್ರತಾ ಸಿಬ್ಬಂದಿಯಿಂದ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಪೈಕಿ ಸುಮಾರು 300 ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಿದ್ದ ಭದ್ರತಾ ಪಡೆಯವರು ಇನ್ನೂ 800 ಶಸ್ತ್ರಾಸ್ತ್ರಗಳ ಪತ್ತೆಗಾಗಿ ಕೂಂಬಿಂಗ್ ಕಾರ್ಯಾಚರಣೆ ಕೈಗೊಂಡಿದ್ದವು. ಈ ವೇಳೆ ಹಿಂಸಾಚಾರ ಶುರುವಾಗಿತ್ತು.

ಪೂರ್ವ ಇಂಫಾಲ್ ಜಿಲ್ಲೆಯಲ್ಲಿ ಕುಕಿ ಬಂಡುಕೋರರು ಬುಧವಾರ ನಡೆಸಿದ್ದ ಗುಂಡಿನ ದಾಳಿಯಲ್ಲಿ ಅಸ್ಸಾಂ ರೈಫಲ್ಸ್‌ನ ಯೋಧರೊಬ್ಬರು ಗಾಯಗೊಂಡಿದ್ದರು.

ಪೂರ್ವಯೋಜಿತ ಕೃತ್ಯ: ಕಾಂಗ್ರೆಸ್ ಆರೋಪ

ನವದೆಹಲಿ (ಪಿಟಿಐ): 'ಮಣಿಪುರ ಹಿಂಸಾಚಾರವು ಪೂರ್ವ ಯೋಜಿತ ಕೃತ್ಯದಂತೆ ಭಾಸವಾಗುತ್ತಿದೆ. ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಕೂಡಲೇ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಬೇಕು' ಎಂದು ಕಾಂಗ್ರೆಸ್ ಒತ್ತಾಯಿಸಿದೆ.

'ಹಿಂಸಾಚಾರದಲ್ಲಿ ಸಾವಿಗೀಡಾದವರ ಕುಟುಂಬದವರಿಗೆ ತಲಾ ₹20 ಲಕ್ಷ ನೆರವು ನೀಡಬೇಕು. ಮನೆ ಕಳೆದುಕೊಂಡವರಿಗೆ ತಲಾ ₹5 ಲಕ್ಷ ಪರಿಹಾರ ಒದಗಿಸಬೇಕು' ಎಂದು ಕಾಂಗ್ರೆಸ್ ವಕ್ತಾರ ಹಾಗೂ ಮಣಿಪುರದ ಉಸ್ತುವಾರಿಯಾಗಿರುವ ಭಕ್ತ ಚರಣ್ ದಾಸ್ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈವರೆಗೂ ರಾಜ್ಯಕ್ಕೆ ಏಕೆ ಭೇಟಿ ಕೊಟ್ಟಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರೇಕೆ ಮೌನಕ್ಕೆ ಶರಣಾಗಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

'ರಾಜ್ಯದಲ್ಲಿ ಆಡಳಿತದಲ್ಲಿರುವ ಬಿಜೆಪಿ ಸರ್ಕಾರವು ಪರಿಸ್ಥಿತಿ ನಿಭಾಯಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಗಲಭೆಗೆ ಕಡಿವಾಣ ಹಾಕುವಲ್ಲೂ ಹಿಂದೆ ಬಿದ್ದಿದೆ' ಎಂದು ದೂರಿದ್ದಾರೆ.

3,583 ಮಂದಿಗೆ ಮಿಜೋರಾಂನಲ್ಲಿ ಆಶ್ರಯ

ಐಜ್ವಾಲ್ (ಪಿಟಿಐ): ಹಿಂಸಾಚಾರದಿಂದ ಕಂಗೆಟ್ಟಿದ್ದ ಮಣಿಪುರದಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದ್ದು, ಇಲ್ಲಿಯವರೆಗೆ ಸುಮಾರು 3,583 ಮಂದಿಗೆ ಮಿಜೋರಾಂನಲ್ಲಿ ತಾತ್ಕಾಲಿಕ ಆಶ್ರಯ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಿಜೋರಾಂ ಆರು ಜಿಲ್ಲೆಗಳಲ್ಲಿ ತಾತ್ಕಾಲಿಕ ಆಶ್ರಯ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅಲ್ಲಿ ಕೆಲವರಿಗೆ ತಾತ್ಕಾಲಿಕ ನೆಲೆ ಕಲ್ಪಿಸಲಾಗಿದೆ. ಉಳಿದ ಕೆಲವರು ತಮ್ಮ ಸಂಬಂಧಿಕರ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ.

ಇಂಫಾಲ್ ಕಣಿವೆಯಲ್ಲಿ ವಾಸಿಸುತ್ತಿರುವ ಮೈತೇಯಿ ಸಮುದಾಯವು ತಮಗೆ ಎಸ್‌ಟಿ ಮೀಸಲಾತಿ ನೀಡುವಂತೆ ಸರ್ಕಾರಕ್ಕೆ ಒತ್ತಡ ತಂದಿದೆ. ಮೈತೇಯಿ ಸಮುದಾಯದವರ ಮೀಸಲಾತಿ ಬೇಡಿಕೆಯನ್ನು ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುತ್ತಿರುವ ನಾಗಾ ಮತ್ತು ಕುಕಿ ಬುಡಕಟ್ಟು ಸಮುದಾಯಗಳು ವಿರೋಧಿಸಿ ಪ್ರತಿಭಟನೆ ನಡೆಸಿದ ವೇಳೆ ಹಿಂಸಾಚಾರ ಸಂಭವಿಸಿತ್ತು. ಘಟನೆಯಲ್ಲಿ 60 ಮಂದಿ ಮೃತಪಟ್ಟಿದ್ದಾರೆ.

ಸಲಿಂಗ ಮದುವೆಗೆ ಮಾನ್ಯತೆ: ತೀರ್ಪು ಕಾಯ್ದಿರಿಸಿದ 'ಸುಪ್ರೀಂ'



ನವದೆಹಲಿ (ಪಿಟಿಐ): ಸಲಿಂಗ ಮದುವೆಗೆ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿರುವ ಸುಪ್ರೀಂಕೋರ್ಟ್, ತೀರ್ಪನ್ನು ಗುರುವಾರ ಕಾಯ್ದಿರಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿರುವ ಸಂವಿಧಾನ ಪೀಠವು, ಹತ್ತನೇ ದಿನವೂ ಅರ್ಜಿಗಳ ವಿಚಾರಣೆ ನಡೆಸಿ, ತೀರ್ಪು ಕಾಯ್ದಿರಿಸಿತು. ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್, ಎಸ್.ಆರ್.ಭಟ್, ಹಿಮಾ ಕೊಹ್ಲಿ ಹಾಗೂ ಪಿ.ಎಸ್.ನರಸಿಂಹ ಈ ಪೀಠದಲ್ಲಿದ್ದಾರೆ. ಅರ್ಜಿದಾರರ ಪರ ವಕೀಲರಾದ ಎ.ಎಂ.ಸಿಂಘ್ವಿ, ರಾಜು ರಾಮಚಂದ್ರನ್, ಕೆ.ವಿ.ವಿಶ್ವನಾಥನ್, ಆನಂದ್ ಗ್ರೋವರ್ ಹಾಗೂ ಸೌರಭ್ ಕೃಪಾಲ್ ಅವರು ಮಂಡಿಸಿದ ಪ್ರತಿವಾದವನ್ನು ನ್ಯಾಯಪೀಠ ಆಲಿಸಿತು.

ಬುಧವಾರ ನಡೆದ ವಿಚಾರಣೆ ವೇಳೆ ಕೇಂದ್ರ ಸರ್ಕಾರವು, 'ಸಲಿಂಗಿಗಳ ಮದುವೆಯಿಂದಾಗುವ ಪರಿಣಾಮಗಳನ್ನು ಮುಂಗಾಣಲು, ಗ್ರಹಿಸಲು ನ್ಯಾಯಾಲಯಕ್ಕೆ ಸಾಧ್ಯವಿಲ್ಲ. ಹೀಗಾಗಿ ಸಲಿಂಗಿಗಳ ಮದುವೆಗೆ ನ್ಯಾಯಾಲಯವು ಕಾನೂನು ಮಾನ್ಯತೆ ನೀಡುವುದು ಸರಿಯಾದ ಕ್ರಮವಾಗುವುದಿಲ್ಲ' ಎಂದು ವಾದಿಸಿತ್ತು.

ಈ ವಿಷಯ ಕುರಿತು ಏಳು ರಾಜ್ಯಗಳು ಪ್ರತಿಕ್ರಿಯೆ ನೀಡಿವೆ. ಸಲಿಂಗ ಮದುವೆಗೆ ಮಾನ್ಯತೆ ನೀಡಬೇಕು ಎಂಬ ಅರ್ಜಿದಾರರ ವಾದಕ್ಕೆ ರಾಜಸ್ಥಾನ, ಆಂಧ್ರಪ್ರದೇಶ ಹಾಗೂ ಅಸ್ಸಾಂ ಸರ್ಕಾರಗಳು ವಿರೋಧ ವ್ಯಕ್ತಪಡಿಸಿವೆ ಎಂದೂ ಕೇಂದ್ರ ಸರ್ಕಾರ ತಿಳಿಸಿತ್ತು.

'ರಾಜ್ಯಪಾಲರಿಂದ ಪ್ರಮಾದ'

ಒಂದನೇ ಪುಟದಿಂದ...

ಬಹುಮತ ಸಾಬೀತುಪಡಿಸುವ ಮುನ್ನವೇ ಠಾಕ್ರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹೀಗಾಗಿ, ಠಾಕ್ರೆ ನೇತೃತ್ವದ ಮಹಾ ವಿಕಾಸ ಅಘಾಡಿ ಸರ್ಕಾರವನ್ನು ಮರುಸ್ಥಾಪಿಸಲು ಸಾಧ್ಯವಿಲ್ಲ ಎಂದು ಪೀಠವು 141 ಪುಟಗಳ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

ಕಳೆದ ವರ್ಷ ಶಿಂದೆ ನೇತೃತ್ವದಲ್ಲಿ ಶಿವಸೇನೆಯ ಶಾಸಕರು ಬಂಡಾಯ ಎದ್ದು ಬಿಜೆಪಿಯೊಂದಿಗೆ ಕೈಜೋಡಿಸಿದ್ದರು. ಸದನದಲ್ಲಿ ಅತಿ ಹೆಚ್ಚು, ಅಂದರೆ 106 ಸದಸ್ಯರನ್ನು ಹೊಂದಿರುವ ಬಿಜೆಪಿಯಲ್ಲದೆ ಎಂಟು ಪಕ್ಷೇತರ ಶಾಸಕರು ಶಿಂದೆ ಅವರಿಗೆ ಬೆಂಬಲ ನೀಡಿದ್ದರು. ಸರ್ಕಾರ ರಚಿಸಲು ಶಿಂದೆ ಅವರಿಗೆ ರಾಜ್ಯಪಾಲರು ಆಹ್ವಾನ ನೀಡಿದ್ದರು. ಮುಖ್ಯಮಂತ್ರಿಯಾಗಿ ಶಿಂದೆ ಹಾಗೂ ಡಿಸಿಎಂ ಆಗಿ ದೇವೇಂದ್ರ ಫಡಣವೀಸ್ ಅಧಿಕಾರ ಸ್ವೀಕರಿಸಿದ್ದರು.

ಈ ಪ್ರಕರಣ ಸಂಬಂಧ ಶಿಂದೆ ಹಾಗೂ 15 ಶಾಸಕರನ್ನು ಅನರ್ಹಗೊಳಿಸಬೇಕು ಮತ್ತು ಮಹಾವಿಕಾಸ ಅಘಾಡಿ ಸರ್ಕಾರವನ್ನು ಮರುಸ್ಥಾಪಿಸಬೇಕು ಎಂದು ಒತ್ತಾಯಿಸಿ ಉದ್ಧವ್ ಠಾಣೆ ಬಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ವಿವಾದ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠ, ಅಂದಿನ ಸರ್ಕಾರ ಸದನದ ವಿಶ್ವಾಸ ಕಳೆದುಕೊಂಡಿದೆ ಎಂದು ಅನುಮಾನಿಸಲು ರಾಜ್ಯಪಾಲರಿಗೆ ವಸ್ತುನಿಷ್ಠ ಪುರಾವೆಗಳು ದೊರೆತಿರಲಿಲ್ಲ ಎಂದು ತೀರ್ಪಿನಲ್ಲಿ ಹೇಳಿದೆ.

ಚುನಾಯಿತ ಪ್ರತಿನಿಧಿಗಳಿಗೆ ಜನರ ಪರವಾಗಿ ಕೆಲಸ ಮಾಡಲು ಸಂವಿಧಾನ ಅವಕಾಶ ಕಲ್ಪಿಸಿದೆ. ಆದರೆ, ರಾಜ್ಯಪಾಲರು ತಮ್ಮ ಸಾಂವಿಧಾನಿಕ ಹುದ್ದೆಯ ಹೊರತಾಗಿಯೂ ಚುನಾಯಿತರು ಅಲ್ಲದೆ ಇರುವ ಕಾರಣಕ್ಕೆ ಸೀಮಿತ ವಿವೇಚನೆ ಅಧಿಕಾರಗಳನ್ನು ಹೊಂದಿರುತ್ತಾರೆ. ರಾಜ್ಯಪಾಲರು ಸಂಪುಟ ಸಚಿವರ ನೆರವು ಮತ್ತು ಸಲಹೆ ಇಲ್ಲದೆ ಕೆಲಸ ಮಾಡುವುದು ಒಂದು ವಿಶೇಷ ಪ್ರಕರಣವಾಗಿದೆ ಮತ್ತು ಅಂತಹ ನಡೆಗಳು ಸಾಂವಿಧಾನಿಕ ಪ್ರಜಾಪ್ರಭುತ್ವದ ಮೇಲೆ ಪರಿಣಾಮ ಬೀರಲಿವೆ ಎಂದು ಪೀಠ ಹೇಳಿದೆ.

ಯಾವುದೇ ಪಕ್ಷಕ್ಕೆ ಬಹುಮತ ಸಾಬೀತುಪಡಿಸುವಂತೆ ಸೂಚಿಸಲು ನಿರ್ದಿಷ್ಟ ಕಾರಣವಿರಬೇಕು. ಈ ಪ್ರಕರಣದಲ್ಲಿ ರಾಜ್ಯಪಾಲರಿಗೆ ಪ್ರಸ್ತುತ ಸರ್ಕಾರ ಸದನದ ವಿಶ್ವಾಸ ಕಳೆದುಕೊಂಡಿದೆ ಎಂಬುದನ್ನು ಸೂಚಿಸುವಂತಹ ಯಾವುದೇ ವಸ್ತುನಿಷ್ಠ ಕಾರಣವಿರಲಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ರಾಜ್ಯಪಾಲರು ವಿವೇಚನೆ ಬಳಸಿ ನೀಡಿದ ಆದೇಶ ಕಾನೂನುಬದ್ಧವಾಗಿರಲಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಶಿಂದೆ ಬಣದ ನಾಮನಿರ್ದೇಶನದ ಆಧಾರದಲ್ಲಿ ಶಿವಸೇನೆಯ ಮುಖ್ಯ ಸಚೇತಕರನ್ನಾಗಿ ಭರತ್ ಗೊಗವಾಲೆ ಅವರನ್ನು ನೇಮಕ ಮಾಡಿರುವ ಸ್ಪೀಕರ್ ತೀರ್ಮಾನ ಕಾನೂನುಬಾಹಿರ ಎಂದು ಪೀಠ ತೀರ್ಪು ನೀಡಿದೆ.

ಮುಖ್ಯ ಸಚೇತಕರನ್ನು ಶಾಸಕಾಂಗ ಪಕ್ಷ ನೇಮಿಸುತ್ತದೆಯೇ ಹೊರತು ರಾಜಕೀಯ ಪಕ್ಷವಲ್ಲ ಎಂಬ ಶಿಂದೆ ಬಣದ ವಾದವನ್ನು ನ್ಯಾಯಾಲಯ ಒಪ್ಪಿಲ್ಲ.

ಇನ್ನೊಂದು ಸುತ್ತಿನ ಕಾನೂನು ಹೋರಾಟಕ್ಕೆ ಹಾದಿ?

ಸಂವಿಧಾನದ 164 (1 ಬಿ) ವಿಧಿಯನ್ನು ಉಲ್ಲೇಖಿಸಿದ ನ್ಯಾಯಪೀಠ, ಯಾವುದೇ ಶಾಸಕ ಅಥವಾ ವಿಧಾನ ಪರಿಷತ್‌ನ ಸದಸ್ಯರು 10ನೇ ಶೆಡ್ಯೂಲ್‌ನ ಎರಡನೇ ಪ್ಯಾರಾ ಅನ್ವಯ ಅನರ್ಹಗೊಂಡಿದ್ದರೆ ಅವರನ್ನು ಸಚಿವರನ್ನಾಗಿ ನೇಮಿಸುವುದನ್ನು ನಿರ್ಬಂಧಿಸಲಾಗಿದೆ ಎಂದು ಹೇಳಿದೆ.

ನ್ಯಾಯಮೂರ್ತಿ ಎಂ.ಆರ್.ಷಾ, ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಹಾಗೂ ಪಿ.ಎಸ್.ನರಸಿಂಹ ಅವರನ್ನು ಒಳಗೊಂಡ ಪೀಠ ತನ್ನ ತೀರ್ಪಿನಲ್ಲಿ, ನಬಮ್ ರೆಬಿಯಾ ಪ್ರಕರಣದಲ್ಲಿ 2016ರಲ್ಲಿ ಸಾಂವಿಧಾನಿಕ ಪೀಠ ತೀರ್ಪನ್ನು ಉಲ್ಲೇಖಿಸಿದೆ. ಈ ತೀರ್ಪಿನಲ್ಲಿ ತಮ್ಮ ವಿರುದ್ಧದ ಅನರ್ಹತೆಯ ನಿಲುವಳಿ ಬಾಕಿ ಇರುವಾಗ ಇತರರ ಅನರ್ಹತೆಯ ಅರ್ಜಿಯನ್ನು ನಿರ್ಧರಿಸುವ ಅಧಿಕಾರ ಸ್ಪೀಕರ್‌ಗೆ ಇರುವುದಿಲ್ಲ ಎಂದು ಉಲ್ಲೇಖಿಸಲಾಗಿದೆ.

ಈ ತೀರ್ಪಿನೊಂದಿಗೆ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ಠಾಕ್ರೆ ಮತ್ತು ಶಿಂದೆ ಬಣ ಪರಸ್ಪರರ ವಿರುದ್ಧ ಸಲ್ಲಿಸಿರುವ ಅನರ್ಹತೆಯ ಅರ್ಜಿಯನ್ನು ನಿರ್ಧರಿಸಬಹುದಾಗಿದೆ. 'ಇದು ಅಪರೂಪದ ಸನ್ನಿವೇಶವಲ್ಲ. ಆದ್ದರಿಂದ ಅನರ್ಹತೆಯ ಅರ್ಜಿಗಳನ್ನು ನ್ಯಾಯಾಲಯ ತರಾತುರಿಯಲ್ಲಿ ಇತ್ಯರ್ಥಗೊಳಿಸಬೇಕಿಲ್ಲ' ಎಂದು ಠಾಕ್ರೆ ಬಣ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಪೀಠ, ಸ್ಪೀಕರ್ ನಿರ್ದಿಷ್ಟ ಅವಧಿಯಲ್ಲಿ ಅನರ್ಹತೆಯ ಅರ್ಜಿಗಳ ಕುರಿತು ತೀರ್ಮಾನ ಕೈಗೊಳ್ಳಬೇಕು ಎಂದು ತೀರ್ಪು ನೀಡಿದೆ.

ಆದರೆ, ಬಿಜೆಪಿ ಶಾಸಕರಾಗಿದ್ದ ನಾರ್ವೇಕರ್ ತೆಗೆದುಕೊಳ್ಳುವ ಯಾವುದೇ ನಿರ್ಧಾರ ಇನ್ನೊಂದು ಸುತ್ತಿನ ಕಾನೂನು ಹೋರಾಟಕ್ಕೆ ದಾರಿಯಾಗಲಿದೆ.

ಅನರ್ಹತೆಯ ಅರ್ಜಿಗಳು ನಿರ್ಣಯಕ್ಕೆ ಬಾಕಿ ಇರುವ ಹಂತದಲ್ಲಿ ಶಾಸಕರು ಸದನದ ಕಲಾಪದಲ್ಲಿ ಪಾಲ್ಗೊಳ್ಳುವ ಹಕ್ಕು ಹೊಂದಿರುತ್ತಾರೆ ಎಂದು ಪೀಠ ಸ್ಪಷ್ಟಪಡಿಸಿದೆ.

ಶಿವಸೇನಾ ಒಡಕು– ಹಿನ್ನೋಟ

ಜೂನ್ 21, 2022: ಉದ್ಧವ್ ಠಾಕ್ರೆ ವಿರುದ್ಧ ಏಕನಾಥ ಶಿಂದೆ ಬಂಡಾಯ. ಮಹಾ ವಿಕಾಸ್ ಅಘಾಡಿ (ಎಂವಿಎ) ನೇತೃತ್ವದ ಸರ್ಕಾರದ ಕಣ್ತಪ್ಪಿಸಿ, 12 ಶಾಸಕರೊಂದಿಗೆ ಗುಜರಾತ್‌ಗೆ ಪ್ರಯಾಣ.

ಜೂನ್ 22: ಶಿಂದೆ ಅವರೊಂದಿಗೆ ಗುರುತಿಸಿಕೊಂಡ ಬಂಡಾಯ ಶಾಸಕರ ಸಂಖ್ಯೆ ಹೆಚ್ಚಳ. ಬೆಂಬಲಿಗ ಶಾಸಕರೊಂದಿಗೆ ಅಸ್ಸಾಂನ ಗುವಾಹಟಿಗೆ ಏಕನಾಥ ಶಿಂದೆ ಪ್ರಯಾಣಿಸಿದರು. ಮುಖ್ಯಮಂತ್ರಿಗಳ ಅಧಿಕೃತ ನಿವಾಸ 'ವರ್ಷಾ' ತೊರೆದ ಉದ್ಧವ್ ಠಾಕ್ರೆ ತಮ್ಮ ಖಾಸಗಿ ಬಂಗಲೆ 'ಮಾತೋಶ್ರೀ'ಗೆ ತೆರಳಿದರು.

ಜೂನ್ 23: ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಶಿಂದೆ, ಈ ಕಾರ್ಯದಲ್ಲಿ ನೆರವು ನೀಡುವುದಾಗಿ 'ಮಹಾಶಕ್ತಿ' ಭರವಸೆ ನೀಡಿದೆ ಎಂದು ಹೇಳಿದರು.

ಜೂನ್ 24: ಶಿವಸೇನಾದ 40 ಶಾಸಕರು, ಪಕ್ಷೇತರ ಹಾಗೂ ಸಣ್ಣ ಪಕ್ಷಗಳ ಒಟ್ಟು 10 ಶಾಸಕರ ಬೆಂಬಲ ತಮಗೆ ಇರುವುದಾಗಿ ಶಿಂದೆ ಹೇಳಿಕೊಂಡರು.

ಜೂನ್ 25: ಸದನದ ನಾಯಕ ಅಜಯ್ ಚೌಧರಿ ಅವರ ಸೂಚನೆಯನ್ನು ಪಾಲನೆ ಮಾಡದ್ದಕ್ಕಾಗಿ ಅನರ್ಹಗೊಳಿಸುವುದಾಗಿ ಶಿವಸೇನಾದ 16 ಶಾಸಕರಿಗೆ ಡೆಪ್ಯುಟಿ ಸ್ಪೀಕರ್ ನರಹರಿ ಜೀರ್ವಾಲ್ ನೋಟಿಸ್ ಜಾರಿ ಮಾಡಿದರು. ಇನ್ನೊಂದೆಡೆ, ಡೆಪ್ಯುಟಿ ಸ್ಪೀಕರ್ ಜೀರ್ವಾಲ್ ವಿರುದ್ಧ ಇಬ್ಬರು ಪಕ್ಷೇತರ ಶಾಸಕರು ಅವಿಶ್ವಾಸ ನಿರ್ಣಯ ಮಂಡಿಸಿದರು

ಜೂನ್ 26: ತಮ್ಮನ್ನು ಅನರ್ಹಗೊಳಿಸುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆ ಪ್ರಶ್ನಿಸಿ ಏಕನಾಥ ಶಿಂದೆ ಗುಂಪಿನಿಂದ ಸುಪ್ರೀಂಕೋರ್ಟ್‌ಗೆ ಅರ್ಜಿ

ಜೂನ್ 28: ಉದ್ಧವ್ ಠಾಕ್ರೆ ವಿರುದ್ಧ ವಿಧಾನಸಭೆ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರಿಂದ ಅವಿಶ್ವಾಸ ನಿರ್ಣಯ ಮಂಡನೆ

ಜೂನ್ 29: ಜೂನ್ 30ರ ಒಳಗಾಗಿ ವಿಶ್ವಾಸ ಮತ ಯಾಚನೆ ಮಾಡಿ, ಬಹುಮತ ಸಾಬೀತುಪಡಿಸುವಂತೆ ರಾಜ್ಯಪಾಲ ಭಗತ್‌ಸಿಂಗ್ ಕೋಶ್ಯಾರಿ ಆದೇಶಿಸಿದರು.

ಜೂನ್ 29:ಮುಖ್ಯಮಂತ್ರಿ ಸ್ಥಾನಕ್ಕೆ ಉದ್ಧವ್ ಠಾಕ್ರೆ ರಾಜೀನಾಮೆ. ಎಂವಿಎ ಅಂಗಪಕ್ಷ ಎನ್‌ಸಿಪಿಯ ವರಿಷ್ಠ ಶರದ್ ಪವಾರ್ ಹಾಗೂ ಕಾಂಗ್ರೆಸ್ ನಾಯಕರೊಂದಿಗೆ ಅವರು ಸಮಾಲೋಚನೆ ನಡೆಸಿರಲಿಲ್ಲ

ಜೂನ್ 30: ಏಕನಾಥ ಶಿಂದೆ ಹಾಗೂ ದೇವೇಂದ್ರ ಫಡಣವೀಸ್ ಅವರು ರಾಜ್ಯಪಾಲ ಕೋಶ್ಯಾರಿ ಅವರನ್ನು ಭೇಟಿ ಮಾಡಿ ಸರ್ಕಾರ ರಚನೆ ಸಂಬಂಧ ಹಕ್ಕು ಮಂಡಿಸಿದರು. ನಂತರ ಮುಖ್ಯಮಂತ್ರಿಯಾಗಿ ಶಿಂದೆ, ಉಪಮುಖ್ಯಮಂತ್ರಿಯಾಗಿ ಫಡಣವೀಸ್ ಪ್ರಮಾಣ

ಜುಲೈ 3: ಬಿಜೆಪಿಯಿಂದ ಮೊದಲ ಬಾರಿಗೆ ಆಯ್ಕೆಯಾಗಿರುವ, ಕೊಲಾಬಾ ಶಾಸಕ ರಾಹುಲ್ ನಾರ್ವೇಕರ್ ವಿಧಾನಸಭೆ ಸ್ಪೀಕರ್ ಆಗಿ ಆಯ್ಕೆ

ಜುಲೈ 4: ಶಿಂದೆ–ಫಡಣವೀಸ್ ನೇತೃತ್ವದ ಸರ್ಕಾರಕ್ಕೆ ವಿಶ್ವಾಸ ಮತದಲ್ಲಿ ಗೆಲುವು. ಶಿವಸೇನಾ–ಬಿಜೆಪಿ ಸರ್ಕಾರದ ಪರ 164 ಹಾಗೂ ವಿರುದ್ಧವಾಗಿ 99 ಮತ ಚಲಾವಣೆ

ಆಗಸ್ಟ್ 9: ಸಂಪುಟ ವಿಸ್ತರಣೆ. 18 ಸಚಿವರು ಸಂಪುಟ ಸೇರ್ಪಡೆ. ಸಂಪುಟ ಸಂಖ್ಯಾಬಲ 20ಕ್ಕೆ ಹೆಚ್ಚಳ

ಅಕ್ಟೋಬರ್ 8: ಶಿವಸೇನಾ ಹೆಸರು ಹಾಗೂ ಪಕ್ಷದ ಚಿಹ್ನೆಯಾದ 'ಬಿಲ್ಲು ಮತ್ತು ಬಾಣ' ಅಮಾನತಿನಲ್ಲಿಟ್ಟು ಚುನಾವಣಾ ಆಯೋಗ ಆದೇಶ

ಅಕ್ಟೋಬರ್ 10–11: ಶಿವಸೇನಾ (ಉದ್ಧವ್ ಬಾಳಾಸಾಹೇಬ ಠಾಕ್ರೆ) ಬಣಕ್ಕೆ ಪಕ್ಷದ ಚಿಹ್ನೆಯಾಗಿ ಪಂಜು ಹಾಗೂ ಏಕನಾಥ ಶಿಂದೆ ನೇತೃತ್ವದ ಶಿವಸೇನಾಕ್ಕೆ 'ಎರಡು ಖಡ್ಗಗಳು ಹಾಗೂ ಗುರಾಣಿ' ಚಿಹ್ನೆ ಹಂಚಿಕೆ ಮಾಡಿ ಚುನಾವಣಾ ಆಯೋಗ ಆದೇಶ

ಫೆಬ್ರುವರಿ 17, 2023: ಏಕನಾಥ ಶಿಂದೆ ನೇತೃತ್ವದ ಬಣವನ್ನು ನಿಜವಾದ ಶಿವಸೇನಾ ಎಂದು ಚುನಾವಣಾ ಆಯೋಗ ಘೋಷಣೆ

ಮಾರ್ಚ್ 16: ಶಿವಸೇನಾ ಇಬ್ಭಾಗವಾದ ಪ್ರಕರಣ ಕುರಿತು ವಿಚಾರಣೆ. ತೀರ್ಪು ಕಾಯ್ದಿರಿಸಿದ ಸುಪ್ರೀಂಕೋರ್ಟ್



ಸುಪ್ರೀಂ ಕೋರ್ಟ್ ತೀರ್ಪು ಪ್ರಕಟವಾದ ಬೆನ್ನಲ್ಲೇ ಮುಖ್ಯಮಂತ್ರಿ ಏಕನಾಥ ಶಿಂದೆ ಬಣದ ಕಾರ್ಯಕರ್ತರು ನಾಗ್ಪುರದಲ್ಲಿ ಗುರುವಾರ ಸಂಭ್ರಮಿಸಿದರು–ಪಿಟಿಐ ಚಿತ್ರ

ಶೈಕ್ಷಣಿಕ ನೆರವು, ವಿದ್ಯಾರ್ಥಿ ಮಾತು

ಕಾಲೇಜು ಪ್ರವೇಶಕ್ಕೆ ಅನುಕೂಲವಾಯಿತು



ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡುವ ಕನಸು ನನ್ನದು. ಅದಕ್ಕೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತಿರುವೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಗಳಿಸಿ ಕಾರಟಗಿ ತಾಲ್ಲೂಕಿನ ಶ್ರೀರಾಮನಗರದಲ್ಲಿ ಪಿಯುಸಿ ವಿಜ್ಞಾನ ವಿಭಾಗ ಆಯ್ಕೆ ಮಾಡಿಕೊಂಡಿದ್ದೇನೆ. ಕಾಲೇಜು ಪ್ರವೇಶ ಶುಲ್ಕ ಕಟ್ಟಲು 'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನ ಅನುಕೂಲವಾಯಿತು. ಪತ್ರಿಕೆಗೆ ಧನ್ಯವಾದ.

ಧನುಷ್, ಕಾರಟಗಿ, ಕೊಪ್ಪಳ ಜಿಲ್ಲೆ.

'ಬಸ್ ಪಾಸ್ ಪಡೆಯಲು ಸಹಾಯ'



'ಪ್ರಜಾವಾಣಿ' ನೀಡಿದ ಶೈಕ್ಷಣಿಕ ನೆರವಿನಿಂದ ಮುಂದಿನ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಅನುಕೂಲವಾಯಿತು. ಪುಸ್ತಕಗಳು ಸೇರಿ ಇತರೆ ಕಲಿಕಾ ಸಾಮಗ್ರಿಗಳನ್ನು ಖರೀದಿಸಿದೆ. ಬಸ್ ಪಾಸ್ ಪಡೆಯಲು ಸಹಾಯವಾಯಿತು. ಸ್ಪರ್ಧಾತ್ಮಕ ಪರೀಕ್ಷೆಗಳ ಸಲಕರಣೆ ಖರೀದಿಗೆ ಪತ್ರಿಕೆ ನೀಡಿದ ವಿದ್ಯಾರ್ಥಿವೇತನ ನೆರವಾಯಿತು

ಅನುಷಾ ಸಿ., ಗಾಯತ್ರಿನಗರ, ಬೆಂಗಳೂರು

'ದೆಹಲಿ ಸರ್ಕಾರಕ್ಕೇ ಅಧಿಕಾರ'

ಒಂದನೇ ಪುಟದಿಂದ...

ಜತೆಗೆ, ದೆಹಲಿ ಸರ್ಕಾರಕ್ಕೆ ಸೇವೆಗಳ ವಿಷಯದಲ್ಲಿ ಯಾವುದೇ ಅಧಿಕಾರ ಇಲ್ಲ ಎಂದು ನ್ಯಾಯಮೂರ್ತಿಗಳಾದ ಎ.ಕೆ. ಸಿಕ್ರಿ ಮತ್ತು ಅಶೋಕ್ ಭೂಷಣ್ ಅವರು 2019ರಲ್ಲಿ ನೀಡಿದ್ದ ತೀರ್ಪನ್ನು ಒಪ್ಪಲು ಸಾಂವಿಧಾನಿಕ ಪೀಠ ನಿರಾಕರಿಸಿದೆ.

ಕೇಂದ್ರ ಸರ್ಕಾರದ ಅಧಿಕಾರವನ್ನು ಇನ್ನಷ್ಟು ವಿಸ್ತರಿಸುವುದು ಸಾಂವಿಧಾನಿಕ ಯೋಜನೆಗಳಿಗೆ ವಿರುದ್ಧವಾಗಲಿದೆ. ದೆಹಲಿ ಕೂಡ ಇತರ ರಾಜ್ಯಗಳಿಗೆ ಸಮಾನವಾಗಿದೆ ಹಾಗೂ ಜನಪ್ರತಿನಿಧಿಗಳನ್ನು ಒಳಗೊಂಡ ಸರ್ಕಾರ ಹೊಂದಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ತಮ್ಮ ಇಚ್ಛೆಯನ್ನು ಪ್ರತಿನಿಧಿಸಲು ಹಾಗೂ ಕಾನೂನು ರೂಪಿಸಲು ದೆಹಲಿ ವಿಧಾನಸಭೆಗೆ ಜನರು ಅಧಿಕಾರ ನೀಡಿದ್ದಾರೆ ಎಂದೂ ಹೇಳಿದೆ.

ದೆಹಲಿಯ ಸೇವಾ ವಿಷಯಗಳ ಮೇಲಿನ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಸರ್ಕಾರ ಹಾಗೂ ದೆಹಲಿ ಸರ್ಕಾರ ನಡುವಿನ ವಿವಾದದ ವಿಚಾರಣೆ ನಡೆಸಿದ್ದ ನ್ಯಾಯಪೀಠ ಜನವರಿ 18ರಂದು ತೀರ್ಪನ್ನು ಕಾಯ್ದಿರಿಸಿತ್ತು. 'ಆಡಳಿತಾತ್ಮಕ ವಿಷಯಗಳಲ್ಲಿ ಕೇಂದ್ರದ ಪ್ರಾಮುಖ್ಯತೆಯು ಒಕ್ಕೂಟ ವ್ಯವಸ್ಥೆ ಮತ್ತು ಪ್ರಾತಿನಿಧಿಕ ಪ್ರಜಾಪ್ರಭುತ್ವ ತತ್ವಕ್ಕೆ ಧಕ್ಕೆ ತರುತ್ತದೆ. ಶಾಸಕಾಂಗ ಹಾಗೂ ಕಾರ್ಯಾಂಗದ ವಲಯದಿಂದ ಸೇವೆಗಳನ್ನು (ಅಧಿಕಾರಶಾಹಿ) ಹೊರಗಿಟ್ಟರೆ, ಸಚಿವರು ನಾಗರಿಕ ಸೇವಾ ಅಧಿಕಾರಿಗಳನ್ನು ನಿಯಂತ್ರಿಸುವ ಅಧಿಕಾರ ಕಳೆದುಕೊಳ್ಳುತ್ತಾರೆ. ಅಲ್ಲದೆ, ಒಕ್ಕೂಟ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವ ಸಂವಿಧಾನದ ಮೂಲರಚನೆಯ ಭಾಗಗಳಾಗಿವೆ' ಎಂದು ನ್ಯಾಯಪೀಠ ಪ್ರತಿಪಾದಿಸಿದೆ.

'ಅಧಿಕಾರಿಗಳು ಸಚಿವರಿಗೆ ಕೆಲಸದ ವರದಿ ಮಾಡುವುದನ್ನು ಸ್ಥಗಿತಗೊಳಿಸಿದರೆ ಸಾಮೂಹಿಕ ಜವಾಬ್ದಾರಿ ಸಿದ್ಧಾಂತಕ್ಕೆ ಧಕ್ಕೆ ಆಗುತ್ತದೆ. ಪ್ರಜಾಪ್ರಭುತ್ವ ಆಡಳಿತದ ನಿಜವಾದ ಅಧಿಕಾರ ಚುನಾಯಿತ ಸರ್ಕಾರದ ಕೈಯಲ್ಲಿ ಇರಬೇಕು' ಎಂದು ಸಿ.ಜೆ. ಅವರಲ್ಲದೆ ನ್ಯಾಯಮೂರ್ತಿಗಳಾದ ಎಂ.ಆರ್.ಷಾ, ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಹಾಗೂ ಪಿ.ಎಸ್.ನರಸಿಂಹ ಅವರನ್ನು ಒಳಗೊಂಡ ಪೀಠ ಹೇಳಿದೆ.

2022ರ ಮೇ 6ರಂದು ಈ ಪ್ರಕರಣ ಐದು ಸದಸ್ಯರ ಸಾಂವಿಧಾನಿಕ ಪೀಠಕ್ಕೆ ವರ್ಗಾವಣೆ ಆಗಿತ್ತು. ಕೇಂದ್ರ ಸರ್ಕಾರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹಾಗೂ ದೆಹಲಿ ಸರ್ಕಾರದ ಪರವಾಗಿ ಹಿರಿಯ ವಕೀಲ ಎ.ಎಂ. ಸಿಂಘ್ವಿ ಅವರು ನಾಲ್ಕೂವರೆ ದಿನಗಳವರೆಗೆ ವಾದ ಮಂಡಿಸಿದ್ದರು.

ದೆಹಲಿಯ ಸೇವೆಗಳ ವಿಷಯದಲ್ಲಿ (ಅಧಿಕಾರಶಾಹಿ ಮೇಲೆ) ಕೇಂದ್ರಕ್ಕೆ ಮಾತ್ರ ನಿಯಂತ್ರಣ ಇರಲಿದೆ ಎಂದು ಕೇಂದ್ರ ಗೃಹ ಸಚಿವಾಲಯ 2015ರಲ್ಲಿ ಹೊರಡಿಸಿದ್ದ ಅಧಿಸೂಚನೆ ಪ್ರಶ್ನಿಸಿ ಎಎಪಿ ಸರ್ಕಾರವು ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿತ್ತು.

ದೆಹಲಿಯಲ್ಲಿ ಯಾರಿಗೆ ಹೆಚ್ಚು ಅಧಿಕಾರ ಸಿಗಬೇಕು ಎಂಬ ವಿಚಾರದಲ್ಲಿ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠವು 2019ರಲ್ಲಿ ಭಿನ್ನ ತೀರ್ಪು ನೀಡಿತ್ತು. ಅಧಿಕಾರಿಗಳ ವರ್ಗಾವಣೆ ಮತ್ತು ನಿಯೋಜನೆ ಸೇರಿದಂತೆ ಆಡಳಿತಾತ್ಮಕ ಸೇವೆಗಳ ನಿಯಂತ್ರಣ ವಿಚಾರದಲ್ಲಿ ಕೇಂದ್ರ ಸರ್ಕಾರದ್ದೇ ಕೊನೆಯ ತೀರ್ಮಾನ ಎಂದು ನ್ಯಾಯಮೂರ್ತಿ ಅಶೋಕ್ ಭೂಷಣ್ ತೀರ್ಪು ನೀಡಿದ್ದರೆ, ನ್ಯಾಯಮೂರ್ತಿ ಎ.ಕೆ. ಸಿಕ್ರಿ ಭಿನ್ನ ತೀರ್ಪು ನೀಡಿದ್ದರು. ಬಳಿಕ, ವಿಸ್ತೃತ ಪೀಠಕ್ಕೆ ಪ್ರಕರಣವನ್ನು ವರ್ಗಾಯಿಸಿದ್ದರು.

ಕಾಂಗ್ರೆಸ್ ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರುವ ತಂತ್ರ

ಭ್ರಷ್ಟಾಚಾರ: ಪೈಲಟ್ ಪಾದಯಾತ್ರೆ

ಜೈಪುರ (ಪಿಟಿಐ): ರಾಜಸ್ಥಾನ ವಿಧಾನಸಭಾ ಚುನಾವಣೆ ಸನ್ನಿಹಿತವಾಗುತ್ತಿದ್ದಂತೆ ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್, ಪಕ್ಷದ ನಾಯಕತ್ವದ ವಿರುದ್ಧ ಮತ್ತೊಮ್ಮೆ ಬಂಡಾಯ ಸಾರಿದ್ದಾರೆ. ವರಿಷ್ಠರ ಮೇಲೆ ಒತ್ತಡ ಹೇರುವ ಹಾಗೂ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸೇರಿ ರಾಜ್ಯದ ಇತರ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸುವ ಉದ್ದೇಶದಿಂದ ಪಾದಯಾತ್ರೆಯಅಸ್ತ್ರ ಪ್ರಯೋಗಿಸಿದ್ದಾರೆ.

ಭ್ರಷ್ಟಾಚಾರದ ವಿರುದ್ಧ ಅವರು ಅಜ್ಮೇರ್‌ನಿಂದ ಜೈಪುರಕ್ಕೆ (125 ಕಿ.ಮೀ) ಕೈಗೊಂಡಿರುವ 5 ದಿನಗಳ 'ಜನ ಸಂಘರ್ಷ ಯಾತ್ರೆ'ಗೆ ಗುರುವಾರ ಚಾಲನೆ ದೊರೆತಿದೆ.

'ನನ್ನ ಕೂಗನ್ನು ವರಿಷ್ಠರಿಗೆ ಮುಟ್ಟಿಸುವ, ಜನರ ಧ್ವನಿಯನ್ನು ಆಲಿಸುವ ಹಾಗೂ ಜನರ ಧ್ವನಿಯಾಗುವ ಉದ್ದೇಶದಿಂದ ಪಾದಯಾತ್ರೆ ಕೈಗೊಂಡಿದ್ದೇನೆ' ಎಂದು ಪೈಲಟ್ ಹೇಳಿದ್ದಾರೆ.

'ಯಾರನ್ನೋ ಗುರಿಯಾಗಿಸಿಕೊಂಡು ಈ ಯಾತ್ರೆ ಕೈಗೊಂಡಿಲ್ಲ' ಎಂದೂ ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿನ ಸುಡು ಬಿಸಿಲನ್ನು ಉಲ್ಲೇಖಿಸಿ ಮಾತನಾಡಿರುವ ಅವರು 'ಇದು ಬೆಂಕಿಯ ನದಿ. ಇದರಲ್ಲೇ ನಾವು ಈಜಿ ದಡ ಮುಟ್ಟಬೇಕು' ಎಂದು ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ರೈಲಿನ ಮೂಲಕ ಅಜ್ಮೇರ್‌ಗೆ ಬಂದಿಳಿದ ಅವರನ್ನು ಸ್ಥಳೀಯ ಶಾಸಕ ಹಾಗೂ ಪಕ್ಷದ ಕಾರ್ಯಕರ್ತರು ಆದರದಿಂದ ಬರಮಾಡಿಕೊಂಡರು. ಬಳಿಕ ಅವರು ಜೈಪುರದ ರಾಷ್ಟ್ರೀಯ ಹೆದ್ದಾರಿ ಬಳಿ ಆಯೋಜಿಸಲಾಗಿದ್ದ ಸಭೆಯಲ್ಲಿ ಪಾಲ್ಗೊಂಡು ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದರು.



ಸಚಿನ್ ಪೈಲಟ್ ಅವರು ಅಜ್ಮೇರ್‌ನಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದರು–ಪಿಟಿಐ ಚಿತ್ರ

ಮಂಡ್ಯದಲ್ಲಿ ಸಿಡಿಲು ಬಡಿದು ವ್ಯಕ್ತಿ ಸಾವು, ಪಡುಬಿದ್ರಿಯಲ್ಲಿ ರಿಕ್ಷಾ ಮೇಲೆ ಮರ ಬಿದ್ದು ಇಬ್ಬರ ಸಾವು

ರಾಜ್ಯದ ಹಲವೆಡೆ ಮಳೆಗೆ ಬೆಳೆ ನಷ್ಟ; ಮನೆಗಳು ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮೈಸೂರು, ಮಂಡ್ಯ, ಚಾಮರಾಜನಗರ, ಶಿವಮೊಗ್ಗ, ಚಿತ್ರದುರ್ಗ, ಮಂಗಳೂರು ಸೇರಿದಂತೆ ವಿವಿಧೆಡೆ ಗುರುವಾರ ಗುಡುಗು, ಸಿಡಿಲಿನಿಂದ ಕೂಡಿದ ಧಾರಾಕಾರ ಮಳೆಯಾಗಿದೆ.

ಮಂಡ್ಯ ಜಿಲ್ಲೆಯ ಭಾರತೀನಗರ ಸಮೀಪದ ಹರಳಹಳ್ಳಿಯಲ್ಲಿ ಸಿಡಿಲು ಬಡಿದು ವೈದ್ಯನಾಥಪುರ ಗ್ರಾಮದ ಮಧು (34) ಸ್ಥಳದಲ್ಲೇ ಮೃತಪಟ್ಟರು. ಪತ್ನಿಯನ್ನು ಕಾಡುಕೊತ್ತನಹಳ್ಳಿಯ ತವರು ಮನೆಗೆ ಬಿಟ್ಟು ಹರಳಹಳ್ಳಿ ಮಾರ್ಗವಾಗಿ ಊರಿಗೆ ವಾಪಸಾಗುವಾಗ ಮಳೆ, ಸಿಡಿಲು, ಗುಡುಗು ಹೆಚ್ಚಾಗಿ ಮರದ ಕೆಳಗೆ ನಿಂತಿದ್ದರು. ವೈದ್ಯನಾಥಪುರದ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿಯಾಗಿದ್ದ ಅವರಿಗೆ ಒಂದು ತಿಂಗಳ ಮಗುವಿದೆ.

ಉಡುಪಿ ಜಿಲ್ಲೆಯ ಪಡುಬಿದ್ರಿಯಲ್ಲಿ ಭಾರಿ ಗಾಳಿ ಮಳೆಗೆ ಮಜೂರು ಮಸೀದಿ ಬಳಿ ಮರವೊಂದು ಆಟೊ ರಿಕ್ಷಾ ಮೇಲೆ ಬಿದ್ದ ಪರಿಣಾಮ ಇಬ್ಬರು ಮೃತಪಟ್ಟಿದ್ದಾರೆ. ಮಜೂರು ಚಂದ್ರನಗರದ ನಿವಾಸಿ ಪುಷ್ಪಾ ಹಾಗೂ ಕೃಷ್ಣ ಆಚಾರ್ಯ ಮೃತರು. ಚಾಲಕ ರಿಕ್ಷಾದಿಂದ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗಿನಲ್ಲಿ ಬಿರುಗಾಳಿ, ಗುಡುಗು, ಸಿಡಿಲಿನಿಂದ ಕೂಡಿದ ಧಾರಾಕಾರ ಮಳೆಯಾಗಿದ್ದು, ಮರಗಳು, ವಿದ್ಯುತ್ ಕಂಬಗಳು ಉರುಳಿಬಿದ್ದವು.

ಪಿರಿಯಾಪಟ್ಟಣ ತಾಲ್ಲೂಕಿನ ಹಬಟೂರು ಕೊಪ್ಪಲು ಗ್ರಾಮದ ವೃಷಭೇಂದ್ರಪ್ಪ ಅವರ ಎರಡು ಎತ್ತುಗಳು ಸಿಡಿಲು ಬಡಿದು ಅಸುನೀಗಿದವು. ಪಟ್ಟಣದ ಬಿ.ಎಂ.ರಸ್ತೆಯ ಚನ್ನಬಸಪ್ಪ ಅವರ ಮನೆಯ ಮುಂಭಾಗದ ತೆಂಗಿನಮರ ಉರುಳಿ ಪಕ್ಕದ ಹೋಟೆಲ್ ಕಟ್ಟಡದ ಮೇಲೆ ಬಿದ್ದು, ಕಿಟಕಿ ಗಾಜು ಜಖಂಗೊಂಡಿದೆ.

ತಿ.ನರಸೀಪುರ ತಾಲ್ಲೂಕಿನ ಸೋಸಲೆ - ಬನ್ನೂರು ರಸ್ತೆಯಲ್ಲಿ ಮರಗಳು ಉರುಳಿವೆ. ಕಗ್ಗಲಿಪುರದ ಬಳಿ ವಿದ್ಯುತ್ ಕಂಬ ಉರುಳಿ ಸುತ್ತಲಿನ ಮನೆಗಳಲ್ಲಿ ವಿದ್ಯುತ್ ಇಲ್ಲದೆ ಕತ್ತಲು ಆವರಿಸಿತ್ತು. ತಿ.ನರಸೀಪುರ ತಾಲ್ಲೂಕಿನ ಕುಪ್ಯಾ ಗ್ರಾಮದಲ್ಲಿ ಬುಧವಾರ ರಾತ್ರಿ ಸುರಿದ ಮಳೆಗೆ ಬಾಳೆ ಬೆಳೆ ನೆಲಕ್ಕಚ್ಚಿದೆ. ಎಚ್.ಡಿ.ಕೋಟೆಯ ವಿವಿಧೆಡೆ ಗಾಳಿ–ಮಳೆಗೆ ವಿದ್ಯುತ್ ಕಂಬ, ಮರಗಳು ನೆಲಕ್ಕುರುಳಿವೆ.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ವಿರಾಜಪೇಟೆ- ಮಡಿಕೇರಿ ಹೆದ್ದಾರಿಯ ಮಲ್ಲಮಟ್ಟಿ ಗ್ರಾಮದಲ್ಲಿ ಮರ ಬಿದ್ದು ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಶೆಟ್ಟಹಳ್ಳಿಯ ಆರ್.ಶಿವಕುಮಾರ್ ಅವರು ಹೈನುಗಾರಿಕೆಗಾಗಿ ನಿರ್ಮಿಸಿದ್ದ ಮನೆಯ ಚಾವಣಿಯು ಕಬ್ಬಿಣದ ಕಂಬಗಳ ಸಮೇತ ಹಾರಿ ಹೋಯಿತು. ಹಲಗೂರು ಸಮೀಪದ ತೊರೆಕಾಡನಹಳ್ಳಿಯ ಬೆಂಗಳೂರು ಜಲಮಂಡಳಿ ಕಾಲೊನಿಯಲ್ಲಿ ನೀಲಗಿರಿ ಮರ ಉರುಳಿ ಐದು ಸ್ಕೂಟರ್ ಗಳು ಜಖಂಗೊಂಡಿವೆ.

ಮದ್ದೂರು ಪಟ್ಟಣಕ್ಕೆ ಸಮೀಪದ ರುದ್ರಾಕ್ಷಿಪುರ ಬಳಿ ವಿದ್ಯುತ್ ಕಂಬ ಬುಧವಾರ ರಾತ್ರಿ ಮೈಸೂರು- ಬೆಂಗಳೂರು ಹೆದ್ದಾರಿಯ ಬೈಪಾಸ್ ರಸ್ತೆಗೆ ಬಿದ್ದು ಕೆಲ ಕಾಲ ಸಂಚಾರಕ್ಕೆ ತೊಂದರೆಯಾಗಿತ್ತು.

ಹಾಸನ ಜಿಲ್ಲೆಯ ಹಾಸನ, ಸಕಲೇಶಪುರ, ಅಲೂರು, ಹೆತ್ತೂರಿನಲ್ಲಿ ಉತ್ತಮ ಮಳೆಯಾಗಿದ್ದು, ಸಕಲೇಶಪುರದಲ್ಲಿ ಹಲವೆಡೆ ವಿದ್ಯುತ್ ವ್ಯತ್ಯಯ ಉಂಟಾಗಿತ್ತು.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಗಾಳಿ ಸಹಿತ ಆಲಿಕಲ್ಲು ಮಳೆಯಾಗಿದ್ದು, ಪಾಳ್ಯ ಹೋಬಳಿಯ ಅಜಯ್ ಹಾಗೂ ಕಾರ್ತಿಕ್ ಅವರ ಬಾಳೆ ನಾಶವಾಗಿದೆ.

ದೊಡ್ಡಿಂದವಾಡಿ –ತೆಳ್ಳನೂರು ಮಾರ್ಗ ಮಧ್ಯ ಬೃಹತ್ ಗಾತ್ರದ ಮರ ನೆಲಕ್ಕುರುಳಿದ್ದು, ತಳ್ಳುವ ಗಾಡಿ ಹಾಗೂ ಕಾರು ಜಖಂಗೊಂಡಿದೆ.

ಮೈಸೂರಪ್ಪನ ದೊಡ್ಡಿ–ಪಿ.ಜಿ ಪಾಳ್ಯ ರಸ್ತೆಯಲ್ಲಿ ನಾಲ್ಕು ವಿದ್ಯುತ್ ಕಂಬಗಳು, ಎರಡು ಮರಗಳು ಬಿದ್ದಿದ್ದು ಸಂಪರ್ಕ ಕಡಿತಗೊಂಡಿದೆ. ಗ್ರಾಮಸ್ಥರು ಇಡೀ ರಾತ್ರಿ ಕತ್ತಲೆಯಲ್ಲಿ ಕಳೆಯುವಂತಾಯಿತು.

ಶಿವಮೊಗ್ಗ ಜಿಲ್ಲೆಯ ರಿಪ್ಪನ್‌ಪೇಟೆ ಸಮೀಪದ ಕೋಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಿಗೆರಸು ಗ್ರಾಮದಲ್ಲಿ ಹಲವು ಮನೆಗಳು, ದನದ ಕೊಟ್ಟಿಗೆಗಳು ಕುಸಿದಿದ್ದು ಭಾರಿ ನಷ್ಟ ಉಂಟಾಗಿದೆ.

ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರಿನ ಸುತ್ತಮುತ್ತ ಭಾರಿ ಗಾಳಿ ಬೀಸಿದ್ದರಿಂದ ಅಡಿಕೆ ಮರಗಳು ಮತ್ತು ಬಾಳೆ ಗಿಡಗಳು ನೆಲಕ್ಕುರುಳಿದ್ದು, ರೈತರಿಗೆ ಅಪಾರ ನಷ್ಟ ಉಂಟಾಗಿದೆ. ದಾವಣಗೆರೆಯಲ್ಲೂ ಮಳೆಯಾಗಿದೆ.

ಮಂಗಳೂರು, ಉಡುಪಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಜೋರು ಮಳೆಯಾಗಿದೆ. ಪುತ್ತೂರು ತಾಲ್ಲೂಕಿನ ಒಳಮೊಗ್ರು ಗ್ರಾಮದ ಸುತ್ತಮುತ್ತ ಅಡಿಕೆ ತೋಟ, ತೆಂಗಿನ ಮರಗಳು ನೆಲಕ್ಕೆ ಉರುಳಿದ್ದು ಅಪಾರ ಕೃಷಿ ನಾಶ ಆಗಿದೆ. ಚಿಕ್ಕಮಗಳೂರಿನ ಆಲ್ದೂರಿನಲ್ಲಿ ಮೂರು ತಾಸಿಗೂ ಹೆಚ್ಚು ಮಳೆಯಾಗಿದೆ.

ಬೆಳಗಾವಿ ಜಿಲ್ಲೆ ಮೂಡಲಗಿ ತಾಲ್ಲೂಕಿನ ಹುಣಶ್ಯಾಳ ಪಿವ್ಹೆ ಗ್ರಾಮದಲ್ಲಿ ಸಿಡಿಲು ಬಡಿದು ಪ್ರಕಾಶ ಡೊಂಬರ ಅವರ 6 ಮೇಕೆಗಳು ಮೃತಪಟ್ಟಿವೆ.

ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಒಂದು ತಾಸು ಗುಡುಗು ಸಹಿತ ಮಳೆ ಸುರಿದಿದೆ. ಗಾಳಿ–ಮಳೆಗೆ ಹಾಡಲಗಿ ಗ್ರಾಮದ ಬಳಿ ಗೂಡ್ಸ್ ರಿಕ್ಷಾ ಮೇಲೆ ಮರ ಬಿದ್ದು, ರಿಕ್ಷಾ ಸಂಪೂರ್ಣ ಜಖಂಗೊಂಡಿದೆ. ಹುಬ್ಬಳ್ಳಿ ಹಾಗೂ ಹಾವೇರಿ ಜಿಲ್ಲೆ ತಡಸ ಸುತ್ತ–ಮುತ್ತ ಸಾಧಾರಣ ಮಳೆಯಾಗಿದೆ.



ಹುನಗುಂದ ತಾಲ್ಲೂಕಿನ ಚಿತ್ತವಾಡಗಿ ಗ್ರಾಮದ ವೀರಭದ್ರೇಶ್ವರ ದೇವಸ್ಥಾನ ಆವರಣದಲ್ಲಿನ ಬೇವಿನಮರ ಬಿದ್ದಿದ್ದರಿಂದ ಕ್ಯಾಂಟರ್ ಜಖಂಗೊಂಡಿದೆ

ಮೈಸೂರು ಹೆದ್ದಾರಿಯಲ್ಲಿ ನಿಂತ ನೀರು

ರಾಮನಗರ– ಚನ್ನಪಟ್ಟಣ ಸೇರಿದಂತೆ ವಿವಿಧೆಡೆ ಬಿರುಗಾಳಿ ಸಹಿತ ಮಳೆ ಸುರಿಯಿತು. ರಾಮನಗರದಲ್ಲಿ ಅರ್ಧ ತಾಸಿಗೂ ಹೆಚ್ಚು ರಭಸದ ಮಳೆಯಾಗಿದ್ದು, ರಸ್ತೆಗಳಲ್ಲಿ ನೀರು ತುಂಬಿ ಹರಿಯಿತು. ಹೆದ್ದಾರಿಯಲ್ಲಿಯೂ ಅಲ್ಲಲ್ಲಿ ನೀರು ನಿಂತಿತ್ತು. ನಿರಂತರ ಮಳೆಯ ಕಾರಣಕ್ಕೆ ಮಾವು ಬೆಳೆಗಾರರು ಕೊಯ್ಲಿಗೆ ಮುಂದಾಗಿದ್ದು, ರಾಮನಗರ ಎಪಿಎಂಸಿ ಮುಂಭಾಗ ಮಾವಿನ ಕಾಯಿಗಳನ್ನು ತುಂಬಿಕೊಂಡ ಟ್ರ್ಯಾಕ್ಟರ್‌ಗಳು ಸರದಿ ಸಾಲಿನಲ್ಲಿ ನಿಂತಿದ್ದವು.



ಹರ್ಷಿಕಾ ಪೂಣಚ್ಚ

ವಿನಯ್‌ಗೆ ಸಿನಿಮಾ ಸುಗ್ಗಿಯ ಹಿಗ್ಗು

ಸೋಲು, ಗೆಲುವುಗಳನ್ನು ಲೆಕ್ಕಿಸದೆ ಉತ್ತಮ ಕಥೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿರುವ ನಟ ವಿನಯ್ ರಾಜ್‌ಕುಮಾರ್, ಸದ್ಯ 'ಪೆಪೆ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. 'ಪೆಪೆ' ಟೀಸರ್ ಬಿಡುಗಡೆಗೊಂಡಿದ್ದು, ಸಾಕಷ್ಟು ನಿರೀಕ್ಷೆ ಮೂಡಿಸಿದೆ. 'ಸಿನಿಮಾ ಪುರವಣಿ'ಯೊಂದಿಗೆ ಮಾತಿಗಿಳಿದ ಅವರು ಈ ಹೊತ್ತಿನ ತಮ್ಮ ಸಿನಿಮಾಗಳ ಕುರಿತು ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಾರೆ...

ವಿನಾಯಕ ಕೆ.ಎಸ್.

- **'ಪೆಪೆ' ಎಂದರೇನು? ಶೀರ್ಷಿಕೆಗೆ ಏನಾದರೂ ಕಾರಣವಿದೆಯಾ?**

ಬಲವಾದ ಕಾರಣದೊಂದಿಗೆ, ಯಾವುದೇ ಹಿನ್ನೆಲೆಯಿಂದ ಇಟ್ಟ ಶೀರ್ಷಿಕೆ ಇದಲ್ಲ. 'ಪೆಪೆ' ಇಲ್ಲಿ ನನ್ನ ಪಾತ್ರದ ಹೆಸರು. ಚಿತ್ರದಲ್ಲಿ 'ಪ್ರದೀಪ್' ಎಂಬ ಪಾತ್ರ ಮಾಡಿರುವೆ. ಅದರಿಂದಾಗಿ ಈ ಶೀರ್ಷಿಕೆ ಹುಟ್ಟಿದ್ದು. ಮಲೆನಾಡಿನೊಂದಿಗೆ ಸಂಬಂಧ ಹೊಂದಿದ ಪಾತ್ರವಿದು. ಒಂದು ಕಾಲ್ಪನಿಕ ಊರು, ಪ್ರದೇಶದಲ್ಲಿ ನಡೆಯುವ ಕಥೆ ಈ ಸಿನಿಮಾದಲ್ಲಿದೆ.

- **ಚಿತ್ರದ ಟೀಸರ್‌ನಲ್ಲಿ ರಕ್ತದ ಹೊಳೆ ಹರಿದಿದ್ದು, ತಾವು ಕೂಡ ಮಾಸ್ ಸಿನಿಮಾ ಎದುರು ನೋಡುತ್ತಿರುವಿರಾ?**

ಪಾತ್ರ ಮಾಸ್ ಆಗಿದೆ. ಹಾಗಂತ ಇದು ಸಿದ್ಧಸೂತ್ರಗಳನ್ನು ಹೊಂದಿರುವ ಮಾಸ್ ಚಿತ್ರವಲ್ಲ. ಸಾಕಷ್ಟು ಡ್ರಾಮಾ ಇದೆ. ಒಂದೊಳ್ಳೆ ಕಥೆ ಇದೆ. ಮನರಂಜನೆ ಇದೆ. ಇಡೀ ಚಿತ್ರದ ಸೌಂಡ್ ಡಿಸೈನ್ ಬೇರೆ ರೀತಿಯೇ ಇದೆ. ಒಂದು ರೀತಿ ಪರಿಪೂರ್ಣ ಮಿಶ್ರಣದ ಸಿನಿಮಾ. ಸಂಕಲನಕ್ಕೆ ತುಂಬ ಜಾಗವಿದೆ. ಬಿಜಿಎಂ ನೆನಪಿನಲ್ಲಿ ಉಳಿಯುತ್ತೆ. ಇದು ಖಂಡಿತಾ ಮಾಮೂಲಿ ಮಾಸ್ ಚಿತ್ರ ಅಲ್ಲ.

- **'ಪೆಪೆ' ಚಿತ್ರದಲ್ಲಿ ಮಲಯಾಳಂ ಸಿನಿಮಾಗಳ ಛಾಯೆ ದಟ್ಟವಾಗಿರುವಂತಿದೆ ಅಲ್ಲವೆ?**

ನಿರ್ದೇಶಕ ಶ್ರೀಲೇಶ್ ಎಸ್. ನಾಯರ್ ಹುಟ್ಟಿ ಬೆಳೆದಿದ್ದು ಕೊಡಗಿನಲ್ಲಿ. ಅಪ್ಪಟ್ಟ ಕನ್ನಡಿಗ. ಆದರೆ ಮೂಲತಃ ಕೇರಳದವರು. ಅವರ ಮಾತೃಭಾಷೆ ಮಲಯಾಳಂ. ಚಿತ್ರಕ್ಕೆ ಅವರದ್ದೇ ಕಥೆ, ಸಂಭಾಷಣೆ ಇದೆ. ಹೀಗಾಗಿ ಚಿತ್ರದಲ್ಲಿ ಅಲ್ಲಿನ ಛಾಯೆ ಸ್ವಲ್ಪ ಕಂಡಿರಬಹುದು. ಚಿತ್ರದಲ್ಲಿ ಸಾಕಷ್ಟು ಕಡೆ ಮೌನವಿದೆ. ಹೊಸ ಅನುಭವ ನೀಡುವ ಸಿನಿಮಾ ಇದಾಗಿದೆ.

- **ನೀವು ಪ್ರತಿ ಸಲ ವಿಭಿನ್ನ ಕಥೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿರಲು ಕಾರಣವೇನು?**

ಸಿದ್ಧಸೂತ್ರದ ಚೌಕಟ್ಟಿನಲ್ಲಿ ಇರಲು ಇಷ್ಟವಿಲ್ಲ. ಅದಕ್ಕೆ ಕಟ್ಟುಬಿದ್ದರೆ ನಾವು ಅಂತಹ ಕಥೆಗಳನ್ನೇ ಹುಡುಕುತ್ತ ಇರುತ್ತೇವೆ. ಮನಸ್ಸು ಮುಕ್ತವಾಗಿದ್ದರೆ ಬೇರೆ ರೀತಿಯ ಕಥೆಗಳು, ಪಾತ್ರಗಳು ಸಿಗುತ್ತವೆ. ಅಂತಿಮವಾಗಿ ಪ್ರೇಕ್ಷಕರಿಗೆ ಮನರಂಜನೆ ನೀಡುವ ಸಿನಿಮಾ ಮಾಡಬೇಕಷ್ಟೆ.

- **ನಿಮ್ಮ ಹಿಂದಿನ ಸಿನಿಮಾಗಳಿಗೆ ಉತ್ತಮ ಪ್ರತಿಕ್ರಿಯೆ ಸಿಕ್ಕರೂ ಚಿತ್ರಮಂದಿರಗಳಲ್ಲಿ ನಿರೀಕ್ಷಿತ ಯಶಸ್ಸು ಸಿಗಲಿಲ್ಲ ಅಲ್ಲವೆ?**

ಇಡೀ ಪಯಣದಲ್ಲಿ ಎಲ್ಲೋ ಒಂದು ಕಡೆ ಎಡವಿರುತ್ತೀವಿ. ಸಿನಿಮಾವನ್ನು ಜನರಿಗೆ ತಲುಪಿಸುವಲ್ಲಿ ವಿಫಲವಾಗಿರುತ್ತೇವೆ. ಇಲ್ಲವಾದರೆ ಬಿಡುಗಡೆ ಸಮಯ ತಪ್ಪಾಗಿರುತ್ತೆ. ಕೆಲವೊಮ್ಮೆ ಚಿತ್ರದಲ್ಲಿ ಯಾವುದೋ ಅಂಶ ಕಡಿಮೆಯಾಗಿ ಜನರ ನಿರೀಕ್ಷೆ ತಲುಪಿರುವುದಿಲ್ಲ. ಗೆಲುವಿಗೆ ಎಲ್ಲವೂ ಕೂಡಿ ಬರಬೇಕು. 100 ವರ್ಷದಿಂದ ಚಿತ್ರಮಂದಿರಗಳಿವೆ. ಜನ ಬರುವುದು, ಹೋಗುವುದು ಇದ್ದಿದ್ದೇ. ಕೆಲವು ಸಿನಿಮಾಗಳು ಗೆಲ್ಲುತ್ತವೆ, ಕೆಲವು ಸೋಲುತ್ತವೆ. ಈ ಪ್ರಕ್ರಿಯೆ ನಿರಂತರ. ಆದರೆ ತುಂಬ ಒಳ್ಳೆಯ ಸಿನಿಮಾ ಚಿತ್ರಮಂದಿರದಲ್ಲಿ ಸೋತ ಉದಾಹರಣೆ ಇಲ್ಲ. ಜನರೆದುರು ಸೋತಿದ್ದೇವೆ ಎಂದರೆ ನಾವೇ ಎಲ್ಲೋ ಎಡವಿದ್ದೇವೆ ಎಂದರ್ಥ.

- **ನಿಮ್ಮ ಯಾವ್ಯಾವ ಸಿನಿಮಾ ಬಿಡುಗಡೆಗೆ ಸಜ್ಜಾಗಿವೆ?**

ಕೀರ್ತಿ ಅವರು ನಿರ್ದೇಶಿಸಿರುವ 'ಅಂದೊಂದಿತ್ತು ಕಾಲ' ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಅಂತಿಮ ಹಂತದಲ್ಲಿದ್ದು, ಬಿಡುಗಡೆಗೆ ಸಿದ್ಧವಿದೆ. 'ಪೆಪೆ' ಒಂದೆರಡು ತಿಂಗಳಲ್ಲಿ ತೆರೆಗೆ ಬರುತ್ತದೆ. ರಾಜಸ್ಥಾನ, ಮುಂಬೈನಲ್ಲಿ 'ಸಿಂಪಲ್' ಸುನಿ ನಿರ್ದೇಶನದ 'ಒಂದು ಸರಳ ಪ್ರೇಮಕಥೆ' ಸಿನಿಮಾದ ಚಿತ್ರೀಕರಣ ಮುಗಿಸಿಕೊಂಡು ಬಂದಿದ್ದೇವೆ. ಇನ್ನೊಂದು ವಾರ ಚಿತ್ರೀಕರಣ ಬಾಕಿ ಇದೆ.

- **ಈವರೆಗಿನ ಸಿನಿಮಾ ಪಯಣದ ಅನುಭವ ಹೇಗಿತ್ತು?**

ಈಗಾಗಲೇ ನಾಲ್ಕು ಚಿತ್ರಗಳು ಬಿಡುಗಡೆಗೊಂಡಿವೆ. ಇನ್ನೂ ಮೂರು ಬಿಡುಗಡೆಯಾಗಬೇಕಷ್ಟೆ. ಬೇರೆ ಬೇರೆ ರೀತಿಯ ಸಿನಿಮಾಗಳಲ್ಲಿ ಕೆಲಸ ಮಾಡಿರುವೆ. ಬೇರೆ ಬೇರೆ ಪ್ರದೇಶಗಳಲ್ಲಿ ಚಿತ್ರೀಕರಣ ನಡೆದಿದೆ. ಹೀಗಾಗಿ ಸಾಕಷ್ಟು ವೈವಿಧ್ಯ ಕಂಡಿರುವೆ. ಒಳ್ಳೊಳ್ಳೆ ಕಥೆಗಳು ಸಿಕ್ಕಿವೆ, ಖುಷಿಯಿದೆ.

- **ಸಾಕಷ್ಟು ಹೊಸ ತಂಡದ ಜೊತೆಯೇ ಕೆಲಸ ಮಾಡುತ್ತೀರಿ?**

ಎರಡೇ ಸಿನಿಮಾ ಅನುಭವಿ ನಿರ್ದೇಶಕರ ಜತೆ ಕೆಲಸ ಮಾಡಿದ್ದು. ಸುನಿಯಂತಹ ನಿರ್ದೇಶಕರ ಜತೆ ಕೆಲಸ ಮಾಡುವುದು ಒಂದು ಭಿನ್ನ ಅನುಭವ. ಚಿತ್ರೀಕರಣ ಬಹಳ ಯೋಜಿತವಾಗಿರುತ್ತದೆ. ಅಂದುಕೊಂಡಂತೆ ಮುಗಿಯುತ್ತದೆ. ಹೊಸಬರಲ್ಲಿ ಉತ್ತಮ ಕಥೆ ಇರುತ್ತದೆ. ಉತ್ಸಾಹ ಇರುತ್ತೆ. ಬೇರೆ ರೀತಿಯ ಆಯಾಮಗಳಿರುತ್ತವೆ. ಒಟ್ಟಿನಲ್ಲಿ ಯಾವ ಕಥೆ ಚೆನ್ನಾಗಿರುತ್ತದೆಯೋ, ಯಾವುದು ಸೂಕ್ತ ಎನಿಸುತ್ತದೆಯೋ ಅದನ್ನು ಆಯ್ಕೆ ಮಾಡಿಕೊಂಡು ಹೋಗಬೇಕು.



ಪೆಪೆ
ವಿನಯ್ ರಾಜ್‌ಕುಮಾರ್

'ಬೇರ'ಕ್ಕೆ ಹೊರಟ ವಿನು ಬಳಂಜ

ಕಿರುತೆರೆಯ ಜನಪ್ರಿಯ ನಿರ್ದೇಶಕ ವಿನು ಬಳಂಜ 'ಬೇರ' ಚಿತ್ರ ನಿರ್ದೇಶಿಸುವ ಮೂಲಕ ಚಂದನವನಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ.

ಎಸ್.ಎಲ್.ವಿ ಕಲರ್ಸ್ ಲಾಂಛನದಲ್ಲಿ ದಿವಾಕರ ದಾಸ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. 'ಕಳೆದ ನಾಲ್ಕೈದು ವರ್ಷ ನಾನು ವೈಯಕ್ತಿಕ ಕಾರಣದಿಂದ ಕಿರುತೆರೆ ಹಾಗೂ ಹಿರಿತೆರೆಯಿಂದ ದೂರವಿದ್ದೆ. ಆನಂತರ ಒಂದು ಮ್ಯೂಸಿಯಂಗೆ ಹೋಗಿದ್ದಾಗ ಈ ಕಥೆ ಹುಟ್ಟಿದ್ದು. ನನ್ನನ್ನು ಸಿನಿಮಾ ಮಾಡಲು ಪ್ರೇರೇಪಿಸಿದ್ದು ನಿರ್ಮಾಪಕ ದಿವಾಕರ್. ತುಳುವಿನಲ್ಲಿ 'ಬೇರ' ಎಂದರೆ ಕನ್ನಡದಲ್ಲಿ ವ್ಯಾಪಾರ ಎಂದು ಅರ್ಥ. ಅಮಾಯಕರನ್ನು ಬಳಸಿಕೊಂಡು ಹೇಗೆ ನಾಯಕರಾಗುತ್ತಾರೆ ಹಾಗೂ 'ಯಾವ ತಾಯಂದಿರ ಮಕ್ಕಳೂ ಇನ್ನೊಬ್ಬರಿಂದಾಗಿ ಸಾಯಬಾರದು' ಎಂಬುದೇ ಚಿತ್ರದ ಕಥಾಹಂದರ. ಈ ಚಿತ್ರದಲ್ಲಿ ನಾಯಕ, ನಾಯಕಿ ಎಂಬುವುದಿಲ್ಲ. ಬರುವ ಎಲ್ಲಾ ಪಾತ್ರಗಳು ಮುಖ್ಯ ಪಾತ್ರಗಳಾಗಿರುತ್ತದೆ. ಸದ್ಯ ಟೀಸರ್ ಬಿಡುಗಡೆ ಮಾಡಿದ್ದೇವೆ. ಮೇ ಅಂತ್ಯಕ್ಕೆ ಚಿತ್ರವನ್ನು ತೆರೆಗೆ ತರುವ ಯೋಜನೆ ಇದೆ' ಎಂದು ನಿರ್ದೇಶಕ ವಿನು ಬಳಂಜ ತಿಳಿಸಿದರು.

'ಕೇವಲ ಮೂರು ಜನ ಕೆಲಸಗಾರರಿಂದ ಶುರುವಾದ ಎಸ್ ಎಲ್ ವಿ ಸಂಸ್ಥೆಯಲ್ಲಿ ಇಂದು ನೂರೈವತ್ತು ಜನ ಕೆಲಸಗಾರರಿದ್ದಾರೆ. ಈಗ ಎಸ್ ಎಲ್ ವಿ ಕಲರ್ಸ್ ಲಾಂಛನದಲ್ಲಿ ಮೊದಲ ಚಿತ್ರ ನಿರ್ಮಾಣ ಮಾಡಿದ್ದೇವೆ' ಎನ್ನುತ್ತಾರೆ ನಿರ್ಮಾಪಕ ದಿವಾಕರ ದಾಸ.

ದತ್ತಣ್ಣ, ಯಶ್ ಶೆಟ್ಟಿ, ಹರ್ಷಿಕಾ ಪೂಣಚ್ಚ, ಅಶ್ವಿನ್ ಹಾಸನ್, ಚಿತ್ಕಲ ಬಿರಾದಾರ್, ಮಂಜುನಾಥ್ ಹೆಗಡೆ, ಗುರು ಹೆಗಡೆ, ರಾಕೇಶ್ ಮಯ್ಯ, ಧವಳ್ ದೀಪಕ್ ಮುಂತಾದವರು 'ಬೇರ' ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಸಿನಿ ಸಂಕ್ಷಿಪ್ತ

'ಎಂಗೇಜ್ಮೆಂಟ್'ಗೆ ಐಶ್ವರ್ಯ ನಾಯಕಿ

'ಪ್ರವೀಣ' ಚಿತ್ರದಲ್ಲಿನ ನಟನೆಯಿಂದ ಚಂದನವನದಲ್ಲಿ ಗುರುತಿಸಿಕೊಂಡಿರುವ ಐಶ್ವರ್ಯ ಗೌಡ, ಇದೀಗ ಬೋನಗಾನಿ ಎಂಟರ್‌ಟೈನ್ಮೆಂಟ್‌ನಡಿ ನಿರ್ಮಾಣವಾಗುತ್ತಿರುವ 'ಎಂಗೇಜ್ಮೆಂಟ್' ಎಂಬ ಪ್ಯಾನ್ ಇಂಡಿಯಾ ಸಿನಿಮಾಗೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.



ಐಶ್ವರ್ಯ ಗೌಡ

ನಿಖಿಲ್ ಕುಮಾರ್ ಅಭಿನಯದ 'ಜಾಗ್ವಾರ್' ಚಿತ್ರದ ಮುಖಾಂತರ ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟಿದ್ದ ಐಶ್ವರ್ಯ, ನಂತರ 'ಪ್ರವೀಣ' ಚಿತ್ರದಲ್ಲಿ ನಟಿಸಿದ್ದರು. ರಾಜು ಬೋನಗಾನಿ ನಿರ್ದೇಶನದ ಚಿತ್ರ 'ರೇವ್ ಪಾರ್ಟಿ'ಯಲ್ಲಿ ದ್ವಿತಿಯ ನಾಯಕಿಯಾಗಿ ನಟಿಸಿರುವ ಐಶ್ವರ್ಯ, ಇದೀಗ ಅದೇ ನಿರ್ದೇಶಕರ ಮತ್ತೊಂದು ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಯುವಜನತೆ ಹೇಗೆ ಮಾದಕವಸ್ತುಗಳಿಗೆ ಬಲಿಯಾಗುತ್ತಿದ್ದಾರೆ ಎಂಬ ಕಥಾಹಂದರ ಹೊಂದಿರುವ ಈ ಚಿತ್ರ ಸದ್ಯ ಪ್ರಿಪ್ರೊಡಕ್ಷನ್ ಹಂತದಲ್ಲಿದೆ. ಶೀಘ್ರದಲ್ಲೇ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ ಎಂದಿದ್ದಾರೆ ನಿರ್ದೇಶಕರು.

ಕ್ಯಾರವನ್ ಚಾಲಕನ 'ಲಕ್'



ಮಂಜು

ಹಲವು ವರ್ಷಗಳಿಂದ ಸ್ಯಾಂಡಲ್‌ವುಡ್‌ನ ಹಲವು ಹೀರೊಗಳ ಕ್ಯಾರವನ್ ಚಾಲಕನಾಗಿದ್ದ ಮಂಜು ಎನ್ನುವವರು ಇದೀಗ ಬೆಳ್ಳಿತೆರೆಗೆ ನಾಯಕನಾಗಿ ಪ್ರವೇಶಿಸುತ್ತಿದ್ದಾರೆ. 'ಲಕ್' ಎನ್ನುವ ಶೀರ್ಷಿಕೆ ಹೊತ್ತ ಈ ಸಿನಿಮಾವನ್ನು ಹರೀಶ್ ನಿರ್ದೇಶಿಸುತ್ತಿದ್ದಾರೆ. ಮಂಜು ಅವರೇ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. 'ಚಿತ್ರಕ್ಕೆ ಮೊದಲೊಬ್ಬ ನಿರ್ದೇಶಕರಿದ್ದರು. ನಾಯಕರೂ ಬೇರೆಯೇ ಇದ್ದರು. ಅನಿವಾರ್ಯ ಕಾರಣಗಳಿಂದ ಅವರು ಚಿತ್ರದಿಂದ ದೂರವಾದಾಗ ಈ ಚಿತ್ರಕ್ಕೆ ನಾನು ನಿರ್ದೇಶಕನಾದೆ. ಮಂಜು ನಾಯಕನಾದರು. ನನ್ನ ಜೀವನದಲ್ಲೇ ನಡೆದಿರುವ ಘಟನೆಯನ್ನು ಸಿನಿಮಾ ರೂಪದಲ್ಲಿ ತರುತ್ತಿದ್ದೇನೆ. ಈಗಾಗಲೇ ಚಿತ್ರೀಕರಣ ಅಂತಿಮ ಹಂತದಲ್ಲಿದೆ. ಪದ್ಮಜಾ ರಾವ್, ಕಡ್ಡಿಪುಡಿ ಚಂದ್ರು ಮುಂತಾದವರು ತಾರಾಬಳಗದಲ್ಲಿದ್ದಾರೆ' ಎಂದು ನಿರ್ದೇಶಕ ಹರೀಶ್ ಮಾಹಿತಿ ನೀಡಿದರು.

ಇತ್ತೀಚೆಗೆ ನಟರಾದ ಶಿವರಾಜ್‌ಕುಮಾರ್, ಧನಂಜಯ ಹಾಗೂ ವಿನೋದ್ ಪ್ರಭಾಕರ್ ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆ ಮಾಡಿದರು. 'ನಟರಾದ ಗಣೇಶ್, ಧನಂಜಯ ಅವರ ಕ್ಯಾರವನ್‌ಗೆ ನಾನು ಚಾಲಕನಾಗಿದ್ದೆ. ಸಿನಿಮಾ ಮಾಡುವ ಆಸೆಯಿತ್ತು. ಹೀಗಾಗಿ ಈ ಚಿತ್ರ ನಿರ್ಮಾಣ ಮಾಡಿದ್ದೇನೆ' ಎಂದರು ಮಂಜು.




'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ಕ್ಕೆ ದಿನಗಣನೆ ಆರಂಭವಾಗಿದೆ. ಕೆಲವೇ ದಿನಗಳಲ್ಲಿ 15 ವಿಭಾಗಗಳಲ್ಲಿ ನಾಮನಿರ್ದೇಶನಗೊಂಡ ಚಿತ್ರರಂಗದ ಪ್ರತಿಭೆಗಳು ಅನಾವರಣಗೊಳ್ಳಲಿದ್ದಾರೆ. ಈ ಹೊಸ್ತಿಲಲ್ಲಿ ಚಿತ್ರರಂಗದ ಹಲವರು ಪ್ರಜಾವಾಣಿ ಜೊತೆಗಿನ ನಂಟು, ನೆನಪುಗಳ ಬುತ್ತಿಯಿಂದ ಸವಿನೆನಪುಗಳನ್ನು ಹರಿಬಿಟ್ಟದ್ದಾರೆ...

ಸಿನಿ ಸಮ್ಮಾನ: ಪ್ರತಿಕ್ರಿಯೆಗಳು

ಏರ್ ಕೂಲರ್ ಗೆದ್ದಿದ್ದೆ!

'ಪ್ರಜಾವಾಣಿ' ಎಂದರೆ ನನಗೆ ಒಂದು ರೀತಿ ಹಳೆಯ ನೆನಪುಗಳ ಬುತ್ತಿ. ಚಿಕ್ಕವನಿದ್ದಾಗನಿಂದ ಓದಿಕೊಂಡು ಬಂದಿದ್ದು 'ಪ್ರಜಾವಾಣಿ'ಯಾಗಿದ್ದರಿಂದ ನನಗೆ ಅದೊಂದು ಬೇರೆ ರೀತಿಯ ಅನುಭವ. ಮನೆಗೆ ಪತ್ರಿಕೆ ಬಂದ ತಕ್ಷಣ ಹಿಂಬದಿಯ ಕ್ರೀಡಾಪುಟದಿಂದ ಓದಲು ಶುರು ಮಾಡುತ್ತಿದ್ದೆ. ಶುಕ್ರವಾರದ ಸಿನಿಮಾ ರಂಜನೆ, ವಾಣಿಜ್ಯ, ಸಿನಿಮಾ ವಿಮರ್ಶೆ ಆಸಕ್ತಿಯ ವಿಷಯಗಳಾಗಿದ್ದವು. ನಾನು, ಅಮ್ಮ ಕುಳಿತುಕೊಂಡು ಸುಡೊಕೋ, ಪದಬಂಧ ತುಂಬುತ್ತಿದ್ದೆವು. ಕ್ರಿಕೆಟ್ ಪಂದ್ಯಗಳು ನಡೆಯುವಾಗ 'ಪ್ರಜಾವಾಣಿ'ಯಲ್ಲಿ ಕ್ವಿಜ್ ಇರುತ್ತಿತ್ತು. ಒಮ್ಮೆ ನಾನು ಈ ಕ್ವಿಜ್‌ನಲ್ಲಿ ಏರ್ ಕೂಲರ್ ಗೆದ್ದಿದ್ದೆ. ಅದನ್ನು ಎಂ.ಜಿ ರಸ್ತೆಯಲ್ಲಿನ ಪತ್ರಿಕಾ ಕಚೇರಿಗೆ ಬಂದು ಪಡೆದುಕೊಂಡಿದ್ದೆ. ಈಗಲೂ ಆ ಏರ್‌ಕೂಲರ್ ಮನೆಯಲ್ಲಿದೆ. ನನ್ನ ಮೊದಲ ಲೇಖನ 'ಪ್ರಜಾವಾಣಿ'ಯಲ್ಲಿ ಓದಿದ್ದು ಬಹಳ ಖುಷಿಕೊಡುವ ವಿಷಯ. ಆಗಿನ ಕಾಲದಲ್ಲಿ ತುಂಬ ಕಡಿಮೆ ಸಿನಿಮಾ ವಿಮರ್ಶೆಗಳು ಬರುತ್ತಿದ್ದವು. ಈಗ ಸಿನಿಮಾ ನೋಡಿದವರೆಲ್ಲ ವಿಮರ್ಶಕರಾಗಿದ್ದಾರೆ. ಆಗ ಹಾಗಲ್ಲ, ವೃತ್ತಿಪರರು ಮಾತ್ರ ವಿಮರ್ಶೆ ಬರೆಯುತ್ತಿದ್ದರು. ಅದನ್ನು ಓದಿ ಕಲಿತಿದ್ದು ಬಹಳವಿದೆ.ಪತ್ರಿಕೆಯ ವಿಮರ್ಶೆ ಬಹಳ ಖುಷಿ ಕೊಡುತ್ತಿತ್ತು. ಈ ರೀತಿ ಒಡನಾಟ ಹೊಂದಿರುವ ಪತ್ರಿಕೆ 'ಸಿನಿಮಾ ಸಮ್ಮಾನ' ಪ್ರಾರಂಭಿಸಿರುವುದು ಬಹಳ ಖುಷಿಯ ವಿಷಯ. ಅದಕ್ಕಿಂತ ಹೆಚ್ಚಾಗಿ ಈ ಪ್ರಶಸ್ತಿ ಆಯ್ಕೆಗಾಗಿ ಮತ ಹಾಕಲು ಕೂಡ ಸಿನಿಮಾ ಬಗ್ಗೆ ಜ್ಞಾನ, ಅನುಭವ ಹೊಂದಿರುವವರನ್ನು ಪರಿಗಣಿಸಿದ್ದಾರೆ. ಮುಕ್ತ ಆಯ್ಕೆಯಲ್ಲಿ ಅಭಿಮಾನಿಗಳು ಹೆಚ್ಚಿರುವವರು ಗೆಲ್ಲುತ್ತಾರೆ. ಆದರಿಲ್ಲಿ ತಂತ್ರಜ್ಞರೇ ಮತ ಹಾಕುವುದರಿಂದ ಉತ್ತಮ ಕೃತಿ ಗೆಲ್ಲುತ್ತದೆ, ಕೆಲಸಕ್ಕೆ ಗೌರವ ಸಿಗುತ್ತದೆ. ಮುಖ್ಯ ತೀರ್ಪುಗಾರರ ಮಂಡಳಿಯಲ್ಲಿಯೂ ಅನುಭವ ಹೊಂದಿರುವವರೇ ಇದ್ದಾರೆ.



ಸಿಂಪಲ್ ಸುನಿ, ನಿರ್ದೇಶಕ

ಬಹಳ ಒಳ್ಳೆಯ ಹೆಜ್ಜೆ



'ಪ್ರಜಾವಾಣಿ' ಪತ್ರಿಕೆಗೆ ಅದರದ್ದೇ ಆದ ವಿಶ್ವಾಸಾರ್ಹತೆ ಇದೆ. ನಾವೆಲ್ಲ ಬಾಲ್ಯದಿಂದ ಓದಿಕೊಂಡು ಬಂದ ಪತ್ರಿಕೆ. ನಮ್ಮ ಸಿನಿಮಾ ಸುದ್ದಿಗಳನ್ನು ಪ್ರೇಕ್ಷಕರಿಗೆ ತಲುಪಿಸುತ್ತಿರುವ ಪತ್ರಿಕೆ 75 ವರ್ಷಗಳನ್ನು ಪೂರೈಸುತ್ತಿರುವುದಕ್ಕೆ ಅಭಿನಂದನೆಗಳು. ಈ ಐತಿಹಾಸಿಕ ಕ್ಷಣದಲ್ಲಿ 'ಸಿನಿ ಸಮ್ಮಾನ' ಎಂಬ ಕಾರ್ಯಕ್ರಮದ ಮೂಲಕ ಸಿನಿಮಾ ರಂಗವನ್ನು ಗೌರವಿಸಲು ಹೊರಟಿರುವುದು ಬಹಳ ಒಳ್ಳೆಯ ಹೆಜ್ಜೆ. ಈ ರೀತಿಯ ಸಮ್ಮಾನ ಇನ್ನೊಂದಷ್ಟು ಜನಕ್ಕೆ ಉತ್ತೇಜನ ನೀಡುತ್ತದೆ. ತೀರ್ಪುಗಾರರ ಮಂಡಳಿಯೇ ಬಹಳ ತೂಕಬದ್ಧವಾಗಿದೆ. ಕಾಸರವಳ್ಳಿ, ಹಂಸಲೇಖ ಅವರಂತಹ ಹಿರಿಯರು ಇರುವುದು ಪ್ರಶಸ್ತಿಯ ಘನತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. 'ಪ್ರಜಾವಾಣಿ'ಯಂತಹ ವಿಶ್ವಾಸಾರ್ಹ ಪತ್ರಿಕೆ ಪ್ರಶಸ್ತಿ ನೀಡುವುದು ಉದ್ಯಮಕ್ಕೆ ಬಹಳ ಉತ್ತೇಜನ ನೀಡುತ್ತದೆ. ಈ ಪ್ರೋತ್ಸಾಹ ಸದಾ ಇರಲಿ.

ಸಂತೋಷ್ ಆನಂದ್‌ರಾಮ್, ನಿರ್ದೇಶಕ.

ತೆರೆಗೆ ಬಂತು 'ಅಥಿ'ಯ ಜೋಡಿ



ಲೋಕೇಂದ್ರ ಮತ್ತು ಶ್ರಾವ್ಯಾ

ಲೋಕೇಂದ್ರ ಸೂರ್ಯ ನಿರ್ದೇಶಿಸಿ ನಾಯಕ ನಟನಾಗಿ ನಟಿಸಿರುವ 'ಅಥಿ ಐ ಲವ್ ಯು' ಚಿತ್ರದ ಚಿತ್ರೀಕರಣ ಅಂತಿಮ ಹಂತದಲ್ಲಿದೆ. ಇದೇ ಸಂದರ್ಭದಲ್ಲಿ ಚಿತ್ರತಂಡ ನಾಯಕ–ನಾಯಕಿಯ ಫೋಟೊಶೂಟ್ ನಡೆಸಿದೆ.

'ಒಂದು ಮನೆ, ಎರಡು ಪಾತ್ರಗಳನ್ನು ಇಟ್ಟುಕೊಂಡು ಸಿನಿಮಾ ರೂಪಿಸುವುದು ಸುಲಭದ ಮಾತಲ್ಲ. ಹತ್ತಕ್ಕೂ ಹೆಚ್ಚು ನಿಮಿಷಗಳ ನಿರಂತರವಾದ ದೃಶ್ಯವನ್ನು ಚಿತ್ರೀಕರಿಸುವುದೂ ಸವಾಲು. ಇಂತಹ ಪ್ರಯತ್ನವನ್ನು ಚಿತ್ರದಲ್ಲಿ ಮಾಡಲಾಗಿದೆ. ಹೀಗಾಗಿಯೇ ಈ ಚಿತ್ರದ ಮೇಲೆ ಕುತೂಹಲ ಹೆಚ್ಚಿದೆ ಎನ್ನುವುದು ಚಿತ್ರತಂಡದ ಮಾತು.

'ಅಟ್ಟಯ್ಯ ವರ್ಸಸ್ ಹಂದಿ ಕಾಯೋಳು' ಎನ್ನುವ ಚಿತ್ರದ ಮೂಲಕ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವವರು ಲೋಕೇಂದ್ರ. ಈ ಚಿತ್ರ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಸಾಕಷ್ಟು ಸಿನಿಮೋತ್ಸವಗಳಲ್ಲಿ ಪ್ರದರ್ಶನಗೊಂಡಿದೆ. ಇದೀಗ ಗಂಡ–ಹೆಂಡತಿ ಕಥೆ ಹೊತ್ತು ಬಂದಿದ್ದಾರೆ ಲೋಕೇಂದ್ರ. 'ಕನ್ನಡದಲ್ಲಿ ಗಂಡ-ಹೆಂಡತಿಯ ಸಂಬಂಧದ ಕುರಿತ ಸಾಕಷ್ಟು ಚಿತ್ರಗಳು ಬಂದಿವೆ. ಆದರೆ ಈವರೆಗೆ ಎಲ್ಲೂ, ಯಾರೂ ಹೇಳಿರದ ಹೊಸ ವಿಚಾರವೊಂದನ್ನು 'ಅಥಿ'ಯ ಮೂಲಕ ನಾವು ಅನಾವರಣ ಮಾಡುತ್ತಿದ್ದೇವೆ' ಎನ್ನುವುದು ಲೋಕೇಂದ್ರ ಸೂರ್ಯ ಮಾತು.

'ಫೋಟೊಗಳು ಜನರನ್ನು ಆಕರ್ಷಿಸುವುದರ ಜೊತೆಗೆ ಸಿನಿಮಾ ವಿಷಯ ಹೇಳುವಂತಿರಬೇಕು ಎನ್ನುವ ಕಾರಣಕ್ಕೆ ಚಿತ್ರೀಕರಣವೆಲ್ಲಾ ಮುಕ್ತಾಯವಾಗುತ್ತಿರುವ ಈ ಹಂತದಲ್ಲಿ ಫೋಟೊಶೂಟ್ ಮಾಡಿದ್ದೇವೆ. ಮೇ ಮೂರನೇ ವಾರದಲ್ಲಿ 'ಅಥಿ' ಚಿತ್ರದ ಫಸ್ಟ್‌ಲುಕ್ ಬಿಡುಗಡೆ ಮಾಡುತ್ತೇವೆ' ಎಂದಿದ್ದಾರೆ ಚಿತ್ರದ ನಿರ್ಮಾಪಕರಾದ 'ರೆಡ್ ಅಂಡ್ ವೈಟ್' ಸೆವೆನ್ ರಾಜ್.

'ಅಥಿ' ಚಿತ್ರಕ್ಕೆ ಲೋಕೇಂದ್ರ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಅನಂತ್ ಆರ್ಯನ್ ಸಂಗೀತ ಚಿತ್ರಕ್ಕಿದೆ. ಶ್ರಾವ್ಯಾ ರಾವ್ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ.

'ಸಪ್ತ ಸಾಗರ' ದಾಟಿದ ರಕ್ಷಿತ್ ಶೆಟ್ಟಿ!




ಸಪ್ತ ಸಾಗರದಾಚೆ ಎಲ್ಲೋ
ರಕ್ಷಿತ್ ಹಾಗೂ ರುಕ್ಮಿಣಿ

ನಟ ರಕ್ಷಿತ್ ಶೆಟ್ಟಿ ನಟನೆಯ, ಹೇಮಂತ್ ಎಂ.ರಾವ್ ನಿರ್ದೇಶನದ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಿಡುಗಡೆಗೆ ಚಿತ್ರತಂಡ ಸಜ್ಜಾಗುತ್ತಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಈ ಸಿನಿಮಾ ಜುಲೈ ಅಂತ್ಯಕ್ಕೆ ಬೆಳ್ಳಿತೆರೆಗೆ ಬರಲಿದೆ.

ಈ ಕುರಿತು ಮಾಹಿತಿ ನೀಡಿರುವ ರಕ್ಷಿತ್, 'ಸಪ್ತ ಸಾಗರದಾಚೆ ಎಲ್ಲೋ ಸಿನಿಮಾ ಪ್ರಸ್ತುತ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಜುಲೈ ಅಂತ್ಯಕ್ಕೆ ಅಂದರೆ ಮೊಹರಂ ವೇಳೆಗೆ ಚಿತ್ರ ಬಿಡುಗಡೆಯಾಗಲಿದೆ' ಎಂದಿದ್ದಾರೆ. ಈ ನಡುವೆ 'ಉಳಿದವರು ಕಂಡಂತೆ' ಸಿನಿಮಾದ ಸರಣಿಯಾದ 'ರಿಚರ್ಡ್ ಆ್ಯಂಟನಿ' ಚಿತ್ರದ ಪ್ರಿಪ್ರೊಡಕ್ಷನ್‌ನಲ್ಲಿ ರಕ್ಷಿತ್ ತೊಡಗಿಸಿಕೊಂಡಿದ್ದಾರೆ. 'ರಿಚರ್ಡ್ ಆ್ಯಂಟನಿ' ಚಿತ್ರದ ಬರವಣಿಗೆಗಾಗಿ ರಕ್ಷಿತ್ ಅವರು ಅಮೆರಿಕಕ್ಕೆ ತೆರಳಿದ್ದಾರೆ. ಅಮೆರಿಕದಿಂದ ಬಂದು 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದ ಪ್ರಚಾರದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಈ ಸಿನಿಮಾ ರಿಲೀಸ್ ಬಳಿಕವಷ್ಟೇ ರಿಚರ್ಡ್ ಆ್ಯಂಟನಿ ಸಿನಿಮಾದ ಶೂಟಿಂಗ್ ಆರಂಭವಾಗಲಿದೆ ಎಂಬ ಸುಳಿವನ್ನೂ ರಕ್ಷಿತ್ ನೀಡಿದ್ದಾರೆ.

137 ದಿನಗಳ ಸುದೀರ್ಘ ಶೂಟಿಂಗ್ ಬಳಿಕ 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರತಂಡವು ಮಾರ್ಚ್‌ನಲ್ಲಿ ಕುಂಬಳಕಾಯಿ ಒಡೆದಿತ್ತು. ಕಳೆದ ವರ್ಷವೇ ರಿಲೀಸ್ ಆಗಬೇಕಿದ್ದ ಈ ಸಿನಿಮಾದ ಚಿತ್ರೀಕರಣ ಹಲವು ಕಾರಣಗಳಿಂದ ವಿಳಂಬವಾಗಿತ್ತು. ಈ ಚಿತ್ರದಲ್ಲಿ ಎರಡು ಶೇಡ್‌ಗಳಲ್ಲಿ ರಕ್ಷಿತ್ ಕಾಣಿಸಿಕೊಳ್ಳಲಿದ್ದು, ರುಕ್ಮಿಣಿ ವಸಂತ್ ಹಾಗೂ ಚೈತ್ರಾ ಜೆ.ಆಚಾರ್ ಇಲ್ಲಿ ರಕ್ಷಿತ್ ಅವರಿಗೆ ಜೋಡಿಯಾಗಿದ್ದಾರೆ. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದ ಬಳಿಕ ನಿರ್ದೇಶಕ ಹೇಮಂತ್ ಎಂ.ರಾವ್ ಹಾಗೂ ರಕ್ಷಿತ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಎರಡನೇ ಸಿನಿಮಾ ಇದಾಗಿದೆ.



ಸುಭಾಷಿತ

ಧೈರ್ಯವಿಲ್ಲದೆ ಈ ಜಗತ್ತಿನಲ್ಲಿ ನೀವು ಏನನ್ನೂ ಸಾಧಿಸಲಾರಿರಿ. ಆತ್ಮಗೌರವದಂತೆ ಧೈರ್ಯವೂ ಶ್ರೇಷ್ಠವಾದ ಗುಣ.

–ಅರಿಸ್ಟಾಟಲ್

ಕೊನೆಗೊಂಡ ಕೋವಿಡ್ ತುರ್ತು ಕೊನೆಗೊಳ್ಳದ ಸೋಂಕಿನ ಆತಂಕ

ಕೋವಿಡ್–19ಕ್ಕೆ ಸಂಬಂಧಿಸಿದ ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿ ಕೊನೆಗೊಂಡಿದೆ ಎನ್ನುವ ವಿಶ್ವ ಆರೋಗ್ಯ ಸಂಸ್ಥೆಯ ಘೋಷಣೆ ಒಂದು ಔಪಚಾರಿಕ ಪ್ರಕಟಣೆಯಾಗಿದ್ದರೂ, ಜನರಿಗೆ ನಿರಾಳಭಾವ ಉಂಟುಮಾಡುವಂತಹದ್ದು. ಚೀನಾದಲ್ಲಿ ಮೊದಲು ಹಾಗೂ ಇತರ ದೇಶಗಳಲ್ಲಿ ಬಳಿಕ ಕೊರೊನಾ ಸೋಂಕು ಉಲ್ಬಣಿಸಿದ ಕಾರಣದಿಂದ, 'ಕೋವಿಡ್–19 ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿ'ಯನ್ನು ವಿಶ್ವ ಆರೋಗ್ಯ ಸಂಸ್ಥೆಯು 2020ರ ಜನವರಿಯಲ್ಲಿ ಘೋಷಿಸಿತ್ತು. ಆ ಪ್ರಕಟಣೆಯ ನಂತರದ ಮೂರು ವರ್ಷಗಳಲ್ಲಿ ಕೊರೊನಾ ಕಾರಣದಿಂದಾಗಿ ಜಗತ್ತು ಅನುಭವಿಸಿದ ಸಾವುನೋವು ಹಾಗೂ ತೆತ್ತ ಬೆಲೆ ಊಹೆಗೆ ನಿಲುಕದಷ್ಟು ಅಸಹನೀಯವಾದುದು. 70 ಲಕ್ಷಕ್ಕೂ ಹೆಚ್ಚು ಜನರು ಕೋವಿಡ್‌ಗೆ ಬಲಿಯಾದರು. ಸೋಂಕನ್ನು ನಿಯಂತ್ರಿಸುವ ಸಲುವಾಗಿ ಜಾರಿಗೆ ತರಲಾದ ಲಾಕ್‌ಡೌನ್‌ನಿಂದ ಜಗತ್ತು ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಯಿತು ಹಾಗೂ ಜನಸಾಮಾನ್ಯರ ಜೀವನ ನಿರ್ವಹಣೆ ದುಸ್ತರವಾಯಿತು. ಬೀದಿಗೆ ಬಿದ್ದ ವಲಸೆ ಕಾರ್ಮಿಕರ ದಾರುಣ ಚಿತ್ರಗಳು ದುಃಸ್ವಪ್ನದಂತೆ ಕಾಡಿದವು. ಶಾಲಾ ಕಾಲೇಜುಗಳು ಮುಚ್ಚಿದ್ದರಿಂದಾಗಿ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳು ಡಿಜಿಟಲ್ ಜಗತ್ತಿಗೆ ಸೀಮಿತಗೊಂಡವು. ಕೊರೊನಾ ಕಾಲಘಟ್ಟ ಎಲ್ಲ ವರ್ಗದ ಜನರನ್ನೂ ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ ತತ್ತರಗೊಳಿಸಿತು. ವಿಜ್ಞಾನ ಮತ್ತು ತಂತ್ರಜ್ಞಾನದ ಮಿತಿ, ಸಾಮರ್ಥ್ಯಗಳನ್ನು ಒರೆಗೆ ಹಚ್ಚಲು ಕೊರೊನಾ ಕಾರಣವಾಯಿತು. ಕೋವಿಡ್ ಬಾಧೆಯ ವಿಪತ್ತಿನ ಕಾಲಘಟ್ಟವನ್ನು ಹಾದು ಜಗತ್ತು ಆತಂಕದಿಂದ ಹೊರಬಂದಿರುವ ಸಮಯದಲ್ಲಿ, ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿ ಕೊನೆಗೊಂಡಿರುವ ಪ್ರಕಟಣೆ ಹೊರಬಿದ್ದಿದೆ. ಇದರ ಬೆನ್ನಿಗೇ, ಅಮೆರಿಕಕ್ಕೆ ಬರಲು ಬಯಸುವ ವಿದೇಶಿಯರು ಕೋವಿಡ್ ಲಸಿಕೆಯನ್ನು ಕಡ್ಡಾಯವಾಗಿ ಪಡೆದಿರಬೇಕು ಎನ್ನುವ ನಿಯಮವನ್ನು ಅಲ್ಲಿನ ಸರ್ಕಾರ ಹಿಂಪಡೆದಿದೆ. ಈ ನಿರ್ಧಾರ, ಕೊರೊನಾ ಸೋಂಕಿನ ನಿರ್ವಹಣೆಯ ಕುರಿತು ಜಾಗತಿಕವಾಗಿ ಮೂಡಿರುವ ಆತ್ಮವಿಶ್ವಾಸದ ಸೂಚನೆಯಾಗಿದೆ.



ಕೊರೊನಾ ಸೋಂಕಿನ ಕುರಿತ ಆತಂಕ ತಿಳಿಗೊಂಡಿದ್ದರೂ ಸಂಕಷ್ಟದ ಕಾಲಘಟ್ಟ ಕಲಿಸಿದ ಪಾಠಗಳನ್ನು ನಾವು ಮರೆಯುವಂತಿಲ್ಲ

ನಾಲ್ಕೈದು ವಾರಗಳ ಹಿಂದಷ್ಟೇ ಕೊರೊನಾ ಸೋಂಕಿನ ಪ್ರಕರಣಗಳು ದೇಶದ ವಿವಿಧ ಭಾಗಗಳಲ್ಲಿ ಹೆಚ್ಚಾಗುತ್ತಿರುವ ಬಗ್ಗೆ ಆತಂಕ ವ್ಯಕ್ತವಾಗಿತ್ತು. ದೈನಂದಿನ ಸೋಂಕು ಹರಡುವಿಕೆ ಪ್ರಮಾಣ ಶೇ 6.78ಕ್ಕೆ ತಲುಪಿತ್ತು ಹಾಗೂ ಸುಮಾರು ಹತ್ತು ಜಿಲ್ಲೆಗಳಲ್ಲಿ ಸೋಂಕು ಹರಡುವಿಕೆ ಪ್ರಮಾಣ ಶೇ 10ಕ್ಕೂ ಹೆಚ್ಚಾಗಿತ್ತು. ಹೊಸ ಪ್ರಕರಣಗಳಿಗೆ ಒಮಿಕ್ರಾನ್ ರೂಪಾಂತರಿ ತಳಿ 'ಎಕ್ಸ್‌ಬಿಬಿ 1.16' ಕಾರಣವೆಂದು ಗುರುತಿಸಲಾಗಿತ್ತು. ಕರ್ನಾಟಕದಲ್ಲಿ ಕೂಡ 'ಎಕ್ಸ್‌ಬಿಬಿ 1.16' ಸೋಂಕಿನ ಪ್ರಕರಣಗಳು ಪತ್ತೆಯಾಗಿದ್ದವು. ಅದೃಷ್ಟವಶಾತ್ ಈ ರೂಪಾಂತರಿ ತಳಿ ಹೆಚ್ಚಿನ ಅವಾಂತರ ಸೃಷ್ಟಿಸದೆ, ಸೋಂಕು ತಹಬಂದಿಗೆ ಬಂದಿದೆ. ಈಗ ವಿಶ್ವ ಆರೋಗ್ಯ ಸಂಸ್ಥೆಯೂ ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿ ಕೊನೆಗೊಂಡಿದೆ ಎಂದು ಹೇಳಿದೆ. ಈ ಘೋಷಣೆಯಿಂದಾಗಿ, ಕೋವಿಡ್ ಪಿಡುಗು ಕೊನೆಗೊಂಡಿದೆ ಎಂದು ಭಾವಿಸುವಂತಿಲ್ಲ. ಭಾರತವೂ ಸೇರಿದಂತೆ ಜಗತ್ತಿನ ವಿವಿಧ ಭಾಗಗಳಲ್ಲಿ ಕೋವಿಡ್ ಪ್ರಕರಣಗಳು ಈಗಲೂ ಸಕ್ರಿಯವಾಗಿವೆ ಹಾಗೂ ಮುಂದಿನ ದಿನಗಳಲ್ಲೂ ಇರಲಿವೆ. ಆದರೆ, ಸೋಂಕಿನಿಂದ ಉಂಟಾಗುವ ಸಾವುನೋವು ಕನಿಷ್ಠ ಪ್ರಮಾಣದಲ್ಲಿರುವ ಹಾಗೂ ಅದರ ವಿರುದ್ಧ ಪ್ರತಿರೋಧಕ ಶಕ್ತಿ ಜನರಲ್ಲಿ ಹೆಚ್ಚಾಗಿರುವ ಕಾರಣ, ಕೊರೊನಾ ಈಗ ಭಯ ಹುಟ್ಟಿಸುವ ಸಂಗತಿಯಾಗಿ ಉಳಿದಿಲ್ಲ. ಕಳೆದೊಂದು ವರ್ಷದ ಅವಧಿಯಲ್ಲಿ ಕೋವಿಡ್ ಪ್ರಕರಣಗಳು ವಿಶ್ವದೆಲ್ಲೆಡೆ ನಿಯಂತ್ರಣದಲ್ಲಿವೆ ಹಾಗೂ ನೂರಾರು ಕೋಟಿ ನಾಗರಿಕರು ಲಸಿಕೆಗಳ ಸುರಕ್ಷತಾ ವಲಯದೊಳಗಿದ್ದಾರೆ. ಸೋಂಕಿನ ಕುರಿತ ಆತಂಕ ತಿಳಿಗೊಂಡಿದ್ದರೂ ಸಂಕಷ್ಟದ ಕಾಲ ಕಲಿಸಿದ ಪಾಠಗಳನ್ನು ನಾವು ಮರೆಯುವಂತಿಲ್ಲ. ಕೋವಿಡ್ ಕಾಲಘಟ್ಟ ನಮ್ಮ ಜೀವನವಿಧಾನವನ್ನೇ ಬದಲಿಸಿದೆ. ಸ್ವಚ್ಛತೆಯ ಕುರಿತಂತೆ ಎಂದೂ ಮರೆಯಬಾರದ ಪಾಠಗಳನ್ನು ಕಲಿಸಿಕೊಟ್ಟಿದೆ. ಕೊರೊನಾ ಅಥವಾ ಕೊರೊನಾದಂಥ ಅಪಾಯಕಾರಿ ಸೋಂಕು ಯಾವ ಕ್ಷಣದಲ್ಲಾದರೂ ಜಗತ್ತನ್ನು ಬಾಧಿಸಬಹುದು ಎನ್ನುವ ಎಚ್ಚರವನ್ನು ಮನದಟ್ಟು ಮಾಡಿಸಿದೆ. ಇದೆಲ್ಲಕ್ಕೂ ಮಿಗಿಲಾಗಿ, ವೈದ್ಯಕೀಯ ವ್ಯವಸ್ಥೆ ಮಗ್ಗುಲು ಬದಲಿಸುವ ಅನಿವಾರ್ಯವನ್ನು ಸೋಂಕಿನ ಅವಧಿ ಸೃಷ್ಟಿಸಿದೆ. ತುರ್ತು ಸಂದರ್ಭವನ್ನು ಎದುರಿಸಲು ವೈದ್ಯಕೀಯ ಸೇವಾಕ್ಷೇತ್ರವನ್ನು ಸಜ್ಜುಗೊಳಿಸುವ ಪ್ರಯತ್ನಗಳು ಭಾರತ ಸೇರಿದಂತೆ ವಿಶ್ವದೆಲ್ಲೆಡೆ ನಡೆದಿವೆ. ಅತ್ಯಂತ ಕಡಿಮೆ ಅವಧಿಯಲ್ಲಿ ಲಸಿಕೆಗಳನ್ನು ಅಭಿವೃದ್ಧಿಪಡಿಸಿದ ಸಾಧನೆ ಸಾಮಾನ್ಯವಾದುದಲ್ಲ. ಈ ಸಾಧನೆ, ವಿಜ್ಞಾನದ ಔನ್ನತ್ಯವನ್ನು ಹಾಗೂ ಮನುಷ್ಯನ ಸಂಕಲ್ಪಶಕ್ತಿಯನ್ನು ಸೂಚಿಸುವಂತಿದೆ. ಕೊರೊನಾ ಉಂಟುಮಾಡಿದ ಹಾನಿ, ತವಕತಲ್ಲಣಗಳ ಜೊತೆಗೆ ವೈಜ್ಞಾನಿಕ ಸಾಧನೆ ಹಾಗೂ ಮಾನವೀಯ ಸ್ಪಂದನದ ಕಥನಗಳೂ ಇತಿಹಾಸದಲ್ಲಿ ಉಳಿಯಲಿವೆ.

ದಿನದ ಟ್ವೀಟ್


ಹೀಗಿದೆ ವಾಸ್ತವ...



ಶಿಕ್ಷಣದ ಗಂಧಗಾಳಿ ಇಲ್ಲದ ರಾಜಕಾರಣಿಗಳು, ಅತ್ಯಂತ ಸುಶಿಕ್ಷಿತರು, ಪರಿಶ್ರಮಿಗಳು ಹಾಗೂ ಬುದ್ಧಿವಂತರಾದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಕೆಟ್ಟದಾಗಿ ನಡೆಸಿಕೊಳ್ಳುವುದು ದೇಶದಲ್ಲಿ ಅತ್ಯಂತ ಬೇಸರ ಮೂಡಿಸುವ ವಾಸ್ತವ ಸಂಗತಿಗಳಲ್ಲಿ ಒಂದು.

ಶ್ರುತಿ ಚತುರ್ವೇದಿ, ಉದ್ಯಮಿ

ಕಿಡಿನುಡಿ



'ದೆಹಲಿಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಯಾದ ಲೆಫ್ಟಿನೆಂಟ್ ಗವರ್ನರ್ ಅವರು ಸೇವೆಗಳಿಗೆ ಸಂಬಂಧಿಸಿದಂತೆ ಚುನಾಯಿತ ಸರ್ಕಾರ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿರಬೇಕು. ಸಚಿವ ಸಂಪುಟ ಸದಸ್ಯರ ಸಹಕಾರ ಹಾಗೂ ಸಲಹೆಯ ಮೇರೆಗೆ ಅವರು ನಿರ್ಧಾರ ತೆಗೆದುಕೊಳ್ಳಬೇಕು' ಎಂಬ ಸುಪ್ರೀಂ ಕೋರ್ಟ್ ತೀರ್ಪು ಗೊಂದಲರಹಿತವಾಗಿದೆ ಮತ್ತು ಸ್ಪಷ್ಟವಾಗಿದೆ. ಇದು, ಒಕ್ಕೂಟ ಸ್ವರೂಪವನ್ನು ಪುನರ್ ದೃಢೀಕರಿಸುವುದರ ಜೊತೆಗೆ ಚುನಾಯಿತರಲ್ಲದವರು ಅಧಿಕಾರ ಕಬಳಿಸುವುದಕ್ಕೆ ತಡೆಯೊಡ್ಡುತ್ತದೆ ಎಂದು ಭಾವಿಸುತ್ತೇನೆ.

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

25 ವರ್ಷಗಳ ಹಿಂದೆ

ಮಂಗಳವಾರ, 12-5-1998

- **ಮೂರು ಅಣು ಸಾಧನ ಯಶಸ್ವಿ ಪರೀಕ್ಷಾರ್ಥ ಸ್ಫೋಟ**

ನವದೆಹಲಿ, ಮೇ 11 (ಪಿಟಿಐ)– ಭಾರತ ಕೊನೆಗೂ ಅಣುರಾಷ್ಟ್ರವಾಗಿ ಇಂದು ಪರಿವರ್ತನೆಗೊಂಡಿತು. ರಾಜಸ್ಥಾನದ ಪೋಖಾರಣ್ಯದಲ್ಲಿ ಇಂದು ಮಧ್ಯಾಹ್ನ 3.45ಕ್ಕೆ ಮೂರು ಅಣು ಸಾಧನಗಳ ಪರೀಕ್ಷಾರ್ಥ ಸ್ಫೋಟವನ್ನು ಯಶಸ್ವಿಯಾಗಿ ನಡೆಸಿತು. ಇದರಲ್ಲಿ ಅತ್ಯಂತ ಪ್ರಬಲ ಜಲಜನಕ ಅಣು ಸಾಧನವೂ ಸೇರಿದೆ.

ತರಾತುರಿಯಿಂದ ತಮ್ಮ ಮನೆಯಲ್ಲಿ ಸಂಜೆ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, 'ಸ್ಫೋಟಗಳ ಪರೀಕ್ಷೆ ಮಧ್ಯಾಹ್ನ 3.45ಕ್ಕೆ ನಡೆಯಿತು' ಎಂದು ತಿಳಿಸಿದರು. ಭಾರತವು 24 ವರ್ಷಗಳ ದೀರ್ಘಾವಧಿ ನಂತರ ಇಂದು ಪುನಃ ಅಣು ಸಾಧನ ಸ್ಫೋಟ ಪರೀಕ್ಷೆ ನಡೆಸಿತು.

'ನಿರೀಕ್ಷಿತ ಪ್ರಮಾಣದಲ್ಲಿಯೇ ಸ್ಫೋಟದ ಫಲಿತಗಳು ಲಭಿಸಿರುವುದು ಅಧ್ಯಯನದಿಂದ ವ್ಯಕ್ತಪಟ್ಟಿದೆ. ಸ್ಫೋಟದ ಪರಿಣಾಮವಾಗಿ ವಾತಾವರಣಕ್ಕೆ ಅಣು ವಿಕಿರಣ ಬಿಡುಗಡೆಯಾಗಿಲ್ಲ' ಎಂದು ಪ್ರಧಾನಿ ಬಿಡುಗಡೆ ಮಾಡಿದ 10 ಸಾಲುಗಳ ಹೇಳಿಕೆ ತಿಳಿಸಿದೆ.

- **ಸಕ್ಕರೆ ಬಾಂಡ್ಸ್ ಮಾರಾಟ ಯೋಜನೆ ಜಾರಿಗೆ ನಿರ್ಧಾರ**

ಬೆಂಗಳೂರು, ಮೇ 11– ದುಃಸ್ಥಿತಿಯಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಹಣಕಾಸಿನ ನೆರವು ಒದಗಿಸುವ ಉದ್ದೇಶದಿಂದ ರಾಜ್ಯದಲ್ಲಿ 'ಸಕ್ಕರೆ ಬಾಂಡ್ಸ್' ಮಾರಾಟ ಯೋಜನೆಯನ್ನು ಎರಡು ತಿಂಗಳಲ್ಲಿ ಜಾರಿಗೆ ತರಲಿರುವುದಾಗಿ ಸಚಿವ ಉಮೇಶ್ ಕತ್ತಿ ಅವರು ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು. ಈ ಬಗ್ಗೆ ಯೋಜನೆ ಸಿದ್ಧಗೊಳಿಸಿ ಹಣಕಾಸು ಇಲಾಖೆಯ ಅನುಮತಿಗೆ ಕಳುಹಿಸಿಕೊಡಲಾಗಿದೆ ಎಂದು ಸಚಿವರು ಜನತಾ ದಳದ ಸತೀಶ್ ಜಾರಕಿಹೊಳಿ ಅವರ ಪ್ರಶ್ನೆಗೆ ಉತ್ತರಿಸಿದರು.

50 ವರ್ಷಗಳ ಹಿಂದೆ

ಶನಿವಾರ, 12-5-1973

- **ವರದಕ್ಷಿಣೆ ನಿರ್ಮೂಲನ ಮಸೂದೆ ಮಂಡನೆ**

ನವದೆಹಲಿ, ಮೇ 11– ವಿವಾಹದ ಉಡುಗೊರೆಗಳ ವೆಚ್ಚದ ಮೇಲೆ ನಿರ್ದಿಷ್ಟ ಮಿತಿ ಹಾಕುವುದರ ಮೂಲಕ ವರದಕ್ಷಿಣೆಯ ದುಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡುವ ಖಾಸಗಿ ಮಸೂದೆಯೊಂದನ್ನು ಇಂದು ರಾಜ್ಯಸಭೆಯಲ್ಲಿ ಮಂಡಿಸಲಾಯಿತು.


ಈ ಉದ್ದೇಶಕ್ಕಾಗಿ ವರದಕ್ಷಿಣೆ ನಿಷೇಧ ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಈ ಮಸೂದೆ ಅವಕಾಶ ನೀಡುತ್ತದೆ. ಈ ಖಾಸಗಿ ಮಸೂದೆಯನ್ನು ಕಾಂಗ್ರೆಸ್ ಸದಸ್ಯೆ ಶ್ರೀಮತಿ ಸೀತಾ ದೇವಿ ಅವರು ಮಂಡಿಸಿದರು. ವರದಕ್ಷಿಣೆಯೆಂಬ ದುಷ್ಟ ಪದ್ಧತಿಯನ್ನು ಹೋಗಲಾಡಿಸಲು ಈಗ ಇರುವ ಕಾನೂನು ಸಹಾಯಕವಾಗಿಲ್ಲವೆಂಬುದು ಅನುಭವ ವೇದ್ಯ ಎಂದೂ ಅವರು ನುಡಿದರು.

- **ಭಾರತದ ವಿರುದ್ಧ ವಿಶ್ವ ಕೋರ್ಟ್‌ನಲ್ಲಿ ಪಾಕಿಸ್ತಾನ ಮೊಕದ್ದಮೆ**

ದಿ ಹೇಗ್, ಮೇ 11– ಭಾರತ 1970ರ ಯುದ್ಧದಲ್ಲಿ ಕೈಸೆರೆ ಹಿಡಿದಿರುವ ಪಾಕಿಸ್ತಾನೀಯರನ್ನು, ನರಹತ್ಯೆ ಅಪರಾಧಕ್ಕಾಗಿ ವಿಚಾರಣೆಗೆ ಗುರಿಪಡಿಸಲು ಬಾಂಗ್ಲಾದೇಶಕ್ಕೆ ಒಪ್ಪಿಸಬೇಕೆಂಬ ಭಾರತದ ಆರೋಪಿತ ಉದ್ದೇಶದ ವಿರುದ್ಧ ಇಲ್ಲಿನ ವಿಶ್ವ ನ್ಯಾಯಾಲಯದಲ್ಲಿ ಪಾಕಿಸ್ತಾನ ಇಂದು ಮೊಕದ್ದಮೆ ಹೂಡಿತು.

ವಿಮಾನಯಾನ ಕಂಪನಿ ಪಾವತಿಸಬೇಕಿರುವ ಮೊತ್ತ ₹ 11,500 ಕೋಟಿ

ಕಣ್ಮರೆಯಾಗುವುದೇ ಗೋ ಏರ್?



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಈಚೆಗಷ್ಟೇ 'ಗೋ ಫಸ್ಟ್' ಎಂಬ ಹೊಸ ಹೆಸರು ಪಡೆದ 'ಗೋ ಏರ್' ವಿಮಾನಯಾನ ಕಂಪನಿಯನ್ನು ಆರಂಭಿಸಿದ್ದು ಉದ್ಯಮಿ ನುಸ್ಲಿ ವಾಡಿಯಾ. ಶ್ರೀಮಂತ, ಪಾರ್ಸಿ ಸಮುದಾಯದ ವಾಡಿಯಾ ಕುಟುಂಬದ ಈ ಕಂಪನಿಯು ಈಗ ದಿವಾಳಿ ಸಂಹಿತೆಯ ಅಡಿಯಲ್ಲಿ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ) ಅರ್ಜಿ ಸಲ್ಲಿಸಿದೆ. ಕಂಪನಿಯು ವಿವಿಧ ಹಣಕಾಸು ಸಂಸ್ಥೆಗಳು, ವರ್ತಕರು, ಟಿಕೆಟ್ ಕಾಯ್ದಿರಿಸಿದ್ದ ಪ್ರಯಾಣಿಕರು, ಲೀಸ್ ಆಧಾರದಲ್ಲಿ ವಿಮಾನ ಕೊಟ್ಟವರಿಗೆ ಪಾವತಿಸಬೇಕಿರುವ ಮೊತ್ತ ₹ 11,500 ಕೋಟಿಯಷ್ಟಿದೆ. ರಿಚರ್ಡ್ ಬ್ರಾನ್ಸನ್ ಆಡಿದ ವ್ಯಂಗ್ಯೋಕ್ತಿ 'ನೀವು ಲಕ್ಷಾಧೀಶರಾಗಬೇಕು ಎಂದಾದರೆ ವಿಮಾನಯಾನ ಉದ್ದಿಮೆಯಲ್ಲಿ ಕೋಟಿಗಟ್ಟಲೆ ಹಣ ಹೂಡಿಕೆ ಮಾಡಬೇಕು' ಎಂಬುದಕ್ಕೆ ಸರಿಹೊಂದುವ ಸ್ಥಿತಿಯಲ್ಲಿ ಗೋ ಫಸ್ಟ್ ಇದೆ.

ಹಿಂದೆ ಕಿಂಗ್‌ಫಿಷರ್ ಏರ್‌ಲೈನ್ಸ್, ನಂತರ ಜೆಟ್ ಏರ್‌ವೇಸ್, ಈಗ ಗೋ ಫಸ್ಟ್. ಈ ಕಂಪನಿಗಳು ಮುಳುಗುವುದನ್ನು ತಡೆಯುವುದು ಸಾಧ್ಯವೇ ಇಲ್ಲ ಎಂದು ಒಂದು ಹಂತದಲ್ಲಿ ಅನ್ನಿಸಿಬಿಟ್ಟಿತ್ತು. ಈ ಕಂಪನಿಗಳ ವಿಚಾರದಲ್ಲಿ ಸಮಾನ ಅಂಶವೊಂದು ಇದೆಯೇ?

ಜೆಆರ್‌ಡಿ ಟಾಟಾ ಅವರು ಹಿಂದೆ ಏರ್ ಇಂಡಿಯಾ ಕಂಪನಿಯನ್ನು ಮುನ್ನಡೆಸುತ್ತಿದ್ದರು. ಆ ಹೊತ್ತಿನಲ್ಲಿ ಲೈಸೆನ್ಸ್ ರಾಜ್ ವ್ಯವಸ್ಥೆ ಇತ್ತು. ವಿಮಾನಯಾನ ಕ್ಷೇತ್ರದಲ್ಲಿ ಏಕಸ್ವಾಮ್ಯ ಇತ್ತು. ಆಗ ಈ ಉದ್ಯಮದ ಹೆಸರು ಕೇಳಿದಾಗಲೆಲ್ಲ ವರ್ಣರಂಜಿತವಾದ ದೂರದ ನಗರಗಳು ಕಣ್ಣ ಮುಂದೆ ಬರುತ್ತಿದ್ದವು. ಏರ್ ಇಂಡಿಯಾ ವಿಮಾನಗಳಲ್ಲಿ ಮತ್ತೆ ಮತ್ತೆ ಪ್ರಯಾಣಿಸುವವರನ್ನು, 'ಯಶಸ್ವಿ ವ್ಯಕ್ತಿ' ಎಂದು ಕಾಣಲಾಗುತ್ತಿತ್ತು. ಗ್ಲಾಮರ್, ಶ್ರೀಮಂತಿಕೆ, ಅವ್ಯಕ್ತವಾದ ತಾಕತ್ತನ್ನು ಹೊಂದಿದ್ದ ವಿಶಿಷ್ಟ ಲೋಕವಾಗಿತ್ತು ಈ ಉದ್ಯಮ. ಇವೆಲ್ಲ ಇದ್ದದ್ದು ಜೆಆರ್‌ಡಿ ಟಾಟಾ ಅವರು ಏರ್ ಇಂಡಿಯಾ ಕಂಪನಿಯನ್ನು ಮುನ್ನಡೆಸುತ್ತಿದ್ದ ಹೊತ್ತಿನಲ್ಲಿ. ಟಾಟಾ ಅವರು ಅಲ್ಲಿನ ಹುದ್ದೆ ತೊರೆದ ನಂತರ, ಸರ್ಕಾರವು ಏರ್ ಇಂಡಿಯಾ ಕಂಪನಿಯನ್ನು ತನ್ನದಾಗಿಸಿಕೊಂಡ ನಂತರ ಪರಿಸ್ಥಿತಿ ಅಸ್ಥಿರವಾಯಿತು, ಕಂಪನಿಗೆ ವೃದ್ಧಾಪ್ಯ ಬಂದಂತಾಯಿತು. ಸಿಬ್ಬಂದಿ ಸಂಖ್ಯೆ ಅತಿಯಾಯಿತು, ಅತೃಪ್ತಿ ಹೆಚ್ಚಾಯಿತು. ಕಂಪನಿಯ ಸಾಲದ ಪ್ರಮಾಣವು ಗಗನಕ್ಕೆ ಏರಿತು.

1990ರ ದಶಕದ ಆರಂಭದಲ್ಲಿ ಅಂದಿನ ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರು ಜಾರಿಗೆ ತಂದ ಆರ್ಥಿಕ ಸುಧಾರಣೆಗಳ ನಂತರದಲ್ಲಿ ಹೊಸ ವಿಮಾನಯಾನ ಕಂಪನಿಗಳು ಗಗನಕ್ಕೆ ಜಿಗಿದವು. ಆದರೆ ಉಳಿದುಕೊಂಡಿದ್ದು ಜೆಟ್ ಏರ್‌ವೇಸ್ ಮತ್ತು ಸಹಾರಾ ಮಾತ್ರ. ಅದುವರೆಗೆ ಹೆಚ್ಚಿನವರಿಗೆ ಪರಿಚಯ ಇರದಿದ್ದ ಟ್ರಾವೆಲ್ ಏಜೆಂಟ್ ನರೇಶ್ ಗೋಯಲ್ ಅವರು ಜೆಟ್ ಏರ್‌ವೇಸ್ ಆರಂಭಿಸಿದರು. ಅವರಲ್ಲಿ ಅಪಾರ ಬುದ್ಧಿವಂತಿಕೆ ಇತ್ತು. ಅವರು ವಿಶ್ವದರ್ಜೆಯ ವಿಮಾನಯಾನ ಕಂಪನಿಯನ್ನು ಕಟ್ಟಿದರು. ಸಮಯಕ್ಕೆ ಸರಿಯಾಗಿ ಸೇವೆ, ವಿಮಾನದಲ್ಲಿ ಉತ್ತಮ ಒಳಾಂಗಣ ವ್ಯವಸ್ಥೆ, ಸಿಬ್ಬಂದಿಯಲ್ಲಿ ಇದ್ದ ವೃತ್ತಿಪರ ಧೋರಣೆಗಳ ವಿಚಾರದಲ್ಲಿ ಗೋಯಲ್ ಅವರ ಕಂಪನಿಯು ವಿಶ್ವದರ್ಜೆಯದ್ದಾಗಿತ್ತು. ಸಹಾರಾ ಕಂಪನಿಯ ಸ್ಪಂದನಶೀಲತೆ ಇಲ್ಲದ ಧೋರಣೆ, ಏರ್ ಇಂಡಿಯಾ ಕಂಪನಿಯು ಪ್ರಯಾಣಿಕರ ನಂಬಿಕೆ ಕಳೆದುಕೊಂಡಿದ್ದುದು ಹಾಗೂ ಗೋಯಲ್ ಅವರು ರಾಜಕಾರಣಿಗಳ ಜೊತೆ ಹೊಂದಿದ್ದ ಬಾಂಧವ್ಯದ ಕಾರಣದಿಂದಾಗಿ, ವಿಮಾನಯಾನ ಉದ್ಯಮದಲ್ಲಿ ಜೆಟ್ ಏರ್‌ವೇಸ್ ತನ್ನ ಸ್ಥಾನ ಗಟ್ಟಿ ಮಾಡಿಕೊಂಡಿತು. ಗೋಯಲ್ ಅವರು ಏಕಸ್ವಾಮ್ಯ ಸಾಧಿಸಿದ್ದರು. ಆದರೆ, ಸರ್ಕಾರಿ ಸ್ವಾಮ್ಯದ ವಿಮಾನ ನಿಲ್ದಾಣಗಳ ದುಃಸ್ಥಿತಿ ಹಾಗೂ ದುಬಾರಿ ಟಿಕೆಟ್ ದರಗಳ ಪರಿಣಾಮವಾಗಿ ವಿಮಾನಯಾನ ಉದ್ಯಮವು ಬೆಳೆಯಲಿಲ್ಲ. 2002ರ ಸುಮಾರಿಗೆ ದೇಶದ ಜನಸಂಖ್ಯೆಯಲ್ಲಿ ಶೇಕಡ 1ಕ್ಕಿಂತ ಕಡಿಮೆ ಜನ ಮಾತ್ರ ವಿಮಾನಯಾನದ ಖರ್ಚು ಭರಿಸುವ ಶಕ್ತಿ ಹೊಂದಿದ್ದರು.

2003ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದಲ್ಲಿ ಹೊಸ ಸುಧಾರಣಾ ಕ್ರಮಗಳು ಜಾರಿಗೆ ಬಂದ ನಂತರದಲ್ಲಿ ಇನ್ನಷ್ಟು ಹೊಸ ವಿಮಾನಯಾನ ಕಂಪನಿಗಳು ಆಕಾಶಕ್ಕೆ ಜಿಗಿದವು. ಏರ್ ಡೆಕ್ಕನ್ ಕಂಪನಿಯು ಸಾಕಾರಗೊಳಿಸಿದ ಕಡಿಮೆ ವೆಚ್ಚದ ವಿಮಾನ ಸೇವೆ, ಪ್ರಾದೇಶಿಕ ಪಟ್ಟಣಗಳಿಗೆ ವಿಮಾನ ಸಂಪರ್ಕದ ಕಾರಣದಿಂದಾಗಿ ಇನ್ನೊಂದಿಷ್ಟು ಕಂಪನಿಗಳು ಆರಂಭವಾದವು. ಸ್ಪೈಸ್ ಜೆಟ್, ಪ್ರೈಮ್ ಏರ್, ಗೋ ಏರ್, ಕಿಂಗ್‌ಫಿಷರ್, ಇಂಡಿಗೊ 2005–2006ರಲ್ಲಿ ಸೇವೆ ಆರಂಭಿಸಿದವು. ವಿಮಾನಯಾನ ಉದ್ಯಮದಲ್ಲಿ ವ್ಯಾಪಕ ಬದಲಾವಣೆಗಳನ್ನು ತಂದವು.

ವಿಜಯ್ ಮಲ್ಯ ಅವರ ಉದ್ಯಮವನ್ನು ಪರಿಶೀಲಿಸೋಣ. ಅವರು ವಿಮಾನಯಾನ ಉದ್ಯಮಕ್ಕೆ ಆಕರ್ಷಣೆ ತಂದುಕೊಟ್ಟರು. ತಮ್ಮ ಕಂಪನಿಯ ಗಗನಸಖಿಯರನ್ನು ತಾವೇ ಆಯ್ಕೆ ಮಾಡಿದರು. ಅವರ ಉಡುಪಿನ ವಿನ್ಯಾಸವನ್ನು ತೀರ್ಮಾನಿಸಿದರು. ಗಗನಸಖಿಯರ ಕೇಶವಿನ್ಯಾಸದಲ್ಲಿ ಆಸಕ್ತಿ ತೋರಿಸಿದರು. ಕಿಂಗ್‌ಫಿಷರ್ ವಿಮಾನಯಾನ ಕಂಪನಿಯ ಬ್ರ್ಯಾಂಡ್ ರಾಯಭಾರಿ ತಾವೇ ಆಗಿದ್ದರು. ಮದ್ಯದ ಮಾರುಕಟ್ಟೆಯಲ್ಲಿ ತಮಗೆ ಶೇಕಡ 55ರಷ್ಟು ಪಾಲು ಇದೆ, ತಮ್ಮ ಮದ್ಯದ ಒರತೆ ಯಾವತ್ತಿಗೂ ಬತ್ತುವುದಿಲ್ಲವಾದ ಕಾರಣ, ವಿಮಾನಯಾನ ಕಂಪನಿಯ ವೆಚ್ಚ ತಮಗೆ ಸಣ್ಣದು ಎಂದು ಮಲ್ಯ ಹೇಳಿಕೊಂಡಿದ್ದರು. ಏರ್ ಡೆಕ್ಕನ್ ಕಂಪನಿಯಲ್ಲಿ ಅವರು ಹೂಡಿಕೆ ಮಾಡಿದ್ದರು. ಕಂಪನಿಯ ವಹಿವಾಟಿನ ಮಾದರಿಯನ್ನು ಅವರು ಬದಲಾಯಿಸಲು ಮುಂದಾದಾಗ ನಾನು ಅದನ್ನು ವಿರೋಧಿಸಿದೆ. 'ಏರ್ ಡೆಕ್ಕನ್ ಕಂಪನಿ ಸೆಕ್ಸಿ ಆಗಿರಬೇಕು' ಎಂದು ನನಗೆ ಉತ್ತರಿಸಿದರು. 'ನಾವು ಜಾದೂಗಾರರಿದ್ದಂತೆ. ₹ 500 ಖರ್ಚು ಮಾಡಿ, ಅದಕ್ಕೆ ₹ 5,000 ಶುಲ್ಕ ಪಡೆಯುತ್ತೇವೆ' ಎಂದಿದ್ದರು.



ಆದರೆ ಪ್ರಯಾಣಿಕರು ಮಲ್ಯ ಅವರ ಕಂಪನಿಯ ಸೇವೆಗಳನ್ನು ಬಹಳವಾಗಿ ಮೆಚ್ಚಿದರೂ ಹೆಚ್ಚು ಶುಲ್ಕ ನೀಡಲು ತಯಾರಿರಲಿಲ್ಲ. ಅವರು ಬೇರೆ ಕಂಪನಿಗಳ ಕಡೆ ನಡೆದರು. ಕಿಂಗ್‌ಫಿಷರ್ ಕಂಪನಿಯು ಭಾರಿ ಪ್ರಮಾಣದಲ್ಲಿ ಹಣ ಕಳೆದುಕೊಳ್ಳಲು ಆರಂಭಿಸಿತು. ಮಲ್ಯ ಅವರು ಕಂಪನಿಯ ಸಿಇಒ ಆಗಿದ್ದರು. ಆದರೆ ಬೇರೆ ಬೇರೆ– ಮದ್ಯ, ಐಪಿಎಲ್, ಫಾರ್ಮುಲಾ ಒನ್, ರಾಜಕಾರಣ, ಅದ್ದೂರಿ ಜೀವನಶೈಲಿ– ವಹಿವಾಟುಗಳಲ್ಲಿ ತೊಡಗಿಸಿಕೊಂಡಿದ್ದರು. ಅವರ ವಿಮಾನಯಾನ ಕಂಪನಿಯು ದಿವಾಳಿಯಾಯಿತು.

ಇತ್ತ ಜೆಟ್ ಏರ್‌ವೇಸ್ ಕೂಡ ಸಮಸ್ಯೆಯ ಸುಳಿಗೆ ಸಿಲುಕಿತು. ಕಂಪನಿಯನ್ನು ಗೋಯಲ್ ಅವರ ಕುಟುಂಬ ಹೆಚ್ಚಾಗಿ ನಿಯಂತ್ರಿಸುತ್ತಿತ್ತು. ಆಡಳಿತದಲ್ಲಿ ಪದೇ ಪದೇ ಬದಲಾವಣೆ, ಹಳೆಯ ಪದ್ಧತಿಗೇ ಅಂಟಿಕೊಂಡಿದ್ದರ ಪರಿಣಾಮವಾಗಿ ಕಂಪನಿಯು ಬಹಳ ವೇಗವಾಗಿ ಹಣ ಕಳೆದುಕೊಂಡಿತು. ಕೊನೆಯಲ್ಲಿ ಕಂಪನಿಯು ಕಾರ್ಯಾಚರಣೆ ನಿಲ್ಲಿಸಿತು. ವಾಡಿಯಾ ಕುಟುಂಬಕ್ಕೆ ಗೋ ಏರ್ ಹೊರೆ ಆಗಿರಲಿಲ್ಲ. ಮಗ ಜೆ ವಾಡಿಯಾ ವಿಮಾನಯಾನ ಕಂಪನಿ ಆರಂಭಿಸುವುದಾಗಿ ಹೇಳಿದಾಗ, ನುಸ್ಲಿ ವಾಡಿಯಾ ಒಪ್ಪಿದ್ದರು. ಕಾಲಾನಂತರದಲ್ಲಿ, ಕುಟುಂಬದಲ್ಲಿನ ಭಿನ್ನಾಭಿಪ್ರಾಯದ ಕಾರಣದಿಂದಾಗಿ ಜೆ ಅವರು ಕಂಪನಿಯ ಆಡಳಿತದಿಂದ ಹೊರನಡೆದರು. ವೃತ್ತಿಪರ ಹಾಗೂ ಸ್ವಾಯತ್ತೆ ಇರುವ ಸಿಇಒ ಇಲ್ಲದ ಕಾರಣ, ಕಂಪನಿಯ ಸಮಸ್ಯೆಗಳು ಹೆಚ್ಚಿದವು. ಈಗ ಈ ಕಂಪನಿಯು ಈ ಸ್ಥಿತಿಗೆ ಬಂದಿದೆ. ಕಂಪನಿಯಲ್ಲಿ ಎರಡು ವರ್ಷಗಳಿಂದಲೂ ಕೆಟ್ಟ ಸೂಚನೆಗಳು ಇದ್ದವು. ಆದರೆ, ಯಶಸ್ಸು ಮತ್ತು ಅಹಂಕಾರ ಒಟ್ಟಾದಾಗ, ಸ್ಪಷ್ಟವಾಗಿರುವ ವಿಚಾರಗಳೂ ಕಾಣದಂತೆ ಆಗುತ್ತವೆ.

ವಿಮಾನಯಾನ ಉದ್ದಿಮೆಯಲ್ಲಿ ಪರಿಸ್ಥಿತಿಯು ಬಹಳ ವೇಗವಾಗಿ ಬದಲಾಗಬಹುದು. ಏರ್ ಡೆಕ್ಕನ್ ಕಂಪನಿ ಹಣ ಕಳೆದುಕೊಳ್ಳುತ್ತಿದ್ದಾಗ ನಾನು, 'ವಿಮಾನಕ್ಕಿಂತಲೂ ಚೆಕ್‌ಗಳು ಬಹಳ ವೇಗವಾಗಿ ಹಾರುತ್ತಿವೆ' ಎಂದು ಹೇಳಿದ್ದೆ. ತಮ್ಮ ಉದ್ದಿಮೆಯಲ್ಲಿ ಹೆಚ್ಚಿನ ಷೇರುಪಾಲು ಹೊಂದಿರುವ ಉದ್ಯಮಿಗಳು, ಕಂಪನಿಗೆ ಹೊರಗಿನಿಂದ ಹೆಚ್ಚಿನ ಷೇರು ಬಂಡವಾಳ ತರಲು ಹಿಂದೇಟು ಹಾಕುತ್ತಾರೆ. ನಿಯಂತ್ರಣ ಕಳೆದುಕೊಳ್ಳುವ ಭೀತಿಯು ಅವರಿಗೆ ಅಡ್ಡಿಯಾಗುತ್ತದೆ. ಆದರೆ ಇದು ಕಂಪನಿಯ ದೃಷ್ಟಿಯಿಂದ ಮಾರಣಾಂತಿಕ ತಪ್ಪು.

ವಿಮಾನಯಾನ ಕಂಪನಿಯನ್ನು ಮುನ್ನಡೆಸುವುದು ಬಹಳ ರೋಮಾಂಚಕ. ಅಧಿಕಾರದಲ್ಲಿ ಇರುವ ವ್ಯಕ್ತಿಗಳು ಉದ್ಯಮಿಗಳನ್ನು ಎಡತಾಕುತ್ತಾರೆ. ಯಾವ ಶ್ರೀಮಂತ ಈ ಆಕರ್ಷಣೆಗೆ ಈಡಾಗದೇ ಇರುತ್ತಾನೆ? ಆಕರ್ಷಣೆಯ ಕಾರಣದಿಂದಾಗಿ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಿ ಅದನ್ನು ಲಕ್ಷಗಳ ಮಟ್ಟಕ್ಕೆ ತಂದುಕೊಳ್ಳುತ್ತಾನೆ. ಗೋ ಫಸ್ಟ್ ಕಂಪನಿ ಹಣ ಕಳೆದುಕೊಂಡಿದೆ. ಈಗ ಎನ್‌ಸಿಎಲ್‌ಟಿ, ಈ ಕಂಪನಿಯನ್ನು ಉಳಿಸಲು ಮಿಂಚಿನ ವೇಗದಲ್ಲಿ ಕ್ರಮ ಕೈಗೊಳ್ಳಬೇಕಿದೆ.

ಲೇಖಕ: ಏರ್ ಡೆಕ್ಕನ್ ಕಂಪನಿಯ ಸಂಸ್ಥಾಪಕ

ಚುರುಮುರಿ



ಬದುಕೋ ದಾರಿ!

• ಬಿ.ಎನ್.ಮಲ್ಲೇಶ್

'ಲೇ ಗುಡ್ಡೆ, ಮೊನ್ನೆ ವೋಟಿನ ದಿನ ಸಂಜೆತಂಕ ವೋಟ್ ಹಾಕ್ದೆ ಖಾಲಿ ಬೆರಳು ತೋರಿಸ್ಕಂಡು ಓಡಾಡ್ತಿದ್ಯಂತಲ್ಲಲೆ ಯಾಕೆ?' ದುಬ್ಬೀರ ಕೇಳಿದ.

'ಅದಾ? ಸಂಜೆತಂಕ ಡಿಮ್ಯಾಂಡ್ ಇರ್ಲಿ ಅಂತ ಅಷ್ಟೆ, ವೋಟ್ ಹಾಕಿಬಿಟ್ರೆ ಆಮೇಲೆ ಯಾರೂ ಕ್ಯಾರೆ ಅನ್ನಲ್ವಲ್ಲ ಅದ್ಕೆ..'

'ಅದೆಲ್ಲ ಬುಲ್ಡಿ ದುಬ್ಬೀರ, ರೊಕ್ಕಕ್ಕೆ ಡಿಮ್ಯಾಂಡ್ ಅಷ್ಟೆ, ಯಾರಾದ್ರೂ ಇನ್ನೊಂದೀಟು ರೊಕ್ಕ ಕೊಡ್ತಾರೇನೋ ಅಂತ ಹಂಗೆ ಓಡಾಡ್ತಿದ್ದ, ಆದ್ರೆ ಯಾರೂ ಕ್ಯಾರೆ ಅನ್ಲಿಲ್ಲ..' ಕೊಟ್ರೇಶಿ ಕಿಸಕ್ಕೆಂದ.

'ಮತ್ತೆ ವೋಟು ಹಾಕ್ಲಿಲ್ವ?'

'ಲಾಸ್ಟ್ ಮೂಮೆಂಟ್‌ಗೆ ವೋಟ್ ಹಾಕಾಕೆ ಹೋದ್ನಂತೆ, ಅಷ್ಟರಲ್ಲಿ ಇವನ ವೋಟ್ನ ಬೇರೆ ಯಾರೋ ಹಾಕಿಬಿಟ್ಟಿದ್ರಂತೆ..!'

'ಹೊಗ್ಗಾ ನಿನ್ನ, ಹೌದಾ? ಲೇ ಗುಡ್ಡೆ, ನಿಂಗೆ ತೀರ ಈ ನಮೂನಿ ಆಗಬಾರ್ದಿತ್ತು..' ದುಬ್ಬೀರನಿಗೂ ನಗು.

'ಇನ್ನೊಂದ್ ಗೊತ್ತಾ? ಒಂದ್ಸಲ ಮೂರು ಜನ ಕ್ಯಾಂಡಿಡೇಟ್‌ಗಳತ್ರಾನೂ ಗುಂಡು ಇಸ್ಕಂಡು ಟೈಟಾಗಿ, ಯಾರಿಗೂ ವೋಟ್ ಹಾಕದೆ ಮನೇಲೇ ಬಿದ್ಕಂಡಿದ್ನಂತೆ..' ತೆಪರೇಸಿ ಹೇಳಿದ.

'ಅಯ್ಯೋ ಗುಡ್ಡೆ ಕತಿ ಬಾಳದಾವು, ಹೋದ ಎಲೆಕ್ಷನ್‌ನಲ್ಲಿ ಒಬ್ಬ ಕ್ಯಾಂಡಿಡೇಟ್ ಪರ ಗುಡ್ಡೆ ಬಾಳ ಪ್ರಚಾರ ಮಾಡಿ ಅವನೇ ಗೆಲ್ತಾನೆ ಅಂತ ಬೆಟ್ ಕಟ್ಟಿದ್ನಂತೆ..'

'ಸರಿ, ಆಮೇಲೆ?'

'ಕೌಂಟಿಂಗ್ ದಿನ ದೊಡ್ಡ ಹಾರ ಹಿಡ್ಕಂಡು ಹಾಕಾಕೆ ಹೋಗಿದ್ನಂತೆ. ಆದ್ರೆ ಬ್ಯಾಡ್ ಲಕ್, ಇವ್ನ ಕ್ಯಾಂಡಿಡೇಟು ಸೋತು ಹೋದ್ನಂತೆ..'

'ಅಲೆ ಇವ್ನ, ಮತ್ತೆ ಹಾರ?'

'ಅದೇ ಮಜಾ... ಅದೇ ಹಾರಾನ ಇವ್ನು ಗೆದ್ದ ಕ್ಯಾಂಡಿಡೇಟ್‌ಗೆ ಹಾಕಿ, ನಾನು ನಿಮಗೇ ಪ್ರಚಾರ ಮಾಡಿದ್ದು, ನಿಮ್ ಪರಾನೇ ಬೆಟ್ ಕಟ್ಟಿದ್ದು ಅಂತ ರೀಲ್ ಬಿಟ್ಟು, ಅವರ ಜತಿ ಫೋಟೊ ಹೊಡೆಸ್ಕಂಡ್ನಂತೆ, ಆಮೇಲೆ ಅಲ್ಲಿ ಕಳಕಂಡಿದ್ದ ಬೆಟ್ಟಿಂಗ್ ರೊಕ್ಕನ ಇಲ್ಲಿ ಪೀಕಿಸಿದ್ನಂತೆ..'

'ಹೌದಾ? ಎಲಾ ಪಾಕಡ..' ಎಂದ ತೆಪರೇಸಿ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಶುಶ್ರೂಷೆ: ಬೇಕು ಸಹನೆ, ಸ್ಪಂದನೆ

ಶುಶ್ರೂಷಕರು ಬರೀ ಚಿಕಿತ್ಸೆ ಕೊಡುವುದಷ್ಟೇ ಅಲ್ಲ, ರೋಗಿಯ ಇತರ ಸಮಸ್ಯೆಗಳನ್ನೂ ಆಲಿಸುವ ಕಿವಿಯಾಗಬೇಕು


• ಡಾ. ವಿನಯ ಶ್ರೀನಿವಾಸ್

ಅದೊಂದು ಹೆರಿಗೆ ಆಸ್ಪತ್ರೆ. ನಾನು ಅಲ್ಲಿ ಸಹಾಯಕ ವೈದ್ಯಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಅಲ್ಲಿನ ಸ್ತ್ರೀರೋಗ ತಜ್ಞೆಯದ್ದು ಬಿಡುವಿಲ್ಲದ ದಿನಚರಿ. ದಿನವೊಂದರಲ್ಲಿ ಆಕೆ ಎರಡು ಮೂರು ಹೆರಿಗೆ, ಶಸ್ತ್ರಚಿಕಿತ್ಸೆಗಳಷ್ಟೇ ಅಲ್ಲದೆ ಹೊರರೋಗಿಗಳೊಂದಿಗೆ ಸಮಾಲೋಚನೆ, ಒಳರೋಗಿಗಳ ಬಗ್ಗೆ ಕಾಳಜಿ ಎಲ್ಲವನ್ನೂ ಬಹಳ ಕ್ಷಮತೆಯಿಂದ ನಿರ್ವಹಿಸುತ್ತಿದ್ದರು. ನಾನು ಒಮ್ಮೆ ಅಚ್ಚರಿಯಿಂದ ಅವರನ್ನು 'ಮೇಡಂ, ಎಲ್ಲವನ್ನೂ ಹೇಗೆ ಒಬ್ಬರೇ ಎಷ್ಟು ಪರಿಪೂರ್ಣವಾಗಿ ಮತ್ತು ಅಚ್ಚುಕಟ್ಟಾಗಿ ನಿಭಾಯಿಸುತ್ತೀರಿ?' ಎಂದು ಕೇಳಿದ್ದೆ. ಅದಕ್ಕೆ ಆಕೆ 'ಅದರ ಸಂಪೂರ್ಣ ಕೀರ್ತಿ ನನ್ನ ಶುಶ್ರೂಷಕರಿಗೆ ಸಲ್ಲಬೇಕು. ಅವರ ಸಮಯಪ್ರಜ್ಞೆ, ಕರ್ತವ್ಯಪರತೆ, ಅಂದರೆ ರೋಗಿಗಳನ್ನು ಪ್ರತಿ ಹಂತದಲ್ಲಿ ಗಮನಿಸಿ, ಸರಿಯಾದ ಕ್ಷಣದಲ್ಲಿ ನನಗೆ ಕರೆ ಕಳಿಸುವುದು, ನಾನು ಸೂಚಿಸಿದ ಎಲ್ಲ ಚಿಕಿತ್ಸೆಗಳನ್ನು ಸಮರ್ಪಕವಾಗಿ ಕೊಡುವಂತಹ ಕೆಲಸಗಳನ್ನು ಯಾವುದೇ ಲೋಪವಿಲ್ಲದೆ ನಿರ್ವಹಿಸುತ್ತಿರುವುದರಿಂದಲೇ ಇದು ಸಾಧ್ಯವಾಗಿದೆ' ಎಂದಿದ್ದರು.

ಆ ವೈದ್ಯೆಯ ಅಂದಿನ ಮಾತುಗಳು ಎಂದೆಂದಿಗೂ ಪ್ರಸ್ತುತ. ಆರೋಗ್ಯವಲಯದಲ್ಲಿ ವೈದ್ಯರಷ್ಟೇ ಮಹತ್ತರವಾದ ಜವಾಬ್ದಾರಿಯನ್ನು ನಿರ್ವಹಿಸುವವರು ಶುಶ್ರೂಷಕರು. ವೈದ್ಯರು ರೋಗಿಯ ತಪಾಸಣೆ ಮಾಡಿ, ಚಿಕಿತ್ಸೆಯನ್ನು ಸೂಚಿಸಿ ತೆರಳುತ್ತಾರೆ. ಆದರೆ ಆ ಚಿಕಿತ್ಸಾ ಪ್ರಕ್ರಿಯೆಯನ್ನು ಸಮರ್ಪಕವಾಗಿ ಕಾರ್ಯಗತಗೊಳಿಸುವವರು ಮತ್ತು ಅಲ್ಲಿ ಎದುರಾಗುವ ಎಲ್ಲ ಬಗೆಯ ಪ್ರಾಯೋಗಿಕ ಎಡರುತೊಡರುಗಳನ್ನು ಸಂಭಾಳಿಸುವವರು ಶುಶ್ರೂಷಕರು. ಹಾಗಾಗಿಯೇ ಯಾವುದೇ ಆಸ್ಪತ್ರೆಯಲ್ಲಿ ರೋಗಿಗಳಿಗೆ ಗರಿಷ್ಠ ಮಟ್ಟದ ಆರೈಕೆ ಲಭಿಸಬೇಕೆಂದರೆ ಅಲ್ಲಿ ಶುಶ್ರೂಷಕರ ಉತ್ತಮ ತಂಡವೊಂದು ಇರಲೇಬೇಕು. ಇದನ್ನು ಮನಗಂಡ ರಾಷ್ಟ್ರೀಯ ಆಸ್ಪತ್ರೆಗಳ ಮಾನ್ಯತಾ ಮಂಡಳಿ, ಉತ್ತಮ ಹಾಗೂ ಗುಣಮಟ್ಟದ ಆರೈಕೆಗಾಗಿ ಆಸ್ಪತ್ರೆಯ ಹಾಸಿಗೆ ಸಂಖ್ಯೆಯ ಆಧಾರದ ಮೇಲೆ ಇಂತಿಷ್ಟೇ ಶುಶ್ರೂಷಕರು ಇರಬೇಕೆಂಬ ನಿಯಮವನ್ನೂ ಹಾಕಿದೆ.

ರೋಗಿಗಳ ಆರೈಕೆ ಮಾಡುವ ಈ ಕಾಯಕಕ್ಕೆ ವ್ಯಾಸಂಗದ ರೂಪು ಕೊಟ್ಟು ಆಧುನಿಕ ಶುಶ್ರೂಷಾ ಶಿಕ್ಷಣವನ್ನು ಸಂಸ್ಥಾಪಿಸಿದ ಕೀರ್ತಿ ಬ್ರಿಟಿಷ್ ಶುಶ್ರೂಷಕಿ ಫ್ಲಾರೆನ್ಸ್ ನೈಟಿಂಗೇಲ್ ಅವರಿಗೆ ಸಲ್ಲಬೇಕು. ಈಕೆ 1853ರಿಂದ 1856ರವರೆಗೆ ನಡೆದ ರಷ್ಯಾದ ಕ್ರಿಮಿಯನ್ ಯುದ್ಧದಲ್ಲಿ ಗಾಯಗೊಂಡ ಸೈನಿಕರ ಆರೈಕೆಗೆಂದು ನಿಯೋಜಿತರಾದವರು. ಕರ್ತವ್ಯಪರತೆ, ಸಮರ್ಪಣಾ ಮನೋಭಾವ ಮತ್ತು ಪರಿಶ್ರಮದಿಂದಾಗಿ ಸಹಸ್ರಾರು ಗಾಯಾಳುಗಳಿಗೆ ಮರುಜೀವ ಕೊಟ್ಟರು. ಆಕೆಯ ಅವಿರತ ಪರಿಶ್ರಮದಿಂದಾಗಿ, ಲಂಡನ್ನಿನ ಸೇಂಟ್ ಥಾಮಸ್ ಆಸ್ಪತ್ರೆಗೆ ಹೊಂದಿಕೊಂಡಂತೆ ಮೊತ್ತಮೊದಲ ನೈಟಿಂಗೇಲ್ ಶುಶ್ರೂಷಕರ ಶಾಲೆ ಆರಂಭವಾಯಿತು. ಅಲ್ಲಿ ಮೊದಲ ಬಾರಿಗೆ, ವೈಜ್ಞಾನಿಕ ವಿಧಾನಗಳನ್ನು ಬಳಸಿ ರೋಗಿಯ ಆರೈಕೆ ಮಾಡುವ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡಲಾಯಿತು. ಶುಶ್ರೂಷಾ ಕ್ಷೇತ್ರದಲ್ಲಿ ಇದೊಂದು ಮಹತ್ತರವಾದ ಮೈಲುಗಲ್ಲು. ಆಕೆಯ ಗೌರವಾರ್ಥ ಆಕೆಯ ಜನ್ಮದಿನವಾದ ಮೇ 12ರಂದು ಅಂತರರಾಷ್ಟ್ರೀಯ ಶುಶ್ರೂಷಕರ ದಿನವನ್ನು ಆಚರಿಸಲಾಗುತ್ತದೆ.

ಈ ದಿನಗಳಲ್ಲಿ ನರ್ಸಿಂಗ್ ವ್ಯಾಸಂಗವನ್ನು ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ. ಅಪಾರ ಉದ್ಯೋಗಾವಕಾಶ, ಆರ್ಥಿಕ ಸ್ವಾವಲಂಬನೆ, ಹೊರದೇಶಗಳಲ್ಲಿ ಬೇಡಿಕೆಯಂತಹ ಕಾರಣಗಳಿಗಾಗಿ ವಿದ್ಯಾರ್ಥಿಗಳು ಈ ವ್ಯಾಸಂಗವನ್ನು ಇಷ್ಟಪಡುತ್ತಿದ್ದಾರೆ. ಹಿಂದೆ ಬಹುತೇಕ ಕೇರಳದ ಹೆಣ್ಣುಮಕ್ಕಳಿಗಷ್ಟೇ ಸೀಮಿತವಾಗಿದ್ದ ನರ್ಸಿಂಗ್ ಶಿಕ್ಷಣವನ್ನು ಪಡೆಯಲು ಈಗ ಎಲ್ಲ ರಾಜ್ಯಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಬೇಡಿಕೆ ಹೆಚ್ಚಾದಂತೆ ನರ್ಸಿಂಗ್ ಶಾಲೆ ಮತ್ತು ಕಾಲೇಜುಗಳೂ ಎಲ್ಲೆಂದರಲ್ಲಿ ತಲೆ ಎತ್ತುತ್ತಿವೆ. ಗುಣಮಟ್ಟದ ಶಿಕ್ಷಣವನ್ನು ಕೊಡಬೇಕಾದರೆ ಈ ಕಾಲೇಜುಗಳು ಸುಸಜ್ಜಿತ ಆಸ್ಪತ್ರೆಗಳೊಂದಿಗೆ ಹೊಂದಿಕೊಂಡಿರುವುದು ಬಹಳ ಮುಖ್ಯ. ಏಕೆಂದರೆ ನರ್ಸಿಂಗ್ ಶಿಕ್ಷಣದಲ್ಲಿ ಪ್ರಾಯೋಗಿಕ ಕಲಿಕೆಗೆ ಹೆಚ್ಚು ಮಹತ್ವ. ವಿದ್ಯಾರ್ಥಿಗಳಿಗೆ ರೋಗಿಯ ಆರೈಕೆಯ ವಿವಿಧ ಆಯಾಮಗಳಲ್ಲಿ ಅನುಭವ ಸಿಗಬೇಕು. ಆಗ ಮಾತ್ರ ಉತ್ತಮ ಗುಣಮಟ್ಟದ ಕಲಿಕೆ ಸಾಧ್ಯ ಹಾಗೂ ಅಂತಹ ಶುಶ್ರೂಷಕರಿಂದ ಮಾತ್ರ ರೋಗಿಯ ಪರಿಪೂರ್ಣ ಆರೈಕೆ ಸಾಧ್ಯ.



ಈ ವೃತ್ತಿ ಇತರ ವೃತ್ತಿಗಳಂತಲ್ಲ, ಭಿನ್ನವಾದದ್ದು ಎನ್ನುವ ಪರಿಕಲ್ಪನೆ ವಿದ್ಯಾರ್ಥಿಗಳಿಗೆ ಇರಬೇಕು. ಯಾವುದೋ ಕಚೇರಿಯಲ್ಲಿ ಕುಳಿತು ಒಂದಿಷ್ಟು ಕಡತಗಳನ್ನು ಅವಲೋಕಿಸುವಂತಹ ಯಾಂತ್ರಿಕ ಉದ್ಯೋಗ ಇದಲ್ಲ. ಅಲ್ಲದೆ, ಒಮ್ಮೆ ತಪ್ಪಾದರೆ ಸರಿಪಡಿಸುವ ಅವಕಾಶಗಳಿವೆ ಎನ್ನುವ ನೌಕರಿಯೂ ಇದಲ್ಲ. ಸೇವಾ ಮತ್ತು ಸಮರ್ಪಣಾ ಮನೋಭಾವವನ್ನು ಅಪೇಕ್ಷಿಸುವ ವೃತ್ತಿ ಇದು. ಇಲ್ಲಿ ಮತ್ತೊಂದು ಜೀವದೊಂದಿಗೆ ಸ್ಪಂದಿಸಬೇಕಾದ ಅಗತ್ಯ ಇದೆ. ಈ ಕ್ಷೇತ್ರದಲ್ಲಿ ಕಾರ್ಯವನ್ನು ನಿರ್ವಹಿಸುವವರಿಗೆ ಸಹನೆ, ಸಮಾಧಾನ ಬಹು ಮುಖ್ಯ.

ಈ ವೃತ್ತಿಗೆ ಇಳಿದ ಎಲ್ಲರೂ, ಬರೀ ಚಿಕಿತ್ಸೆ ಕೊಡುವುದಷ್ಟೇ ಅಲ್ಲದೆ, ರೋಗಿಯ ಇತರ ಸಮಸ್ಯೆಗಳನ್ನೂ ಆಲಿಸುವ ಕಿವಿಯಾಗಬೇಕು. ಮುಖ್ಯವಾಗಿ ಒಳ್ಳೆಯ ಮನಸ್ಸಿನಿಂದ ಕರ್ತವ್ಯ ಮಾಡಬೇಕು. ಕರ್ತವ್ಯದ ಸಮಯದಲ್ಲಿದ್ದಾಗ ಮೊಬೈಲ್‌ನಲ್ಲಿ ಕಾಡುಹರಟೆ, ಅನಗತ್ಯ ವಿಡಿಯೊ ವೀಕ್ಷಣೆಯಂತಹ ಚಟುವಟಿಕೆಗಳನ್ನು ಆದಷ್ಟು ಕಡಿಮೆ ಮಾಡಬೇಕು. ರೋಗಿಗಳ ಸಂಬಂಧಿಕರ ಕರೆಗೆ ತಕ್ಷಣ ಸ್ಪಂದಿಸಬೇಕು. ಎಷ್ಟೋ ಬಾರಿ ಶುಶ್ರೂಷಕರ ಒಳ್ಳೆಯ ಮಾತುಗಳೇ ರೋಗಿಯ ಕಾಯಿಲೆಯನ್ನು ಅರ್ಧ ಮಟ್ಟಿಗೆ ಗುಣಪಡಿಸಬಲ್ಲವು. ರೋಗಿಗಳೊಡನೆ ಸಕಾರಾತ್ಮಕವಾಗಿ ಮಾತನಾಡುತ್ತಾ ಅವರು ಶೀಘ್ರ ಗುಣಮುಖರಾಗುವುದಕ್ಕೆ ನೆರವಾಗಬೇಕು. ಇವೆಲ್ಲವನ್ನೂ ಅಳವಡಿಸಿಕೊಂಡಾಗ ಮಾತ್ರ ಈ ವೃತ್ತಿ ಸಫಲವಾದಂತೆ.

ವಾಚಕರ ವಾಣಿ

ಮತದಾನ, ಮತಬೇಟೆ ಪದ ಬಳಕೆ ಸರಿಯೇ?

ಇಂಗ್ಲಿಷ್‌ನಲ್ಲಿ 'ವೋಟ್' ಎನ್ನುವ ಪದಕ್ಕೆ ಕನ್ನಡದಲ್ಲಿ ಮತದಾನ ಎನ್ನುವ ಪರಿಪಾಟ ಇದೆ. ಮತವನ್ನು ದಾನ ಎನ್ನುವುದಾದರೆ, ದಾನ ನೀಡುವುದು ಕಡ್ಡಾಯವಲ್ಲ, ಅದನ್ನು ನೀಡಬಹುದು ಅಥವಾ ಬಿಡಬಹುದು. ಆದರೆ ಮತ ಚಲಾಯಿಸಬೇಕಾದದ್ದು ನಮ್ಮೆಲ್ಲರ ಹಕ್ಕು ಮತ್ತು ಕರ್ತವ್ಯ. ಹಕ್ಕನ್ನು ಕೇಳುವ ನಾವು ಕರ್ತವ್ಯದಿಂದ ವಿಮುಖರಾಗಬಾರದಲ್ಲವೇ? ಏಕೆಂದರೆ, ಐದು ವರ್ಷಗಳ ಕಾಲ ಆಡಳಿತ ನಡೆಸುವವರನ್ನು ಆರಿಸುವ ಗುರುತರ ಜವಾಬ್ದಾರಿ ನಮ್ಮೆಲ್ಲರದ್ದಾಗಿರುವಾಗ, ಮತವನ್ನು ದಾನ ಎಂದುಕೊಂಡು ನಿರ್ಲಕ್ಷಿಸಿ ಸುಮ್ಮನೆ ಮನೆಯಲ್ಲಿ ಕುಳಿತರೆ ಪ್ರಜಾಪ್ರಭುತ್ವಕ್ಕೆ ಇದರಿಂದ ದೊಡ್ಡ ಮಟ್ಟದ ಧಕ್ಕೆ.

ಆಸ್ಟ್ರೇಲಿಯ, ಸಿಂಗಪುರ, ಸ್ವಿಟ್ಜರ್‌ಲೆಂಡ್ ದೇಶಗಳಲ್ಲಿ ಮತದಾರರು ಮತವನ್ನು ಚಲಾಯಿಸದಿದ್ದಲ್ಲಿ, ಅದಕ್ಕೆ ಕಾರಣವೇನೆಂದು ಕೋರ್ಟ್‌ಗೆ ಹೋಗಿ ವಿವರಿಸಬೇಕಾಗುತ್ತದೆ. ಮತ ಚಲಾಯಿಸದೇ ಇದ್ದುದಕ್ಕೆ ಸಕಾರಣ ಇಲ್ಲದಿದ್ದರೆ, ಅಂತಹವರ ಪೌರತ್ವವನ್ನು ಅನರ್ಹಗೊಳಿಸಬಹುದಾದ ನಿಯಮ ಅಲ್ಲಿದೆ. ಅಂತಹದ್ದೊಂದು ನಿಯಮ ನಮ್ಮ ದೇಶದಲ್ಲಿಯೂ ಜಾರಿಗೆ ಬರಬೇಕೆಂದು ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲಾ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು.

ಇನ್ನು ವಿದ್ಯುನ್ಮಾನ ಮಾಧ್ಯಮದವರಂತೂ ರಾಜಕಾರಣಿಗಳು ಮತಬೇಟೆಗೆ ಬರುತ್ತಾರೆ ಎಂದು ಹೇಳುತ್ತಾರೆ. ಬೇಟೆ ಎನ್ನುವ ಪದ ಬಳಕೆ ಸಮಂಜಸವಲ್ಲ. ಹಾಗೇನಾದರೂ ಆದರೆ, ರಾಜಕಾರಣಿಗಳು ಆಗ ಬೇಟೆಗಾರರು ಮತ್ತು ಪ್ರಜೆಗಳಾದ ನಾವು ಪ್ರಾಣಿಗಳು ಎಂದಾಗುತ್ತದೆ. ಇದು ಸರಿಯೇ? ಪ್ರಸ್ತುತ ಚುನಾವಣೆಯಲ್ಲಿ ಅಭ್ಯರ್ಥಿಗಳು ಕೋಟ್ಯಂತರ ರೂಪಾಯಿ ಖರ್ಚು ಮಾಡಿದ್ದಾರೆ ಎಂಬ ವದಂತಿಯಿದೆ. ಈ ಪ್ರವೃತ್ತಿಯಿಂದ 'ಉಳ್ಳವರಿಂದ, ಉಳ್ಳವರಿಗಾಗಿ, ಉಳ್ಳವರಿಗೋಸ್ಕರ' ರಾಜಕಾರಣ ಎಂದು ಆಗುತ್ತದೆಯೇ ವಿನಾ ಅದು ಪ್ರಜಾಪ್ರಭುತ್ವ ಎನಿಸಿಕೊಳ್ಳುವುದಿಲ್ಲ. ಹಣ, ಮದ್ಯದಂತಹ ಆಮಿಷ ಒಡ್ಡುವುದನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಸಂವಿಧಾನದ ಅನುಸಾರ ನಡೆದುಕೊಳ್ಳುವುದು ನಾವೇ ಸೃಷ್ಟಿಸಿಕೊಂಡ ಒಂದು ಅತ್ಯುತ್ತಮ ವ್ಯವಸ್ಥೆ. ಅದನ್ನು ಉಳಿಸಿ, ಬೆಳೆಸೋಣ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಅಭಿವೃದ್ಧಿಯಲ್ಲಿ ಹಿಂದೆ, ಮತದಾನದಲ್ಲಿ ಮುಂದೆ!

ಧಾರವಾಡ ಜಿಲ್ಲೆಯಲ್ಲಿ ಕುಂದಗೋಳ ಅತಿ ಹಿಂದುಳಿದ, ಮೂಲ ಸೌಕರ್ಯವಿಲ್ಲದ ತಾಲ್ಲೂಕು ಎಂಬ ಹಣೆಪಟ್ಟಿ ಹೊಂದಿದೆ. ಆದರೆ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಮತದಾನ ಆಗಿರುವುದು ಈ ತಾಲ್ಲೂಕಿನಲ್ಲಿಯೇ. ತಾಲ್ಲೂಕು ಅಭಿವೃದ್ಧಿಯಲ್ಲಿ ಹಿಂದುಳಿದಿರಬಹುದು, ಆದರೆ ಮತದಾನದ ಜಾಗೃತಿಯಲ್ಲಿ ಎತ್ತಿದ ಕೈ. ನನ್ನ ತಾಲ್ಲೂಕು ನನ್ನ ಹೆಮ್ಮೆ.

ಬಸನಗೌಡ ಪಾಟೀಲ, ಯರಗುಪ್ಪಿ

ಪ್ರಜ್ಞಾವಂತಿಕೆ ಮೆರೆದ ಗ್ರಾಮಸ್ಥರು

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆ ಹೋಬಳಿಯ ಗಂಜಿಗೆರೆ ಗ್ರಾಮದಲ್ಲಿ, ಪಕ್ಷದ ಪರವಾಗಿ ಮತ ಹಾಕಲು ತಮ್ಮ ಮನೆ ಮುಂದೆ ಬಿಜೆಪಿ ಕಾರ್ಯಕರ್ತರು ಇಟ್ಟು ಹೋಗಿದ್ದರು ಎನ್ನಲಾದ ಕೋಳಿಗಳು ಮತ್ತು ಸೀರೆಗಳನ್ನು ಗ್ರಾಮಸ್ಥರು ಅದೇ ಕಾರ್ಯಕರ್ತರ ಮನೆಯ ಮುಂದಕ್ಕೆ ತಂದೆಸೆಯುವ ಮೂಲಕ (ಪ್ರ.ವಾ., ಮೇ 11) 'ನಮ್ಮ ಮತ ಮಾರಾಟಕ್ಕಿಲ್ಲ' ಎಂಬ ಪ್ರಜ್ಞಾವಂತಿಕೆ ಮೆರೆದಿದ್ದಾರೆ. ಅವರ ಈ ಧೈರ್ಯವನ್ನು ಮೆಚ್ಚಲೇಬೇಕು.

ಈ ರೀತಿ ಮತಕ್ಕಾಗಿ ಆಮಿಷ ಒಡ್ಡುವವರ ವಿರುದ್ಧ ಚುನಾವಣಾ ಆಯೋಗ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸಬೇಕು. ಅಲ್ಲದೆ ಇಂತಹ ಮತದಾರರನ್ನು ಆಯೋಗ ಅಭಿನಂದಿಸಬೇಕು. ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಾದ್ಯಂತ ಮತಕ್ಕಾಗಿ ಆಮಿಷ ಒಡ್ಡಿ ಲಕ್ಷಾಂತರ ಸೀರೆಗಳನ್ನು ಹಂಚಲಾಗಿದೆ ಎಂಬ ಆರೋಪ ಮತದಾರರಿಂದ ಕೇಳಿಬಂದಿದೆ. ಈ ಬಗ್ಗೆ ಆಯೋಗವು ತನಿಖೆ ನಡೆಸಿ ಸೂಕ್ತವಾದ ಕ್ರಮ ಕೈಗೊಳ್ಳಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

ಕಡಿಮೆ ಮತದಾನ: ಆಯೋಗಕ್ಕೆ ಸವಾಲು

ಪ್ರಜ್ಞಾವಂತ ಮತದಾರರು ಹೆಚ್ಚಾಗಿರುವ ಬೆಂಗಳೂರು ನಗರದಲ್ಲಿ, ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿಯೂ ಕಡಿಮೆ ಪ್ರಮಾಣದಲ್ಲಿ ಮತದಾನ ಆಗಿದೆ. ಇದು ಚುನಾವಣಾ ಆಯೋಗಕ್ಕೆ ಒಂದು ಸವಾಲು ಎಂದರೂ ತಪ್ಪಾಗಲಾರದು. ಪ್ರತಿ ಬಾರಿಯೂ ಗ್ರಾಮೀಣ ಪ್ರದೇಶದ ಜನರು ಚುನಾವಣೆಯನ್ನು ಹಬ್ಬದ ರೀತಿಯಲ್ಲಿ ಸಂಭ್ರಮಿಸುತ್ತಾರೆ. ಆದರೆ ನಗರ ಪ್ರದೇಶದಲ್ಲಿ ಮತದಾರರ ಪಾಲ್ಗೊಳ್ಳುವಿಕೆ ತುಂಬಾ ನಿರಾಶಾದಾಯಕವಾಗಿ ಇರುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು ಎನ್ನುವುದನ್ನು ಬಹುತೇಕ ವಿದ್ಯಾವಂತರೇ ಆಗಿರುವ ನಗರ ಪ್ರದೇಶದ ಜನರು ಮರೆಯಬಾರದು.

ರಾಜ್ಯ ಚುನಾವಣಾ ಆಯೋಗ ಅನೇಕ ರೀತಿಯ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದರೂ ಇನ್ನೂ ಸಮಸ್ಯೆಗಳು ಇರುವುದನ್ನು ಈ ಚುನಾವಣೆಯು ತೋರಿಸಿಕೊಟ್ಟಿದೆ. ಉದಾಹರಣೆಗೆ, ಬಳ್ಳಾರಿ ಜಿಲ್ಲೆಯ ಕುರುಗೋಡು ತಾಲ್ಲೂಕಿನ ಕೊರ್ಲಗುಂದಿ ಗ್ರಾಮದಲ್ಲಿ ಮತದಾನ ಮಾಡಲು ಬಂದಿದ್ದ ತುಂಬು ಗರ್ಭಿಣಿಗೆ ಮತದಾನ ಕೇಂದ್ರದಲ್ಲಿಯೇ ಸಹಜ ಹೆರಿಗೆ ಆಗಿದೆ. ಅನಾರೋಗ್ಯ ಅಥವಾ ಪ್ರಸವದಂತಹ ಕಾರಣಗಳಿಂದ ಆಸ್ಪತ್ರೆಯಲ್ಲಿ ಇರುವವರಿಗೆ ಮತದಾನಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಬಗ್ಗೆ ಚಿಂತಿಸಬೇಕಾಗಿದೆ. ಅಂಗವಿಕಲರು, ವಯೋವೃದ್ಧರಿಗೆ ಈ ಬಾರಿ ಮನೆಯಿಂದಲೇ ಮತದಾನದ ವ್ಯವಸ್ಥೆ ಮಾಡಿದ್ದರೂ ಹೆಚ್ಚಿನ ಮಂದಿ ಅಷ್ಟೊಂದು ಆಸಕ್ತಿ ತೋರಿಲ್ಲ ಎಂದು ವರದಿಯಾಗಿದೆ. ಇದಕ್ಕೆ ಆಯೋಗದ ಪ್ರಚಾರದ ಕೊರತೆ ಕಾರಣವಿರಬಹುದು. ಭಾರತವು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಮತಯಂತ್ರಗಳ ಮೂಲಕ ಚುನಾವಣಾ ಪ್ರಕ್ರಿಯೆ ನಡೆಸುತ್ತಿದೆ. ಅನಿವಾಸಿ ಭಾರತೀಯರು ಹೊರದೇಶಗಳಿಂದ ಇಲ್ಲಿಗೆ ಬಂದು ಮತ ಚಲಾಯಿಸುವುದನ್ನು ಆಯೋಗ ಗಂಭೀರವಾಗಿ ಪರಿಗಣಿಸಬೇಕು. ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಅವರು ಇದ್ದಲ್ಲಿಂದಲೇ ಮತ ಚಲಾವಣೆಗೆ ವ್ಯವಸ್ಥೆ ಕಲ್ಪಿಸುವ ಬಗ್ಗೆ ಚಿಂತಿಸಬೇಕು.


ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಮ್ಮಿಶ್ರ ಸರ್ಕಾರ: ಯಾರಿಗೆಲ್ಲ ವರ

ರಾಜ್ಯದಲ್ಲಿ 1952 ರಿಂದ 1983 ರವರೆಗೆ ಪ್ರತಿ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷವೇ ಬಹುಮತ ಪಡೆದು ಅಧಿಕಾರ ಸೂತ್ರವನ್ನು ಹಿಡಿಯುತ್ತಿತ್ತು. ಪ್ರಬಲ ವಿರೋಧ ಪಕ್ಷಗಳೇ ಇಲ್ಲದ ಕಾಲವದು. ತುರ್ತುಪರಿಸ್ಥಿತಿಯ ಬಳಿಕ ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರ ಚುಕ್ಕಾಣಿ ಹಿಡಿಯಿತು. ಆ ಸಂದರ್ಭದಲ್ಲಿ ಕರ್ನಾಟಕದಲ್ಲೂ ಜನತಾ ಪಕ್ಷ ಬೇರೂರುವ ಪ್ರಯತ್ನ ನಡೆಯಿತು. ಅದು ಫಲ ಕೊಟ್ಟಿದ್ದು 1983 ರ ಚುನಾವಣೆಯಲ್ಲಿ. ಆಗ ರಾಜ್ಯದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಿತು. ಆದರೆ ಇದು ಪೂರ್ಣಾವಧಿ ಆಡಳಿತ ನಡೆಸಲಿಲ್ಲ. ಆ ಬಳಿಕ 2004, 2008 ಮತ್ತು 2018 ರಲ್ಲಿ ಅತಂತ್ರ ವಿಧಾನಸಭೆ ರಚನೆಯಾಗಿ ಸಮ್ಮಿಶ್ರ ಸರ್ಕಾರಗಳು ಅಧಿಕಾರಕ್ಕೆ ಬಂದವು. 'ಆಪರೇಷನ್ ಕಮಲ'ದ ಮೂಲಕ ಬಿಜೆಪಿ ತನ್ನ ಸಂಖ್ಯೆಯನ್ನು ವೃದ್ಧಿಸಿಕೊಂಡು ಅಧಿಕಾರ ಭದ್ರಪಡಿಸಿಕೊಂಡಿತು. ಈಗ 2023ರ ಫಲಿತಾಂಶದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ

1983ರಲ್ಲಿ ಭಾಗಶಃ ಸಮ್ಮಿಶ್ರ ಸರ್ಕಾರ






ರಾಮಕೃಷ್ಣ ಹೆಗಡೆ

ಕಾಂಗ್ರೆಸ್ ಸರ್ಕಾರದ ದುರಾಡಳಿತ, ರೈತ ವಿರೋಧ ನೀತಿಯ ವಿರುದ್ಧ ಜನತಾಪಕ್ಷ, ಕ್ರಾಂತಿರಂಗ, ಬಿಜೆಪಿ, ಸಿಪಿಐ, ಸಿಪಿಎಂ, ಕರ್ನಾಟಕ ರಾಜ್ಯ ರೈತ ಸಂಘ ಸೆಣಸಿದ್ದವು. ಈ ಚುನಾವಣೆಯಲ್ಲಿ ಜನತಾ ಪಕ್ಷ 95 ಸ್ಥಾನಗಳನ್ನು ಗೆಲ್ಲುವ ಮೂಲಕ ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿತು. ಕಾಂಗ್ರೆಸ್ 82 ಸ್ಥಾನಗಳನ್ನು ಮಾತ್ರ ಗೆದ್ದಿತ್ತು. ಆಗ ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಎಚ್.ಡಿ.ದೇವೇಗೌಡ ಮತ್ತು ಎಸ್.ಬಂಗಾರಪ್ಪ ಅವರ ಮಧ್ಯೆ ತಿಕ್ಕಾಟ ಆರಂಭವಾಯಿತು. ಆಗ ಜನತಾ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಯಾಗಿದ್ದ ರಾಮಕೃಷ್ಣ ಹೆಗಡೆ, ಕರ್ನಾಟಕ ರಾಜಕಾರಣಕ್ಕೆ ಮರಳಿ ಮುಖ್ಯಮಂತ್ರಿ ಹುದ್ದೆ ದಕ್ಕಿಸಿಕೊಂಡರು. 18 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಬಾಹ್ಯ ಬೆಂಬಲ ನೀಡಿತ್ತು. ಇತರ ಸಣ್ಣ ಪಕ್ಷಗಳ ಜತೆ ನೆರವಿನೊಂದಿಗೆ ರಾಮಕೃಷ್ಣ ಹೆಗಡೆ ಸರ್ಕಾರ ರಚಿಸಿದರು. 1984ರ ಲೋಕಸಭಾ ಚುನಾವಣೆಯಲ್ಲಿ ಜನತಾಪಕ್ಷ ಕೇವಲ ನಾಲ್ಕು ಸ್ಥಾನಗಳಲ್ಲಿ ಮಾತ್ರ ಗೆದ್ದಿತು. ಪಕ್ಷ ಜನರ ವಿಶ್ವಾಸ ಕಳೆದುಕೊಂಡಿದೆ ಎಂದು ಹೇಳಿದ ಹೆಗಡೆಯವರು ವಿಧಾನಸಭೆ ವಿಸರ್ಜಿಸಿದರು. 'ಮೌಲ್ಯಾಧಾರಿತ ರಾಜಕಾರಣ' ಎಂಬ ಘೋಷಣೆ ಮುಂದಿಟ್ಟ ಅವರು, 1985ರಲ್ಲಿ ಚುನಾವಣೆಗೆ ಹೊಸ ಜನಾದೇಶ ಕೇಳಿದರು. ಪೂರ್ಣ ಬಹುಮತದೊಂದಿಗೆ ಜನತಾ ಪಕ್ಷ ಅಧಿಕಾರ ಹಿಡಿಯಿತು.

2004ರಲ್ಲಿ ಮೊದಲ ಸಮ್ಮಿಶ್ರ ಸರ್ಕಾರ




ಧರ್ಮಸಿಂಗ್



'ಜನಪ್ರಿಯತೆ'ಯ ಉತ್ತುಂಗದಲ್ಲಿದ್ದ ಎಸ್.ಎಂ.ಕೃಷ್ಣ ಅವರು ಲೋಕಸಭೆ ಚುನಾವಣೆ ಜತೆಗೆ ಹೋದರೆ ಮತ್ತೆ ಅಧಿಕಾರ ಹಿಡಿಯಬಹುದು ಎಂಬ ತವಕದಲ್ಲಿ ಆರು ತಿಂಗಳ ಮೊದಲೇ ವಿಧಾನಸಭೆ ವಿಸರ್ಜಿಸಿದರು. ಅಷ್ಟೊತ್ತಿಗೆ ಕೃಷ್ಣರ ಜತೆ ಮುನಿಸಿಕೊಂಡಿದ್ದ ಎಸ್. ಬಂಗಾರಪ್ಪ ಬಿಜೆಪಿ ಸೇರಿದ್ದರು. 2004ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 79 ಸ್ಥಾನಗಳನ್ನು ಗೆದ್ದು ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿತು. ಕಾಂಗ್ರೆಸ್ ಕಾಂಗ್ರೆಸ್ 65 ಮತ್ತು ಜೆಡಿಎಸ್ 58 ಸ್ಥಾನಗಳನ್ನು ಗೆದ್ದುಕೊಂಡವು. 'ಕೋಮುವಾದಿ ಪಕ್ಷವನ್ನು ಅಧಿಕಾರದಿಂದ ದೂರ ಇಡಬೇಕು' ಎಂದು ಹೇಳಿಕೊಂಡ ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿದವು. ಕಾಂಗ್ರೆಸ್‌ನ ಧರ್ಮಸಿಂಗ್ ಮುಖ್ಯಮಂತ್ರಿಯಾದರೆ, ಜೆಡಿಎಸ್‌ನ ಸಿದ್ದರಾಮಯ್ಯ ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಈ ಸರ್ಕಾರ ಹೆಚ್ಚು ಕಾಲ ಬಾಳಲಿಲ್ಲ. ಒಂದು ಕಡೆ ಜೆಡಿಎಸ್‌ನಲ್ಲಿ ಎಚ್.ಡಿ.ದೇವೇಗೌಡ ಮತ್ತು ಸಿದ್ದರಾಮಯ್ಯ ಮಧ್ಯೆ ಬಾಂಧವ್ಯ ಹಳಸಿತ್ತು. ದೇವೇಗೌಡರ ಪುತ್ರ ಎಚ್.ಡಿ.ಕುಮಾರಸ್ವಾಮಿ 42 ಶಾಸಕರೊಂದಿಗೆ ಸೇರಿ ಸಮ್ಮಿಶ್ರ ಸರ್ಕಾರದಿಂದ ಹೊರ ನಡೆದ ಕಾರಣ ಸಮ್ಮಿಶ್ರ ಸರ್ಕಾರ ಪತನಗೊಂಡಿತು.

2006ರಲ್ಲಿ ಎರಡನೇ ಸಮ್ಮಿಶ್ರ ಸರ್ಕಾರ: 2006ರ ಜನವರಿ 28 ರಂದು ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಮತ್ತು ಬಿಜೆಪಿ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿದವು. ತಲಾ 20 ತಿಂಗಳುಗಳಂತೆ ಕುಮಾರಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುವ ಒಪ್ಪಂದಕ್ಕೆ ಬರಲಾಗಿತ್ತು. ಆದರೆ, 20 ತಿಂಗಳು ಮುಗಿಯುತ್ತಿದ್ದಂತೆ ಕುಮಾರಸ್ವಾಮಿ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಲು ಒಪ್ಪಲಿಲ್ಲ. ಎರಡೂ ಪಕ್ಷಗಳ ಮಧ್ಯೆ ಮತ್ತೆ ಮಾತುಕತೆ ನಡೆದು ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ, ಜೆಡಿಎಸ್ ಬೆಂಬಲ ಹಿಂದಕ್ಕೆ ಪಡೆದ ಕಾರಣ ಸರ್ಕಾರ ಪತನವಾಯಿತು. ರಾಷ್ಟ್ರಪತಿ ಆಡಳಿತ ಹೇರಲಾಯಿತು.

2008ರಲ್ಲಿ 'ಆಪರೇಷನ್ ಕಮಲ'ದ ಸರ್ಕಾರ




ಯಡಿಯೂರಪ್ಪ




ಎಚ್.ಡಿ.ಕುಮಾರಸ್ವಾಮಿ 'ವಿಶ್ವಾಸ ದ್ರೋಹ' ಮಾಡಿದ್ದಾರೆ ಎಂದು ದೂಷಿಸಿದ ಯಡಿಯೂರಪ್ಪ ಚುನಾವಣೆ ಎದುರಿಸಿದರು. 110 ಸ್ಥಾನಗಳನ್ನು ಗೆದ್ದುಕೊಂಡ ಬಿಜೆಪಿ ಏಕೈಕ ದೊಡ್ಡಪಕ್ಷವಾಗಿ ಹೊರ ಹೊಮ್ಮಿತು. ಆದರೆ, ಅಧಿಕಾರ ರಚಿಸುವ ಬಲ ಇರಲಿಲ್ಲ. ಕಾಂಗ್ರೆಸ್ 80, ಜೆಡಿಎಸ್ 28 ಮತ್ತು ಪಕ್ಷೇತರರು 6 ಸ್ಥಾನಗಳನ್ನು ಗೆದ್ದರು. ಪಕ್ಷೇತರರ ನೆರವು ಪಡೆದುಕೊಂಡು ಬಿ.ಎಸ್.ಯಡಿಯೂರಪ್ಪ ಸರ್ಕಾರ ರಚಿಸಿದರು. ಪಕ್ಷೇತರರ ಊರುಗೋಲಿನಲ್ಲಿ ಅಸ್ಥಿರ ಸರ್ಕಾರ ನಡೆಸಿದ್ದ ಯಡಿಯೂರಪ್ಪ, ತಮ್ಮ ಸ್ಥಾನ ಭದ್ರ ಪಡಿಸಿಕೊಳ್ಳಲು ಕಾಂಗ್ರೆಸ್–ಜೆಡಿಎಸ್ ಶಾಸಕರಿಗೆ ಗಾಳ ಹಾಕಿ 'ಆಪರೇಷನ್ ಕಮಲ' ನಡೆಸಿದರು. ಈ ಅವಧಿಯಲ್ಲಿ ಭ್ರಷ್ಟಾಚಾರದ ಆರೋಪಕ್ಕೆ ಗುರಿಯಾದ ಯಡಿಯೂರಪ್ಪ ರಾಜೀನಾಮೆ ಕೊಟ್ಟರು. ತಮ್ಮದೇ ಮೂಗಿನ ನೇರ ನಡೆಯುವ ಮುಖ್ಯಮಂತ್ರಿ ಬೇಕು ಎಂಬ ಕಾರಣಕ್ಕೆ ಡಿ.ವಿ.ಸದಾನಂದಗೌಡ ಅವರನ್ನು ಮುಖ್ಯಮಂತ್ರಿ ಮಾಡಿದರು. ಅದಾದ ಕೆಲವೇ ದಿನಗಳಲ್ಲಿ ಯಡಿಯೂರಪ್ಪ ಜೈಲಿಗೆ ಹೋದರು. ಸದಾನಂದಗೌಡರು ತಮ್ಮ ಮಾತಿಗೆ ಕಿವಿಗೊಡುತ್ತಿಲ್ಲ ಎಂದು ಸಿಟ್ಟಾದ ಯಡಿಯೂರಪ್ಪ, ಅವರನ್ನು ಇಳಿಸಿ ಜಗದೀಶ ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡಿದರು.

2018ರ ಸಮ್ಮಿಶ್ರ ಸರ್ಕಾರ




ಕುಮಾರಸ್ವಾಮಿ



2018ರ ವಿಧಾನಸಭಾ ಚುನಾವಣೆಯಲ್ಲೂ ಬಿಜೆಪಿ 104 ಸ್ಥಾನಗಳನ್ನು ಗೆಲ್ಲುವ ಮೂಲಕ ಏಕೈಕ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿತು. ಕಾಂಗ್ರೆಸ್ 78 ಸ್ಥಾನಗಳನ್ನು ಗೆದ್ದುಕೊಂಡರೆ, ಜೆಡಿಎಸ್ 37 ಸ್ಥಾನಗಳನ್ನು ಗೆದ್ದುಕೊಂಡಿತು. ಬಿಜೆಪಿಗೆ ಬಹುಮತ ಇಲ್ಲದೇ ಹೋದರೂ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದರು. ಆದರೆ, ಬಹುಮತ ಸಾಬೀತು ಮಾಡಲಾಗದೇ, ರಾಜೀನಾಮೆ ಕೊಡಬೇಕಾಯಿತು. ಈ ಮಧ್ಯೆ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ರಚಿಸಲು ಒಪ್ಪಂದ ಮಾಡಿಕೊಂಡವು. ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಈ ಸರ್ಕಾರದಲ್ಲಿ ಜಿ.ಪರಮೇಶ್ವರ ಅವರು ಉಪಮುಖ್ಯಮಂತ್ರಿಯಾದರು. ಮುಖ್ಯಮಂತ್ರಿಯಾಗಲೇ ಬೇಕು ಎಂಬ ಹಟಕ್ಕೆ ಬಿದ್ದಿದ್ದ ಯಡಿಯೂರಪ್ಪ ಮತ್ತೆ 'ಆಪರೇಷನ್ ಕಮಲ' ನಡೆಸಿದರು. ಲೋಕಸಭೆ ಚುನಾವಣೆ ಮುಗಿಯುತ್ತಿದ್ದಂತೆ, ಕಾಂಗ್ರೆಸ್, ಜೆಡಿಎಸ್ ಮತ್ತು ಪಕ್ಷೇತರರು ಸೇರಿ 17 ಶಾಸಕರು ಮೈತ್ರಿ ಸರ್ಕಾರದಿಂದ ಹೊರಬಂದರು. ಸರ್ಕಾರ ಪತನಗೊಂಡಿತು. ಬಳಿಕ ಆ ಶಾಸಕರು ಬಿಜೆಪಿಯನ್ನು ಸೇರಿದರು. ಈ ಆಪರೇಷನ್ ಕಮಲದಿಂದ ಪುನಃ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಒಂದೂವರೆ ವರ್ಷ ಕಳೆಯುತ್ತಿದ್ದಂತೆ ಯಡಿಯೂರಪ್ಪ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಅಧಿಕಾರದಿಂದ ನಿರ್ಗಮಿಸಿದರು. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದರು.

ಬಹುಮತದ ಸರ್ಕಾರಗಳು

ಆಧಾರ: ಚುನಾವಣಾ ಆಯೋಗ



ಮಾಹಿತಿ: ಎಸ್. ರವಿಪ್ರಕಾಶ್, ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.,



ಭೂಕುಸಿತ ಮುನ್ಸೂಚನೆ ವ್ಯವಸ್ಥೆ 2026ರಲ್ಲಿ ಜಾರಿ

ಕೋಲ್ಕತ್ತ (ಪಿಟಿಐ): ಭೂಕುಸಿತದ ಮುನ್ಸೂಚನೆ ನೀಡುವ ವ್ಯವಸ್ಥೆಗೆ 2026ರಲ್ಲಿ ದೇಶದಾದ್ಯಂತ ಚಾಲನೆ ಸಿಗಲಿದೆ. ಭಾರತೀಯ ಭೂಸರ್ವೇಕ್ಷಣಾ ಸಂಸ್ಥೆಯು (ಜಿಎಸ್‌ಐ) ಈಗಾಗಲೇ ಈ ನಿಟ್ಟಿನಲ್ಲಿ ಕೆಲಸ ಆರಂಭಿಸಿದೆ. ಭೂಕುಸಿತದ ಮುನ್ಸೂಚನೆ ನೀಡುವ ವ್ಯವಸ್ಥೆಯನ್ನು ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಹಾಗೂ ಕಾಲಿಂಪೊಂಗ್ ಜಿಲ್ಲೆಗಳು ಹಾಗೂ ತಮಿಳುನಾಡಿನ ನೀಲಗಿರಿಯಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ ಎಂದು ಸಂಸ್ಥೆಯ ಉಪಮಹಾನಿರ್ದೇಶಕ ಅಸಿತ್ ಸಹಾ ಅವರು ತಿಳಿಸಿದ್ದಾರೆ.

ಪ್ರಾದೇಶಿಕ ಭೂಕುಸಿತ ಮುನ್ಸೂಚನೆ ವ್ಯವಸ್ಥೆಯನ್ನು ಜಿಎಸ್‌ಐ ಅಭಿವೃದ್ಧಿಪಡಿಸುತ್ತಿದ್ದು, ಅದನ್ನು 2026ರ ಬಳಿಕ ಹಂತ ಹಂತವಾಗಿ ದೇಶದಾದ್ಯಂತ ಕಾರ್ಯಾಚರಣೆಗೆ ಸಜ್ಜುಗೊಳಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ. ದೇಶದಲ್ಲಿ ಭೂಕುಸಿತ ಸಂಭಾವ್ಯ ಇರುವ ಪರ್ವತ ಮತ್ತು ಗುಡ್ಡಗಾಡು ಪ್ರದೇಶಗಳ ನಕ್ಷೆಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. 19 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಇದಕ್ಕಾಗಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಭೂಕುಸಿತ ಸಂಭಾವ್ಯ ಪ್ರದೇಶಗಳು

- ಜಮ್ಮು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡವನ್ನು ಒಳಗೊಂಡ ವಾಯವ್ಯ ಹಿಮಾಲಯದ ಬೆಟ್ಟ ಪ್ರದೇಶ
- ಪಶ್ಚಿಮ ಬಂಗಾಳದ ಡಾರ್ಜಿಲಿಂಗ್, ಸಿಕ್ಕಿಂ, ಅಸ್ಸಾಂ, ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರಾ ಒಳಗೊಂಡ ಹಿಮಾಲಯದ ಪೂರ್ವಭಾಗದ ಪ್ರದೇಶಗಳು
- ಮಹಾರಾಷ್ಟ್ರ, ಕರ್ನಾಟಕ, ಗೋವಾ, ಕೇರಳವನ್ನು ಒಳಗೊಂಡ ಪಶ್ಚಿಮ ಘಟ್ಟದ ಪ್ರದೇಶಗಳು
- ಆಂಧ್ರಪ್ರದೇಶ ಹಾಗೂ ತಮಿಳುನಾಡಿನ ಬೆಟ್ಟ ಪ್ರದೇಶಗಳು

ಭಾರತವು ಭೂಕುಸಿತ ಸಂಭಾವ್ಯ ವಲಯದಲ್ಲಿದೆ. ದೇಶದ ಭೂಪ್ರದೇಶದ ಪೈಕಿ 4.2 ಲಕ್ಷ ಚದರ ಕಿಲೋಮೀಟರ್ ಪ್ರದೇಶ ಅಥವಾ ಶೇ 12.6ರಷ್ಟು ಭೂಪ್ರದೇಶವು ಭೂಕುಸಿತ ಸೂಕ್ಷ್ಮ ಪ್ರದೇಶ ಎಂದು ಜಿಎಸ್‌ಐ ಗುರುತಿಸಿದೆ. ದೇಶದ ಯಾವ ಪ್ರದೇಶಗಳು ಭೂಕುಸಿತ ಸೂಕ್ಷ್ಮ ಪ್ರದೇಶಗಳಾಗಿವೆ ಎಂಬುದನ್ನು ಪತ್ತೆಹಚ್ಚಲಾಗಿದ್ದು, ಅವುಗಳನ್ನು ತೀವ್ರತೆಯ ಆಧಾರದ ಮೇಲೆ ವರ್ಗೀಕರಣ ಮಾಡಲಾಗಿದೆ. ವಾಯವ್ಯ ಹಾಗೂ ಪೂರ್ವ ಹಿಮಾಲಯ ತಪ್ಪಲಿನಲ್ಲಿರುವ ರಾಜ್ಯಗಳು, ಪಶ್ಚಿಮಘಟ್ಟ ಪ್ರದೇಶಗಳು ಭೂಕುಸಿತದ ಸಾಧ್ಯತೆ ಹೆಚ್ಚು ಇರುವ ಪ್ರದೇಶಗಳಾಗಿವೆ.

1851ರಲ್ಲಿ ಸ್ಥಾಪನೆಯಾದ ಜಗತ್ತಿನ ಅತಿ ಹಳೆಯ ಭೂಸರ್ವೇಕ್ಷಣಾ ಸಂಸ್ಥೆಯಾಗಿರುವ ಜಿಎಸ್‌ಐ, ಇಂತಹ ಅವಘಡಗಳು ನಡೆದಿರುವ ನಿರ್ದಿಷ್ಟ ಸ್ಥಳಗಳ ವಿಸ್ತೃತ ನಕ್ಷೆಯನ್ನು ಸಿದ್ಧಪಡಿಸಿದೆ. ಹಿಮಾಚಲ ಪ್ರದೇಶದ ಕಿನ್ನೌರ್‌ನಲ್ಲಿ ಈ ಕುರಿತ ಅಧ್ಯಯನವೊಂದನ್ನು ಪೂರ್ಣಗೊಳಿಸಿದೆ. ಮಳೆಯಾಧಾರಿತ ಭೂಕುಸಿತದ ಮುನ್ಸೂಚನೆ ವ್ಯವಸ್ಥೆಯನ್ನು ಸಂಸ್ಥೆ ರೂಪಿಸುತ್ತಿದೆ. ಇಂತಹ ಮುನ್ಸೂಚನೆಗಳನ್ನು ಜನರಿಗೆ ನೀಡುವ ಪ್ರಾಯೋಗಿಕ ಯತ್ನವನ್ನು ಎರಡು ರಾಜ್ಯಗಳಲ್ಲಿ ಈಗಾಗಲೇ ಮಾಡಲಾಗಿದೆ. ಹಿಮಾಲಯ ಪ್ರದೇಶವನ್ನೂ ಒಳಗೊಂಡಂತೆ ದೇಶದ ಆಯ್ದ ಭಾಗಗಳಲ್ಲಿ ಆ್ಯಕ್ಟಿವ್ ಫಾಲ್ಟ್ ಮ್ಯಾಪಿಂಗ್, ಸೆಸ್ಮಿಕ್ ಮೈಕ್ರೊ ಝೋನೇಷನ್ ಮತ್ತು ನಿಯೊಟೆಕ್ಟೊನಿಕ್ ಅಧ್ಯಯನಗಳ ಕುರಿತ ವಿಸ್ತೃತ ಪರಿಶೀಲನೆಯನ್ನೂ ಮಾಡಿದ್ದೇವೆ ಎಂದು ಸಹಾ ಅವರು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಾಜಸ್ಥಾನದ ಚುರು ಎಂಬಲ್ಲಿ ಸಂಚಾರಿ ಪೊಲೀಸ್ ಸಮವಸ್ತ್ರದಲ್ಲಿರುವ ವ್ಯಕ್ತಿಯೊಬ್ಬರು ಅಳುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಹಿಂದೂ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬರು ಮುಸ್ಲಿಂ ಸಮುದಾಯದ ಪೊಲೀಸ್‌ಗೆ ಬೆದರಿಕೆ ಹಾಕಿದ್ದಾರೆ' ಎಂದು ವಿಡಿಯೊ ಜೊತೆ ಹೇಳಲಾಗಿದೆ. ರಾಜಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರವಿದ್ದು, ಪೊಲೀಸರಿಗೇ ಈ ಸ್ಥಿತಿ ಇದ್ದರೆ, ಸಾಮಾನ್ಯ ಜನರ ಪಾಡೇನು ಎಂದು ಸಾಮಾಜಿಕ ಜಾಲತಾಣ ಬಳಕೆದಾರರು ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ ಈ ಆರೋಪ ಸುಳ್ಳು.



ಸಂಚಾರಿ ಪೊಲೀಸ್ ದಿರಿಸಿನಲ್ಲಿರುವ ವ್ಯಕ್ತಿ ಮುಸ್ಲಿಂ ಸಮುದಾಯಕ್ಕೆ ಸೇರಿದವರು ಎಂಬುದು ತಪ್ಪು ಮಾಹಿತಿ ಎಂದು 'ದಿ ಲಾಜಿಕಲ್ ಇಂಡಿಯನ್' ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಏ.17ರಂದು ಚುರುವಿನ ರಸ್ತೆಯೊಂದರಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ದಟ್ಟಣೆಗೆ ಕಾರಣವಾಗಿದ್ದ ದುಬಾರಿ ಕಾರನ್ನು ಸ್ಥಳದಿಂದ ತೆಗೆಯುವಂತೆ ಸಂಚಾರಿ ಪೊಲೀಸ್ ಜಗವೀರ್ ಸಿಂಗ್ ಸೂಚಿಸಿದ್ದರು. ಆದರೆ ಕಾರಿನಲ್ಲಿದ್ದ ನರೇಂದ್ರ ಸಿಂಗ್ ಎಂಬಾತ ಬೆದರಿಕೆ ಹಾಕಿದ್ದ. ತನಗೆ ಸಚಿವರು ಆಪ್ತರಾಗಿದ್ದು, ವರ್ಗಾವಣೆ ಮಾಡಿಸುವುದಾಗಿ ಬೆದರಿಕೆ ಹಾಕಿದ್ದ. ಬೇಸರದಿಂದ ಕಣ್ಣೀರು ಹಾಕಿದ್ದ ಜಗವೀರ್ ಸಿಂಗ್ ಅವರು ಠಾಣೆಗೆ ದೂರು ನೀಡಿದ್ದರು. ನಂತರ ಆರೋಪಿಯನ್ನು ಬಂಧಿಸಲಾಗಿತ್ತು. ಅವರು ಮುಸ್ಲಿಂ ಆಗಿದ್ದರಿಂದ ಬೆದರಿಕೆ ಹಾಕಲಾಗಿತ್ತು ಎಂಬುದು ಸುಳ್ಳು ಸುದ್ದಿ ಎಂದು 'ದಿ ಲಾಜಿಕಲ್ ಇಂಡಿಯನ್' ವರದಿ ಮಾಡಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಪಂಚಕ್ಕೆ ಪರ್ವಕಾಲ

ಸರ್ವಾರ್ಥ ಸಹಭಾಗಿತೆಗೆ ರಾಷ್ಟ್ರ ಕುಲ ವರ್ಗ |
ಸರ್ವದಣು ತಾನೆನುತ್ತೋರೊರ್ವ ಮನುಜನ್ ||
ಸರ್ವಜೀವ ಸಮೃದ್ಧಿಗನುಗೂಡಿ ದುಡಿಯುತಿರೆ |
ಪರ್ವವಂದಿಳೆಗೆಲವೊ – ಮಂಕುತಿಮ್ಮ || 882 ||

ಪದ-ಅರ್ಥ: ಸರ್ವಾರ್ಥ = ಸರ್ವರ ಪ್ರಯೋಜನ, ಸರ್ವದಣು = ಸರ್ವದ + ಅಣು, ತಾನೆನುತ್ತೋರೊರ್ವ = ತಾನು + ಎನುತ್ತ + ಓರೊರ್ವ(ಪ್ರತಿಯೊಬ್ಬನೂ), ಸಮೃದ್ಧಿಗನುಗೂಡಿ = ಸಮೃದ್ಧಿಗೆ + ಅನುಗೂಡಿ(ಸಹಾಯಕವಾಗಿ), ಪರ್ವವಂದಿಳೆಗೆಲವೊ = ಪರ್ವವು(ಬದಲಾವಣೆಯ ಕಾಲ) + ಅಂದು + ಇಳೆಗೆ + ಎಲವೊ.

ವಾಚ್ಯಾರ್ಥ: ಎಲ್ಲರ ಪ್ರಯೋಜನಕ್ಕೆ, ಎಲ್ಲರ ಹಂಚಿಕೆಗಾಗಿಯೇ ರಾಷ್ಟ್ರ, ಕುಲ, ವರ್ಗಗಳು ರಚಿತವಾಗಿವೆ. ಪ್ರಪಂಚದ ಪ್ರತಿಯೊಬ್ಬ ಮನುಷ್ಯನೂ ತಾನು ಸರ್ವರಲ್ಲಿ ಒಂದು ಅಣು ಮಾತ್ರವೆಂದು ತಿಳಿದು, ಸರ್ವ ಜೀವಗಳ ಸಮೃದ್ಧಿಗೆ ಸಹಕಾರಿಯಾಗುವಂತೆ ದುಡಿದರೆ, ಅದೇ ಬದಲಾವಣೆಯ ಪರ್ವ.

ವಿವರಣೆ: ನಮ್ಮೆಲ್ಲ ಧಾರ್ಮಿಕ ಸಾಹಿತ್ಯದ ಧ್ಯೇಯ ಮತ್ತು ಗುರಿಯನ್ನು ಕ್ರೋಢೀಕರಿಸಿದರೆ ನಮಗೆ ತಿಳಿಯುವುದು ಇದು - ಯಾವ ಮನುಷ್ಯ ಸಮಸ್ತ ಜೀವಜಂತುಗಳೂ ತನ್ನಲ್ಲೇ ಒಂದು ಅಂಶವಾಗಿವೆಯೆಂಬಂತೆ ಅಭೇದ ಬುದ್ಧಿಯಿಂದ ನಡೆದುಕೊಳ್ಳುತ್ತಾನೋ ಮತ್ತು ಯಾರು ತನ್ನೊಳಗಿರುವ ಆತ್ಮವನ್ನೇ ಸಮಸ್ತ ಜೀವಜಂತುಗಳಲ್ಲಿಯೂ ಕಾಣುತ್ತ ಅವುಗಳ ಅನುಭವದಲ್ಲಿ ಸಹಭಾಗಿಯಾಗಿರುತ್ತಾನೋ ಅವನಿಗೆ ಶೋಕವಿಲ್ಲ ಅವನನ್ನುಪಾಪವು ಸೋಕದು. ಜೀವಲೋಕದೊಡನೆ ಏಕೀಭವಿಸಿದವನಿಗೆ ಶತ್ರುಗಳೇ ಇಲ್ಲ. ಇದೇ ಸರ್ವಾರ್ಥ ಸಹಭಾಗಿತೆ. ಈ ಸಹಭಾಗಿತೆಯ ತತ್ವವನ್ನು ತುಂಬ ಚೆನ್ನಾಗಿ, ಮಾತನಾಡಿ, ಬರೆದು, ವಿವರಿಸಬಹುದು. ಆದರೆ ಅದನ್ನು ಬದುಕಿನಲ್ಲಿ ಆಚರಣೆಗೆ ತರುವುದು ಸುಲಭವಲ್ಲ. ಸರ್ವಾರ್ಥ ಸಹಭಾಗಿತೆಯೊಂದು ದೊಡ್ಡ ದರ್ಶನ. ಅದನ್ನು ತಲುಪಲು ಮೆಟ್ಟಿಲುಗಳು ಬೇಕು. ಅವುಗಳನ್ನು ಒಂದೊಂದಾಗಿ ಏರಿದಾಗ ಆತ್ಮಶಕ್ತಿಯ ವಿಕಾಸವಾದೀತು. ಆ ಮೆಟ್ಟಿಲುಗಳ ಪ್ರಾರಂಭವೇ ನಮ್ಮಿಂದ. ಮೊದಲು ನಾನು, ನಂತರ ನನ್ನ ಮನೆ, ಪರಿವಾರ, ಪಕ್ಕದ ಮನೆಯವರು, ನನ್ನ ಊರು, ನನ್ನ ರಾಜ್ಯ, ನನ್ನ ದೇಶ, ನನ್ನ ಪ್ರಪಂಚ ಹೀಗೆ ಅಲೆಅಲೆಯಾಗಿ ವಿಸ್ತರಿಸುತ್ತ ಆತ್ಮವಿಕಾಸವಾಗುತ್ತದೆ. ಈ ಮೆಟ್ಟಿಲುಗಳಲ್ಲಿ ಯಾವುದನ್ನೂ ಪ್ರಯೋಜನವಿಲ್ಲ ಎಂದು ಬಿಡಲಾಗದು. ಪ್ರತಿಯೊಂದು ಮೆಟ್ಟಿಲು ಮುಂದಿನದಕ್ಕೆ ಸಹಕಾರಿ. ಆದರೆ ಬಹಳಷ್ಟು ಜನ ಮೊದಲಿನ ಎರಡು ಮೂರು ಮೆಟ್ಟಿಲುಗಳ ಮೇಲೆಯೇ ಕುಳಿತುಬಿಡುತ್ತಾರೆ. ಅವರಿಗೆ ಸಾರ್ವಜನಿಕ ಚಿಂತೆಯ ಅಭ್ಯಾಸವಿಲ್ಲ. ಈಗೊಂದು ಐವತ್ತು ವರ್ಷಗಳಲ್ಲಿ ಮೆಟ್ಟಿಲುಗಳನ್ನು ಏರುವುದಕ್ಕಿಂತ ಕೆಳಗಿಳಿದು ಕೇವಲ 'ನಾನು' ಎಂಬಲ್ಲಿಗೆ ಬಂದು ನಿಂತಿದ್ದೇವೆ ಎಂದು ಭಾಸವಾಗುತ್ತಿದೆ. ನಮಗೇಕೆ ಊರ ಉಸಾಬರಿ? ನಮ್ಮದನ್ನು ನಾವು ನೋಡಿಕೊಂಡರೆ ಸಾಕು ಎನ್ನುವಲ್ಲಿಗೆ ಬಂದಿದ್ದೇವೆ. ಅದಕ್ಕೆ ಕಗ್ಗ ಹೇಳುತ್ತದೆ, ವರ್ಗ, ಕುಲ, ರಾಷ್ಟ್ರಗಳ ಕಲ್ಪನೆಯೆಲ್ಲ ಸರ್ವಾರ್ಥ ಸಹಭಾಗಿತೆಗಾಗಿ ಇರುವಂಥವು. ಯಾವಾಗ ಪ್ರತಿಯೊಬ್ಬ ಮನುಷ್ಯ ಜನಸಮೂಹದ ಅಣು ನಾನು ಎಂದು ಭಾವಿಸುತ್ತಾನೋ, ಸರ್ವ ಜೀವಗಳ ಸಮೃದ್ಧಿಗಾಗಿ ಸಹಕರಿಸಿ ದುಡಿಯುತ್ತಾನೋ, ಅದೇ ಈ ಭೂಮಿಗೆ ಒಂದು ಪರ್ವಕಾಲ, ಕಲ್ಯಾಣದ ಕಾಲ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮೇ 12, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಸಪ್ತಮಿ ಗಂ. 09-07 ನಕ್ಷತ್ರ: ಶ್ರವಣ ಗಂ. 13-03, ಯೋಗ: ಶುಕ್ಲ (ಶುಕ್ರ) ಗಂ. 12-17 ಕರಣ: ಬವ ಗಂ. 09-07, ಮೇಷ ಮಾಸದ 28 ನೇ ದಿನ,
ಮಳೆನಕ್ಷತ್ರ: ಕೃತ್ತಿಕ 1. ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-09 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 21 ಶವ್ವಾಲ್
ಅದೃಷ್ಟ ಸಂಖ್ಯೆ : 3, 5

ಮೇಷ: ಕೂದಲೆಳೆಯಷ್ಟು ತಪ್ಪುಗಳನ್ನು ಮಾಡಿದ್ದಕ್ಕೂ ಹೆಚ್ಚಿನ ಆತಂಕಕ್ಕೆ ಒಳಗಾಗುವ ಪರಿಸ್ಥಿತಿ ಎದುರಾಗಬಹುದು. ಶುಭ ಸಮಾಚಾರಗಳನ್ನು ಕೇಳುವಷ್ಟು ವ್ಯವಧಾನ ಸಹ ಇಲ್ಲದಂತೆ ಆಗುತ್ತದೆ. ವ್ಯಾಪಾರಿಗಳಿಗೆ ಉತ್ತಮ ದಿನ.

ವೃಷಭ: ಬರಬೇಕಾದ ಹಣವೆಲ್ಲವು ನಿಮ್ಮ ಕೈ ಸೇರಿದರೂ ಈಗಿನ ಪರಿಸ್ಥಿತಿಗೆ ಇನ್ನು ಹೆಚ್ಚಿನ ಧನಸಂಪತ್ತು ಬೇಕಾಗುವುದು. ಉದ್ಯೋಗದಲ್ಲಿ ಮೇಲಧಿಕಾರಿಗಳ ಕಿರುಕುಳ ನಿಮ್ಮನ್ನು ನಿಮ್ಮ ಸಂಗಡಿಗರನ್ನು ರೋಸಿಹೋಗುವಂತೆ ಮಾಡುತ್ತದೆ.

ಮಿಥುನ: ಹಾದಿ ತಪ್ಪುತ್ತಿರುವ ಮಕ್ಕಳ ಬಗ್ಗೆ ಎಷ್ಟು ಮೇಲ್ವಿಚಾರಣೆ ನಡೆಸಿದರು ಕಡಿಮೆ ಎಂದೆನಿಸಬಹುದು. ಸಂಗಡಿಗರು ಅಧರ್ಮದ ಮಾರ್ಗದಿಂದ ಹೂಡಿಕೆ ಮಾಡುತ್ತಿದ್ದಾರೇ ಎಂದು ಅನುಭವಕ್ಕೆ ಬರಲಿದೆ.

ಕರ್ಕಾಟಕ: ವಿದ್ಯಾಧಿದೇವತೆಯ ಕೃಪಾಕಟಾಕ್ಷದಿಂದ ಭಾಗವಹಿಸಿದ ಬೌದ್ಧಿಕ ಸ್ಪರ್ಧೆಯಲ್ಲಿ ಉತ್ತಮ ಸ್ಥಾನ ಪಡೆಯುವಿರಿ. ಯೋಗಾಭ್ಯಾಸದಿಂದ ಏಕಾಗ್ರತೆ ಹಾಗು ಚಿತ್ತ ಶುದ್ಧಿ ಮಾಡಿಕೊಳ್ಳುವುದು ಉತ್ತಮ ಮಾರ್ಗವಾಗಿದೆ.

ಸಿಂಹ: ಕೆಲವೊಂದು ಅನಿರೀಕ್ಷಿತ ಘಟನೆಗಳಿಂದಾಗಿ ಇತರರ ಎದುರು ತಲೆತಗ್ಗಿಸಬೇಕಾದ ಪರಿಸ್ಥಿತಿ ಬರುವುದು. ಆತ್ಮಗೌರವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುವ ನಿಮಗೆ-ಅಹಿತಕರ ಘಟನೆ ಮರೆಯಲು ಹೆಚ್ಚಿನ ಸಮಯ ಬೇಕಾಗುವುದು.

ಕನ್ಯಾ: ವೃತ್ತಿಯಲ್ಲಿ ಬಡ್ತಿಯನ್ನು ಬಯಸುವ ನೀವು ಅದರೊಂದಿಗೆ ಸ್ಥಾನ ಬದಲಾವಣೆಗೂ ತಯಾರಿರಬೇಕಾಗುತ್ತದೆ. ಮಗಳು ವಿವಾಹ ವಿಚಾರದಲ್ಲಿ ತೋರುತ್ತಿರುವ ಅಸಡ್ಡೆಯು ಅಸಮಾಧಾನಕ್ಕೆ ಕಾರಣವಾಗುವುದು.

ತುಲಾ: ಪ್ರಾಣಿದಯಾಸಂಘದಲ್ಲಿ ಕೆಲಸ ಮಾಡುತ್ತಿರುವವರಿಗೆ ಇಂದಿನ ಹೃದಯ ವಿದ್ರಾವಕ ಘಟನೆಯು ಅಶ್ರುವನ್ನು ಹಾಕಿಸುತ್ತದೆ. ದ್ಯುತಿತಂತು ಸಾಧನಗಳ ತಯಾರಕ ಹಾಗೂ ಮಾರಾಟಗಾರರಿಗೆ ಲಾಭದಾಯಕ ದಿನವಾಗಿರುತ್ತದೆ.

ವೃಶ್ಚಿಕ: ಮಕ್ಕಳ ಜವಾಬ್ದಾರಿಯನ್ನು ಅಪ್ಪಿತಪ್ಪಿ ಬೇರೆಯವರಿಗೆ ಒಪ್ಪಿಸಲು ಹೋಗದಿರಿ. ಆಪ್ತರು ಹಲವಾರು ಸಲಹೆಗಳನ್ನು ನೀಡಿದರೂ ನಿಮಗೆ ಅದು ಸರಿ ಹೋಗದೆ ಕ್ಷಿಪ್ರವಾದ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಧನು: ಒಂದು ಸುಳ್ಳನ್ನು ಹೇಳಿ ಅದನ್ನು ಸಮರ್ಥಿಸಿಕೊಳ್ಳಲಿಕ್ಕಾಗಿ ಸುಳ್ಳಿನ ದೊಡ್ಡ ಸರಮಾಲೆಗಳನ್ನೆ ಹೇಳಬೇಕಾಗುತ್ತದೆ. ವೃತ್ತಿರಂಗದಲ್ಲಿ ಅನಿಶ್ಚಿತವಾದ ಸ್ಥಾನವು ನಿಮ್ಮ ನಿಷ್ಠೆಯ ನಡೆಯಿಂದಾಗಿ ನಿಶ್ಚಿಯವಾಗುತ್ತದೆ.

ಮಕರ: ಆತುರದಲ್ಲಿ ತಪ್ಪು ನಿರ್ಧಾರ ತೆಗೆದುಕೊಳ್ಳದಂತೆ ಮಗನಿಗೆ ತಿಳಿಸುವುದು ಉತ್ತಮ. ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ. ವ್ಯಾಪಾರಿಗಳಿಗೆ ಸಾಧಾರಣ ಲಾಭವಿರುವುದು. ವೈದ್ಯರ ಸಲಹೆಯನ್ನು ಚಾಚೂ ತಪ್ಪದೆ ಆಚರಿಸಿ.

ಕುಂಭ: ತಂದೆಯ ನಿರ್ಧಾರಗಳಿಗೆ ಗೌರವ ಕೊಡುವುದು ಗೌರವವನ್ನು ವರ್ಧಿಸುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಅಧ್ಯಯನ ಅಗತ್ಯ.ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ.


ಮೀನ: ಹಣಕಾಸಿನ ಪರಿಸ್ಥಿತಿಯು ಆಲೋಚನೆಗಿಂತಲೂ ಮಿಗಿಲಾಗಿ ನಿಯಂತ್ರಣ ತಪ್ಪಿಹೋಗುವುದು. ಸಂಸಾರ ನಿರ್ವಹಣೆಗಾಗಿ ಅಧಿಕ ಹಣ ವ್ಯಯಿಸುವಿರಿ. ಗೃಹ ಕೈಗಾರಿಕೆ ಕೆಲಸಗಳಲ್ಲಿ ಮನೆಯವರ ಪರಿಶ್ರಮ ಸಾರ್ಥಕವೆನಿಸುವುದು.

ಪದಬಂಧ 5316

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಕನ್ನಡಿಗನಿಗೆ ನೀಡಿದ ಟ್ರೈನಿಂಗ್! (4)
3. ಸುಗಂಧ ಲೇಪನವಿದು (4)
5. ಮಿತಿಗೆ ಒಳಪಟ್ಟಿದ್ದು (3)
6. ಬೇಡ ಇಲ್ಲಿದ್ದಾನೆ (4)
8. ರಕ್ತವಿಲ್ಲಿ ವಿರಳವಾಗಿ ಕಾಣುತ್ತಿದೆ (3)
10. ಪಾಕ ಮಾಡುವಾಗ ಕುಡಿದ ಷರಬತ್ತು (3)
11. ಮಳೆಯಲ್ಲಿರುವ ಸ್ತ್ರೀ (3)
12. ಒಳ್ಳೆಯ ದಿನವಿದು (3)
14. ಕೂಡುವ ಲೆಕ್ಕವಿಲ್ಲಿ ತಿರುವುಮುರುವಾಗಿದೆ (4)
17. ನಯವಾಗಿ ಬಂದಿರುವ ನಮ್ರತೆ (3)
18. ಮೊಸರುಮುಂತಾದವುಗಳನ್ನುಕಡೆಯುವ-ಕೋಲು (4)
19. ನರನು ಮಾಡಿದ ನಮನ (4)

ಮೇಲಿಂದ ಕೆಳಕ್ಕೆ
1. ತಿರುಗಿ ನಿಂತಿರುವ ಹೆಂಗಸು (3)
2. ಪಾವತಿಪತ್ರವಿಲ್ಲಿ ಉಲ್ಟಾ ಆಗಿದೆ (3)
3. ವ್ಯತ್ಯಾಸವು ಈ ತರ ಬಂದಿದೆ (3)
4. ಗಮ್ಮತ್ತು ಇರುವಾಗ ತೋರಿದ ದರ್ಪ (2)
7. ಈ ರೀತಿ ಕೋಮಲವಾಗಿರು (5)
9. ಕುಂಟಣಿಗನನ್ನು ಹೀಗೂ ಕರೆವರು (5)
13. ನಲಿಯುತ್ತಿರುವ ಕೇಕಿ (3)
14. ತಿರುಗಿಸಿದರೂ ಇದು ಕಣ್ಣೇ (3)
15. ಸಾರವುಳ್ಳ ಕುಟುಂಬ (3)
16. ಶುನಕದ ಹತ್ತಿರವಿರುವ ಗಿಳಿ (2)



5315ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗರಾಪ 4.ಪಂಡಿತ
6.ಲಾಭಬಡುಕ 7.ರಸ
9.ಕಡ 10.ಸರ
11.ಟಆ 16.ನಯವಂಚಕ
17.ನಡುಕ 18.ರಿವಾಜು

ಮೇಲಿಂದ ಕೆಳಕ್ಕೆ:
1.ಗತ್ಯಂತರ 2.ಪ್ರಲಾಪ
3.ಸಿಂಬಳ 4.ಪಂಕಜ
5.ತಡಬಡ 8.ಸವಾರ
9.ಕರಟ 10.ಸಮಾಧಾನ
12.ಆಜುಬಾಜು 13.ಜನಕ
14.ಲವಂಗ 15.ಮಂಕರಿ

ಸುಡೊಕು 5702


	9			5			2	1
3		5	2		1	7	9	
	1			9				5
5		7			9	1		
	6			2			8	
9		8	6			5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5701 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,315
ಇಂದಿನ ಅಂತ್ಯ	18,297
▼	18
ದಿನದ ಕನಿಷ್ಠ	18,270

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1660)
ಸೋಯಾ (ರಿಫೈನ್ಡ್)	₹970 (985)
ಸೂರ್ಯಕಾಂತಿ (ರಿಫೈನ್ಡ್)	₹985 (985)
ಪಾಮೋಲಿನ್	₹935 (948)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹154.50
ಆರ್‌ಎಸ್‌ಎಸ್-5	₹148.50
ಗುಡ್ ಲಾಟ್	₹133

ಮೂಡಿಗೆರೆ ಕಾಫಿ (50 ಕೆಜಿಗೆ)

ಎಪಿ	₹15300
ಎಸಿ	₹7980
ಆರ್‌ಪಿ	₹10400
ಆರ್‌ಸಿ	₹5860

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಹುಳಿಯಾರು	₹9000-9610
ಅರಸೀಕೆರೆ	---
ಕೆ.ಆರ್. ಪೇಟೆ	₹8500-8500

‘ಅಂದಾಜನ್ನು ಮೀರಲಿದೆ ಗೋಧಿ ಉತ್ಪಾದನೆ’



ನವದೆಹಲಿ (ಪಿಟಿಐ): ಗೋಧಿ ಉತ್ಪಾದನೆಯು 2022–23ರ ಬೆಳೆ ವರ್ಷದಲ್ಲಿ (ಜುಲೈ-ಜೂನ್) ಸರ್ಕಾರ ಮಾಡಿರುವ ಅಂದಾಜನ್ನು ಮೀರುವ ಸಾಧ್ಯತೆ ಇದೆ ಎಂದು ಕೃಷಿ ಆಯುಕ್ತ ಪಿ.ಕೆ. ಸಿಂಗ್ ಗುರುವಾರ ಹೇಳಿದ್ದಾರೆ.

2022–23ರ ಬೆಳೆ ವರ್ಷಕ್ಕೆ ದಾಖಲೆಯ 11.21 ಕೋಟಿ ಟನ್ ಗೋಧಿ ಉತ್ಪಾದನೆ ಆಗುವ ಅಂದಾಜನ್ನು ಸರ್ಕಾರ ಮಾಡಿದೆ. ಅತಿಯಾದ ತಾಪಮಾನವು ಕೆಲವು ಭಾಗಗಳಲ್ಲಿ ಗೋಧಿಯ ಗುಣಮಟ್ಟದ ಮೇಲೆ ಪರಿಣಾಮ ಬೀರಿರುವ ಆತಂಕದ ನಡುವೆಯೇ ಗೋಧಿ ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಇಳುವರಿ ಹೆಚ್ಚಾಗಿರುವುದರಿಂದ ಅಂದಾಜು ಮೀರಿ ಉತ್ಪಾದನೆ ಆಗುವ ನಿರೀಕ್ಷೆ ಮಾಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

2020–21ನೇ ಬೆಳೆ ವರ್ಷದಲ್ಲಿ 10.95 ಕೋಟಿ ಟನ್ ಗೋಧಿ ಉತ್ಪಾದನೆ ಆಗಿತ್ತು.

ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದಲ್ಲಿ ಇಳುವರಿ ಸುಧಾರಿಸಿದೆ. ದೇಶದ ಆಹಾರ ಭದ್ರತೆಯ ದೃಷ್ಟಿಯಿಂದ ಸರ್ಕಾರವು 2023–24ರ ಮಾರುಕಟ್ಟೆ ವರ್ಷದಲ್ಲಿ ರೈತರಿಂದ ನೇರವಾಗಿ 2.52 ಕೋಟಿ ಟನ್ ಗೋಧಿ ಖರೀದಿಸಿದೆ.

ಸಿರಿವಂತರ ಆಕರ್ಷಿಸಿದ ಎಫ್‌.ಡಿ.

ಡೆಟ್ ಫಂಡ್‌ಗಳಿಗೆ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಪ್ರಯೋಜನ ರದ್ದು

ನವದೆಹಲಿ (ಪಿಟಿಐ): ಡೆಟ್ ಮ್ಯೂಚುವಲ್ ಫಂಡ್ ಯೋಜನೆಗಳಿಗೆ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆಯ (ಎಲ್‌ಟಿಜಿಸಿ) ಪ್ರಯೋಜನ ಹಿಂಪಡೆದಿರುವ ಕಾರಣ, ಸಿರಿವಂತರು (ಎಚ್‌ಎನ್‌ಐ) ಅಲ್ಲಿ ಹೂಡಿಕೆ ಮಾಡುವುದಕ್ಕಿಂತಲೂ ಬ್ಯಾಂಕ್‌ನ ನಿಶ್ಚಿತ ಠೇವಣಿಗಳಲ್ಲಿ (ಎಫ್‌.ಡಿ.) ಹಣ ತೊಡಗಿಸಲು ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ವರದಿಯು ತಿಳಿಸಿದೆ.

ಬ್ಯಾಂಕ್ ಠೇವಣಿಗಳ ಬಡ್ಡಿದರವು ಕಳೆದ ಒಂದು ವರ್ಷದಲ್ಲಿ ಗಣನೀಯವಾಗಿ ಹೆಚ್ಚಾಗಿದೆ.



ಇದು ಸಹ ಸಿರಿವಂತರನ್ನು ಡೆಟ್ ಫಂಡ್‌ಗಳ ಬದಲಾಗಿ ಎಫ್‌.ಡಿ.ಯತ್ತ ಮುಖಮಾಡುವಂತೆ ಪ್ರೇರೇಪಿಸಿದೆ ಎಂದು ಮೋತಿಲಾಲ್ ಓಸ್ವಾಲ್ ಇನ್‌ಸ್ಟಿಟ್ಯೂಷನಲ್ ಈಕ್ವಿಟೀಸ್‌ನ ಬಿಎಫ್‌ಎಸ್‌ಐ ರಿಸರ್ಚ್‌ನ ಮುಖ್ಯಸ್ಥ ನಿತಿನ್ ಅಗರ್ವಾಲ್ ತಿಳಿಸಿದ್ದಾರೆ.

₹1 ಸಾವಿರ ಕೋಟಿಗೂ ಅಧಿಕ ನಿರ್ವಹಣಾ ಸಂಪತ್ತು ಹೊಂದಿರುವ ಮ್ಯೂಚುವಲ್ ಫಂಡ್ ವಿತರಕರು ಮತ್ತು ಸಾಂಸ್ಥಿಕ ಮಾರಾಟ ಪ್ರತಿನಿಧಿಗಳಿಂದ ಮಾಹಿತಿ ಸಂಗ್ರಹಿಸಿ ಈ ವರದಿ ಸಿದ್ಧಪಡಿಸಲಾಗಿದೆ ಎಂದು ಅದು ಹೇಳಿದೆ. ವ್ಯವಸ್ಥಿತ ಹೂಡಿಕೆ ಯೋಜನೆಗಳಲ್ಲಿ (ಎಸ್‌ಐಪಿ) ಹೆಚ್ಚಿನ ಮೊತ್ತದ ಹೂಡಿಕೆಯನ್ನು ಸಿರಿವಂತರು ಮಾಡಿಲ್ಲ. ಏಕೆಂದರೆ ಕಳೆದ ಮೂರು ವರ್ಷಗಳಲ್ಲಿ ಎಸ್‌ಐಪಿ ಮೂಲಕ ಬಂದಿರುವ ಗಳಿಕೆಯು ಬಹಳ ಕಡಿಮೆ ಪ್ರಮಾಣದ್ದಾಗಿದೆ.

ಏಪ್ರಿಲ್ 1ರ ನಂತರ, ಡೆಟ್ ಮ್ಯೂಚುವಲ್ ಫಂಡ್ ಹೂಡಿಕೆಗಳಿಂದ ಸಿಗುವ ಲಾಭಕ್ಕೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ವಿಧಿಸಲಾಗುತ್ತಿದೆ. ಇದರಿಂದಾಗಿ ಸಿರಿವಂತರು ಡೆಟ್ ಫಂಡ್‌ಗಳ ಕಡೆಗೆ ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ.

ತಗ್ಗಿದ ಒಳಹರಿವು: ಏಪ್ರಿಲ್ ತಿಂಗಳಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿನ ಒಳಹರಿವು ಶೇಕಡ 68ರಷ್ಟು ಕಡಿಮೆಯಾಗಿದ್ದು, ₹6,480 ಕೋಟಿಗೆ ತಲುಪಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್‌ಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ. ಮಾರ್ಚ್ ತಿಂಗಳಲ್ಲಿ ಈಕ್ವಿಟಿ ಫಂಡ್‌ಗಳಲ್ಲಿ ₹20,534 ಕೋಟಿ ಹೂಡಿಕೆ ಆಗಿತ್ತು.

ಮುಂಬೈ ಧಾರಣೆ

ಶೇಂಗಾ

11–5-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11300-11400
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1670)
ಒಂದು ವಾರದ ಡೆಲಿವರಿ	1655 (1665)
ಸೋಯಾ ಕಚ್ಚಾ	860 (872)
ಪಾಮ್ ವಾರದ ಡೆಲಿವರಿ	933 (946)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
61,300 (61,500)
ಬೆಳ್ಳಿ ಕೆ.ಜಿ 74,650 (76,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಂಡವಾಳ ಸಂಗ್ರಹಿಸಲಿರುವ ‘ಅದಾನಿ’

ನವದೆಹಲಿ (ಪಿಟಿಐ): ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ಷೇರು ಮಾರಾಟದ ಮೂಲಕ ₹20 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ. ಸಮೂಹದ ಎರಡು ಕಂಪನಿಗಳ ಆಡಳಿತ ಮಂಡಳಿಗಳು ಶನಿವಾರ ಸಭೆ ಸೇರಲಿದ್ದು, ಈ ಕುರಿತು ತೀರ್ಮಾನ ಕೈಗೊಳ್ಳಲಿವೆ.

‘ಅದಾನಿ ಎಂಟರ್‌ಪ್ರೈಸಸ್‌ನ ಆಡಳಿತ ಮಂಡಳಿ ಸಭೆಯು ಷೇರು ಮಾರಾಟ ಮೂಲಕ ಬಂಡವಾಳ ಸಂಗ್ರಹಿಸುವ ಬಗ್ಗೆ ಪರಿಶೀಲನೆ ನಡೆಸಿ, ಅನುಮೋದನೆ ನೀಡಲಿದೆ’ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ಕೂಡ ಇದೇ ಬಗೆಯ ಮಾಹಿತಿಯನ್ನು ಷೇರುಪೇಟೆಗೆ ನೀಡಿದೆ. ಆದರೆ, ನಿರ್ದಿಷ್ಟವಾಗಿ ಎಷ್ಟು ಬಂಡವಾಳ ಸಂಗ್ರಹಿಸುವ ಉದ್ದೇಶ ಇದೆ ಎಂಬುದನ್ನು ಎರಡೂ ಕಂಪನಿಗಳು ತಿಳಿಸಿಲ್ಲ.

ಸಮೂಹವು ಗರಿಷ್ಠ ₹20 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಗುರಿ ಹೊಂದಿರಬಹುದು ಎಂದು ಮೂಲಗಳು ಹೇಳಿವೆ. ಮಧ್ಯಪ್ರಾಚ್ಯ ಹಾಗೂ ಯುರೋಪಿನ ಹೂಡಿಕೆದಾರರು, ಹೆಚ್ಚು ಹಣ ತೊಡಗಿಸಲು ಆಸಕ್ತಿ ತೋರಿಸಿದ್ದಾರೆ ಎಂದು ಗೊತ್ತಾಗಿದೆ.

ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಎಫ್‌ಪಿಒ ಮೂಲಕ ₹20 ಸಾವಿರ ಕೋಟಿ ಸಂಗ್ರಹಿಸಲು ಮೂರು ತಿಂಗಳ ಹಿಂದೆ ಯತ್ನಿಸಿತ್ತು. ಎಫ್‌ಪಿಒ ಮೂಲಕ ಮಾರಾಟಕ್ಕೆ ಇರಿಸಿದ್ದ ಅಷ್ಟೂ ಷೇರುಗಳಿಗೆ ಬಿಡ್ ಸಲ್ಲಿಕೆಯಾಗಿತ್ತಾದರೂ, ಕಂಪನಿಯು ಹಿಂಡನ್‌ಬರ್ಗ್ ರಿಸರ್ಚ್‌ನ ವರದಿ ಹಿನ್ನೆಲೆಯಲ್ಲಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿತ್ತು.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆ ಮಾಡಿರುವ ಎಲ್ಲ ಆರೋಪಗಳನ್ನು ಅದಾನಿ ಸಮೂಹ ಅಲ್ಲಗಳೆದಿದೆ. ಈಗ ಸಮೂಹವು ಹೂಡಿಕೆದಾರರು ಮತ್ತು ಮಾರುಕಟ್ಟೆಯ ವಿಶ್ವಾಸವನ್ನು ಮರಳಿ ಗಳಿಸಲು ರೋಡ್‌ಶೋಗಳನ್ನು ಆಯೋಜಿಸುತ್ತಿದೆ, ಸಾಲಗಳನ್ನು ಅವಧಿಗೆ ಮೊದಲೇ ಮರುಪಾವತಿ ಮಾಡುತ್ತಿದೆ. ಈಗ ಸಮೂಹವು ಸಂಗ್ರಹಿಸಲು ಉದ್ದೇಶಿಸಿರುವ ಬಂಡವಾಳವನ್ನು ವಹಿವಾಟು ವಿಸ್ತರಣೆಗೆ ಬಳಸಿಕೊಳ್ಳಲಿದೆ.

ಸೋಯಾ, ಸೂರ್ಯಕಾಂತಿ ಎಣ್ಣೆಗೆ ಇಲ್ಲ ಸುಂಕ

ನವದೆಹಲಿ (ಪಿಟಿಐ): ಕಚ್ಚಾ ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆಯನ್ನು ಯಾವುದೇ ಸುಂಕ ಇಲ್ಲದೇ ಜೂನ್ 30ರವರೆಗೆ ಆಮದು ಮಾಡಿಕೊಳ್ಳಬಹುದು ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ. ಇದು ಕೆಲವೊಂದು ಷರತ್ತುಗಳಿಗೆ ಒಳಪಟ್ಟಿದೆ ಎಂದೂ ತಿಳಿಸಿದೆ.

ಕಸ್ಟಮ್ಸ್ ಸುಂಕ ಹಾಗೂ ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ಇಲ್ಲದೇ ಆಮದು ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. 2022–23ನೇ ಹಣಕಾಸು ವರ್ಷಕ್ಕೆ ಟಿಆರ್‌ಕ್ಯೂ ಪರವಾನಗಿ ಪಡೆದಿರುವ ಆಮದುದಾರರಿಗೆ ಮಾತ್ರವೇ ಈ ಸುಂಕ ವಿನಾಯಿತಿ ಅನ್ವಯಿಸಲಿದೆ ಎಂದು ತಿಳಿಸಿದೆ.

ದ. ಆಫ್ರಿಕಾದಲ್ಲಿ ಬಳಸಲಾಗಿತ್ತು ಎಂಬ ಕಾಂಗ್ರೆಸ್ ಆರೋಪ

‘ಕರ್ನಾಟಕದಲ್ಲಿ ಹೊಸ ಇವಿಎಂ ಬಳಕೆ’

ನವದೆಹಲಿ (ಪಿಟಿಐ): ಕರ್ನಾಟಕ ವಿಧಾನಸಭೆಗೆ ಮೇ 10ರಂದು ನಡೆದ ಚುನಾವಣೆಯಲ್ಲಿ ಬಳಸಲಾದ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಈ ಮೊದಲು ದಕ್ಷಿಣ ಆಫ್ರಿಕಾದಲ್ಲಿ ಉಪಯೋಗಿಸಲಾಗಿತ್ತು ಎಂಬ ಕಾಂಗ್ರೆಸ್ ಪಕ್ಷದ ಆರೋಪವನ್ನು ಚುನಾವಣಾ ಆಯೋಗ ಗುರುವಾರ ತಳ್ಳಿಹಾಕಿದೆ.

ಈ ಕುರಿತು ಪಕ್ಷದ ಮುಖಂಡ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಪತ್ರ ಬರೆದಿರುವ ಆಯೋಗ, ‘ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಇಸಿಐಎಲ್) ತಯಾರಿಸಿರುವ ಹೊಸ ಇವಿಎಂ ಗಳನ್ನು ಕರ್ನಾಟಕದಲ್ಲಿ ನಡೆದ ಚುನಾವಣೆಯಲ್ಲಿ ಬಳಕೆ ಮಾಡಲಾಗಿದೆ’ ಎಂದು ವಿವರಿಸಿದೆ. ‘ಇವಿಎಂಗಳ ಕುರಿತಾಗಿ ತಪ್ಪು ಮಾಹಿತಿ ಹಬ್ಬಿಸುತ್ತಿರುವ ಮೂಲಗಳನ್ನು ಪಕ್ಷವು ಬಹಿರಂಗಪಡಿಸಬೇಕು. ಈ ಕುರಿತು ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ಮೇ 15ರ ಸಂಜೆ 5 ಗಂಟೆ ಒಳಗೆ ಕಾಂಗ್ರೆಸ್ ದೃಢಪಡಿಸಬೇಕು’ ಎಂದೂ ಆಯೋಗ ಹೇಳಿದೆ.



‘ಮತಯಂತ್ರಗಳನ್ನು ದಕ್ಷಿಣ ಆಫ್ರಿಕಾಕ್ಕೆ ಕಳುಹಿಸಿರಲಿಲ್ಲ. ಆ ರಾಷ್ಟ್ರವು ಚುನಾವಣೆಯಲ್ಲಿ ಮತ ಯಂತ್ರಗಳನ್ನು ಬಳಕೆ ಮಾಡುವುದೂ ಇಲ್ಲ’ ಎಂದು ಆಯೋಗ ಸ್ಪಷ್ಟಪಡಿಸಿದೆ.

‘ಇಸಿಐಎಲ್ ತಯಾರಿಸಿರುವ ಹೊಸ ಮತಯಂತ್ರಗಳನ್ನು ಮಾತ್ರ ಕರ್ನಾಟಕದಲ್ಲಿ ಬಳಕೆ ಮಾಡಲಾಗುತ್ತದೆ ಎಂಬ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ಮಾಹಿತಿ ಇತ್ತು. ಇವಿಎಂ ಗಳ ಸಾಗಣೆ ಹಾಗೂ ಅವುಗಳ ಬಳಕೆಯ ಪ್ರತಿ ಹಂತದಲ್ಲಿಯೂ ಕಾಂಗ್ರೆಸ್ ಪ್ರತಿನಿಧಿಗಳು ಇದ್ದರು’ ಎಂದು ಆಯೋಗ ಹೇಳಿದೆ.

‘ದಕ್ಷಿಣ ಆಫ್ರಿಕಾದಲ್ಲಿ ಬಳಸಲಾಗಿದ್ದ ಮತಯಂತ್ರಗಳನ್ನೇ ಕರ್ನಾಟಕ ಚುನಾವಣೆಯಲ್ಲಿ ಮರು ಬಳಕೆ ಮಾಡಲಾಗುತ್ತಿದೆ’ ಎಂಬ ಬಗ್ಗೆ ಆತಂಕ ವ್ಯಕ್ತಪಡಿಸಿ ಕಾಂಗ್ರೆಸ್ ಪಕ್ಷವು ಮೇ 8ರಂದು ಆಯೋಗಕ್ಕೆ ಪತ್ರ ಬರೆದು, ಕೆಲ ಸ್ಪಷ್ಟೀಕರಣಗಳನ್ನು ಕೇಳಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಕೋಕ	21099-32899	ರಾಶಿ	44899-46899
ಬಂಟ್ವಾಳ		ಕೆಂಪುಗೋಟು		ತಟ್ಟಿಬೆಟ್ಟೆ	36499-42169
ಕೋಕ	12500-25000		25111-35299	**ಶಿರಸಿ**	
ಹೊಸತು	27500-40000	ರಾಶಿ	34299-48629	ಬೆಟ್ಟೆ	38389-42899
ಹಳತು	48000-53000	ಸಿಪ್ಪೆಗೋಟು	6969-21270	ಬಿಳಿಗೋಟು	23699-32011
ಕಾರ್ಕಳ		**ಶಿವಮೊಗ್ಗ**		ಚಾಲಿ	35096-37527
ಹೊಸತು	30000-39500	ಬೆಟ್ಟೆ	47500-52910	ಕೆಂಪುಗೋಟು	
ಹಳತು	40000-53000	ಗೊರಬಲು	18000-34659		32599-32599
ಕುಮಟಾ		ರಾಶಿ	33876-49099	ರಾಶಿ	44208-45999
ಚಿಪ್ಪು	28219-33169	ಸರಕು	45159-75009	**ಯಲ್ಲಾಪುರ**	
ಕೋಕ	23299-29699	**ಸಿದ್ದಾಪುರ**		ಬಿಳಿಗೋಟು	28299-34311
ಹಳೆಚಾಲಿ	36560-39000	ಬಿಳಿಗೋಟು	29109-31409	ಚಾಲಿ	34030-39278
ಹೊಸಚಾಲಿ	34896-37079	ಚಾಲಿ	34899-36769	ಕೋಕ	18009-30169
ಸಾಗರ		ಕೋಕ	26699-30899	ಕೆಂಪುಗೋಟು	31011-33012
ಬಿಳಿಗೋಟು	27001-32199	ಕೆಂಪುಗೋಟು		ರಾಶಿ	42090-49899
ಚಾಲಿ	32099-36699		29899-30218	ತಟ್ಟಿಬೆಟ್ಟೆ	38870-44080

ಇ–ಇನ್‌ವಾಯ್ಸ್: ವಾರ್ಷಿಕ ವಹಿವಾಟಿನ ಮಿತಿ ಇಳಿಕೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಅಡಿ ನೋಂದಣಿ ಆಗಿರುವ, ವಾರ್ಷಿಕವಾಗಿ ₹5 ಕೋಟಿಗೂ ಹೆಚ್ಚಿನ ವಹಿವಾಟು ನಡೆಸುವ ಉದ್ದಿಮೆಗಳು ಬಿ2ಬಿ ವಹಿವಾಟಿಗೆ ಇ-ಇನ್‌ವಾಯ್ಸ್ ಸೃಷ್ಟಿಸುವುದು ಆಗಸ್ಟ್ 1ರಿಂದ ಕಡ್ಡಾಯ.

ಈಗ ವಾರ್ಷಿಕ ₹10 ಕೋಟಿಗಿಂತ ಹೆಚ್ಚಿನ ಮೊತ್ತದ ವಹಿವಾಟು ನಡೆಸುವ ಉದ್ದಿಮೆಗಳು ಬಿ2ಬಿ ವಹಿವಾಟುಗಳಿಗೆ ಇ-ಇನ್‌ವಾಯ್ಸ್ ಸೃಷ್ಟಿಸಬೇಕಿದೆ. ಈ ಕುರಿತು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಆರಂಭಿಕ ಹಂತದಲ್ಲಿ ವಾರ್ಷಿಕ ₹500 ಕೋಟಿಗೂ ಅಧಿಕ ಮೊತ್ತದ ವಹಿವಾಟುಗಳಿಗೆ ಇ-ಇನ್‌ವಾಯ್ಸ್ ಕಡ್ಡಾಯವಾಗಿತ್ತು. ಮೂರು ವರ್ಷಗಳಲ್ಲಿ ವಾರ್ಷಿಕ ವಹಿವಾಟು ಮಿತಿಯನ್ನು ₹5 ಕೋಟಿಗೆ ತಗ್ಗಿಸಲಾಗಿದೆ.

ಇ-ಇನ್‌ವಾಯ್ಸ್ ಅನ್ನು ಹಂತ ಹಂತವಾಗಿ ಜಾರಿ ಮಾಡುತ್ತಿರುವುದರಿಂದ ಪ್ರಕ್ರಿಯೆಯಲ್ಲಿನ ತೊಡಕುಗಳು ಕಡಿಮೆ ಆಗಲಿದೆ. ನಿಯಮ ಅನುಸರಣೆಯಲ್ಲಿ ಸುಧಾರಣೆ ಕಂಡುಬರಲಿದ್ದು, ವರಮಾನವೂ ಹೆಚ್ಚಾಗಲಿದೆ ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಹಿರಿಯ ಪಾಲುದಾರ ರಜತ್ ಮೋಹನ್ ಹೇಳಿದ್ದಾರೆ.

ಎಂಎಸ್‌ಎಂಇ ವಲಯವನ್ನು ಇ-ಇನ್‌ವಾಯ್ಸ್ ವ್ಯವಸ್ಥೆ ಅಡಿ ತರುವುದರಿಂದ ಒಟ್ಟಾರೆಯಾಗಿ ಉದ್ಯಮಕ್ಕೆ ಪ್ರಯೋಜನ ಆಗಲಿದೆ. ವೆಚ್ಚ ಕಡಿಮೆ ಆಗಲಿದೆ ಎಂದು ಮೋಹನ್ ತಿಳಿಸಿದ್ದಾರೆ.

ಅಸ್ಸಾಂ: ನಗದು ರಹಿತ ಆರೋಗ್ಯ ಯೋಜನೆ

ಗುವಾಹಟಿ (ಪಿಟಿಐ): ಅಸ್ಸಾಂ ಸರ್ಕಾರವು ಪ್ರತಿ ಕುಟುಂಬಕ್ಕೆ ವರ್ಷಕ್ಕೆ ₹ 5 ಲಕ್ಷದವರೆಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ ನೀಡುವ ಆರೋಗ್ಯ ಯೋಜನೆಯನ್ನು ಬುಧವಾರ ಪ್ರಾರಂಭಿಸಿದೆ.

ಆರಂಭದಲ್ಲಿ 26 ಲಕ್ಷ ಕುಟುಂಬಗಳನ್ನು ಈ ಯೋಜನೆ ಒಳಗೊಂಡಿರಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸರ್ಕಾರ ಎರಡು ವರ್ಷಗಳನ್ನು ಪೂರೈಸಿರುವ ಸಂದರ್ಭದಲ್ಲಿ, ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ‘ಆಯುಷ್ಮಾನ್ ಅಸೋಮ್ - ಮುಖ್ಯಮಂತ್ರಿ ಜನ್ ಆರೋಗ್ಯ ಯೋಜನೆ’ಗೆ ಚಾಲನೆ ನೀಡಿದರು.

ಮ್ಯಾನ್‌ಕೈಂಡ್ ಫಾರ್ಮಾ ಆಸ್ತಿ ಮೇಲೆ ಐಟಿ ದಾಳಿ

ನವದೆಹಲಿ (ಪಿಟಿಐ): ತೆರಿಗೆ ವಂಚನೆ ಆರೋಪದ ಮೇಲೆ ಮ್ಯಾನ್‌ಕೈಂಡ್ ಫಾರ್ಮಾ ಸಂಸ್ಥೆಯ ಆವರಣದಲ್ಲಿ ಆದಾಯ ತೆರಿಗೆ (ಐಟಿ) ಇಲಾಖೆಯು ಗುರುವಾರ ಶೋಧ ಕಾರ್ಯಾಚರಣೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿ ಮತ್ತು ಹತ್ತಿರದ ಪ್ರದೇಶಗಳಲ್ಲಿಯ ಸಂಸ್ಥೆಗೆ ಸೇರಿದ ಆಸ್ತಿಪಾಸ್ತಿಗಳಲ್ಲಿ ಶೋಧ ನಡೆಸಲಾಗಿದೆ. ಹಲವಾರು ದಾಖಲೆಗಳನ್ನು ಪರಿಶೀಲಿಸಲಾಗಿದೆ ಮತ್ತು ಹಲವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸಂಸ್ಥೆಯು ಮಂಗಳವಾರವಷ್ಟೇ ಷೇರುಪೇಟೆಗೆ ಕಾಲಿಟ್ಟಿತ್ತು. 1991ರಲ್ಲಿ ಸ್ಥಾಪನೆಯಾದ ಮ್ಯಾನ್‌ಕೈಂಡ್ ಫಾರ್ಮಾ, ದೇಶದ ಪ್ರಮುಖ ಔಷಧ ತಯಾರಿಕಾ ಸಂಸ್ಥೆಗಳಲ್ಲಿ ಒಂದು.



ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹900-1300
ಮಧ್ಯಮ	₹600-800
ಸಣ್ಣ	₹300-500

ಪೊಲೀಸ್ ಜಿಲ್ಲೆಗಳಲ್ಲಿ ಡ್ರೋನ್ ಕಣ್ಗಾವಲು: ಕೇರಳದ ಹೆಗ್ಗಳಿಕೆ

ತಿರುವನಂತಪುರ (ಪಿಟಿಐ): ಎಲ್ಲ ಪೊಲೀಸ್ ಜಿಲ್ಲೆಗಳಲ್ಲಿ (ಪೊಲೀಸ್ ಪಡೆಗಳು ಗಸ್ತು ತಿರುಗುವ ಭೌಗೋಳಿಕ ಪ್ರದೇಶಗಳ ವಿಭಾಗದ ಒಂದು ರೂಪ) ಡ್ರೋನ್ ಕಣ್ಗಾವಲು ವ್ಯವಸ್ಥೆ ಹೊಂದಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕೇರಳ ಪಾತ್ರವಾಗಿದೆ.

ಗುರುವಾರ ಇಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಎಲ್ಲ ಪೊಲೀಸ್ ಜಿಲ್ಲೆಗಳಿಗೂ ಡ್ರೋನ್‌ಗಳನ್ನು ವಿತರಿಸಿ, ವಿಶೇಷ ತರಬೇತಿ ಪಡೆದ ಡ್ರೋನ್ ಪೈಲಟ್‌ಗಳಿಗೆ ಚಾಲನಾ ಪರವಾನಗಿ ಪತ್ರ ನೀಡಿದರು.

ಇದೇ ವೇಳೆ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಡ್ರೋನ್ ವಿರೋಧಿ ತಂತ್ರಜ್ಞಾನವನ್ನೂ ಅನಾವರಣಗೊಳಿಸಿದ ಅವರು, ‘ಪೊಲೀಸ್ ಪಡೆಯನ್ನು ಆಧುನೀಕರಣಗೊಳಿಸುವುದರಲ್ಲಿ ಕೇರಳ ಮುಂಚೂಣಿಯಲ್ಲಿದೆ. ಹಾಗೆಯೇ, ಡ್ರೋನ್‌ಗಳ ಬಳಕೆ ಹೆಚ್ಚಾಗುತ್ತಿರುವ ಸಮಾಜದಲ್ಲಿ ಡ್ರೋನ್ ವಿರೋಧಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದೂ ಸಹ ಮುಖ್ಯವಾಗಿದೆ’ ಎಂದರು.

ಬಳಿಕ ಮಾತನಾಡಿದ ಕೇರಳದ ಸೈಬರ್‌ಡೊಮ್‌ನ ಪ್ರಮುಖಾಧಿಕಾರಿಯೂ ಆಗಿರುವ ಪೊಲೀಸ್ ಮಹಾನಿರ್ದೇಶಕ ಪಿ. ಪ್ರಕಾಶ್, ‘ಈ ಡ್ರೋನ್‌ಗಳನ್ನು ಕಾನೂನು ಮತ್ತು ಸುವ್ಯವಸ್ಥೆಗಾಗಿ ಹಾಗೂ ವಿಪತ್ತು ನಿರ್ವಹಣಾ ಸಂದರ್ಭದಲ್ಲಿ ಬಳಸಲಾಗುತ್ತದೆ. ಕಠಿಣ ಸಂದರ್ಭಗಳಲ್ಲಿ ಹಾಗೂ ದುರ್ಗಮ ಪ್ರದೇಶಗಳಲ್ಲಿ ಬಳಕೆ ಮಾಡಲು ನಮ್ಮ ಡ್ರೋನ್‌ಗಳು ಸಹಾಯಕವಾಗುತ್ತವೆ. ಈ ನಿಟ್ಟಿನಲ್ಲಿ ನಮ್ಮ ಸಿಬ್ಬಂದಿಗೆ ವಿಶೇಷ ತರಬೇತಿ ಕೊಡಿಸಲಾಗಿದೆ’ ಎಂದರು.

‘ಹಾಗೆಯೇ ಡ್ರೋನ್ ವಿರೋಧಿ ತಂತ್ರಜ್ಞಾನವು 5 ಕಿ.ಮೀ ವ್ಯಾಪ್ತಿಯಲ್ಲಿನ ಯಾವುದೇ ಡ್ರೋನ್ ಅನ್ನು ಪತ್ತೆಹಚ್ಚಿ ನಾಶಗೊಳಿಸುವ ಅಥವಾ ವಶಪಡಿಸಿಕೊಳ್ಳುವ ಸಾಮರ್ಥ್ಯ ಹೊಂದಿದೆ’ ಎಂದೂ ಅವರು ಮಾಹಿತಿ ನೀಡಿದರು.

25 ಪೊಲೀಸ್ ಸಿಬ್ಬಂದಿಗೆ ವಿಶೇಷ ತರಬೇತಿ: ಡ್ರೋನ್ ಕುರಿತ ವಿಶೇಷ ತರಬೇತಿ ಪಡೆಯಲು ಕೇರಳವು ತನ್ನ 25 ಪೊಲೀಸ್ ಸಿಬ್ಬಂದಿಯನ್ನು ಮದ್ರಾಸ್‌ನ ಐಐಟಿಗೆ ಕಳುಹಿಸಿತ್ತು. ಅಲ್ಲದೆ, ಇತರ 20 ಸಿಬ್ಬಂದಿಗೆ ಕೇರಳದ ಡ್ರೋನ್ ಪ್ರಯೋಗಾಲಯದಲ್ಲಿ ಡ್ರೋನ್ ಕುರಿತ ಪ್ರಾಥಮಿಕ ತರಬೇತಿ ನೀಡಲಾಗಿದೆ.

‘ರೈಲ್ವೆ ನೇಮಕಾತಿ: ಅಗ್ನಿವೀರರಿಗೆ ಶೇ 15 ಮೀಸಲಾತಿ’

ನವದೆಹಲಿ (ಪಿಟಿಐ): ವಿವಿಧ ಇಲಾಖೆಗಳಲ್ಲಿನ ನಾನ್ ಗೆಜೆಟೆಡ್ ಹುದ್ದೆಗಳ ಭರ್ತಿಗೆ ನಡೆಯುವ ನೇರ ನೇಮಕಾತಿಯಲ್ಲಿ ರೈಲ್ವೆಯು ಅಗ್ನಿವೀರರಿಗೆ ಶೇ 15ರಷ್ಟು ಒಟ್ಟು ಮೀಸಲಾತಿ, ವಯೋಮಿತಿಯಲ್ಲಿ ಸಡಿಲಿಕೆ ಹಾಗೂ ದೈಹಿಕ ಪರೀಕ್ಷೆಯಿಂದ ವಿನಾಯಿತಿ ನೀಡಲಿದೆ ಎಂದು ಮೂಲಗಳು ಗುರುವಾರ ಹೇಳಿವೆ.

ಈ ಸಂಬಂಧ ಕ್ರಮ ಕೈಗೊಳ್ಳುವಂತೆ ರೈಲ್ವೆ ವಲಯಗಳ ಪ್ರಧಾನ ವ್ಯವಸ್ಥಾಪಕರಿಗೆ ರೈಲ್ವೆ ಮಂಡಳಿ ಪತ್ರ ಬರೆದಿದೆ.

ಅಗ್ನಿವೀರರಿಗಾಗಿ ರೈಲ್ವೆ ಭದ್ರತಾ ಪಡೆಯಲ್ಲಿ ಕೂಡ ಮೀಸಲಾತಿ ನೀತಿಯನ್ನು ಜಾರಿಗೆ ತರಲಾಗುತ್ತದೆ ಎಂದು ಇವೇ ಮೂಲಗಳು ಹೇಳಿವೆ.

ಮೊದಲ ಬ್ಯಾಚ್‌ನ ಅಗ್ನಿವೀರರಿಗೆ ವಯೋಮಿತಿಯಲ್ಲಿ ಐದು ವರ್ಷ ಹಾಗೂ ನಂತರದ ಬ್ಯಾಚ್‌ಗಳ ಅಗ್ನಿವೀರರಿಗೆ ಮೂರು ವರ್ಷಗಳಷ್ಟು ಸಡಿಲಿಕೆ ನೀಡಲಾಗುವುದು. ರೈಲ್ವೆಯ ವಿವಿಧ ವಿಭಾಗಗಳಲ್ಲಿನ ಹಂತ–1 ಹಾಗೂ ಹಂತ–2 ಹಾಗೂ ಅದಕ್ಕೂ ಮೇಲ್ಪಟ್ಟ ಹುದ್ದೆಗಳಿಗೆ ಈ ಸೌಲಭ್ಯ ನೀಡಲಾಗುತ್ತದೆ ಎಂದು ಮೂಲಗಳು ಹೇಳಿವೆ.

ರಾಜಸ್ಥಾನ ರಾಯಲ್ಸ್‌ಗೆ ಭರ್ಜರಿ ಜಯ; ಐಪಿಎಲ್‌ನಲ್ಲಿ ಅತಿವೇಗದ ಅರ್ಧಶತಕ ಸಾಧನೆ

ಚಾಹಲ್ ಮೋಡಿ, ಜೈಸ್ವಾಲ್ ಅಬ್ಬರ



ಐಪಿಎಲ್ ಟೂರ್ನಿಯಲ್ಲಿ ಅತಿವೇಗದ ಅರ್ಧಶತಕ ಗಳಿಸಿದ ರಾಜಸ್ಥಾನ ರಾಯಲ್ಸ್ ತಂಡದ ಯಶಸ್ವಿ ಜೈಸ್ವಾಲ್ ಅವರ ಸಂಭ್ರಮ –ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಯಜುವೇಂದ್ರ ಚಾಹಲ್ ಸ್ಪಿನ್ ಮೋಡಿ ಹಾಗೂ ಐಪಿಎಲ್‌ನಲ್ಲಿ ಅತಿವೇಗದ ಅರ್ಧಶತಕ ದಾಖಲಿಸಿದ ಯಶಸ್ವಿ ಜೈಸ್ವಾಲ್ ಅಬ್ಬರದ ಆಟದಿಂದ ರಾಜಸ್ಥಾನ ರಾಯಲ್ಸ್ ತಂಡ ಜಯಭೇರಿ ಬಾರಿಸಿತು.

ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚಾಹಲ್ (25ಕ್ಕೆ4) ಹಾಗೂ ಜೈಸ್ವಾಲ್ (ಅಜೇಯ 98; 47ಎ, 4X13, 6X5) ಅವರ ಆಟದ ಬಲದಿಂದ ರಾಯಲ್ಸ್ ತಂಡವು ಕೋಲ್ಕತ್ತ ನೈಟ್‌ರೈಡರ್ಸ್ ಎದುರು 9 ವಿಕೆಟ್‌ಗಳಿಂದ ಗೆದ್ದಿತು. ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಜಿಗಿಯಿತು.

ಟಾಸ್ ಗೆದ್ದ ರಾಜಸ್ಥಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 149 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡವು 13.1 ಓವರ್‌ಗಳಲ್ಲಿ 1 ವಿಕೆಟ್‌ಗೆ 151 ರನ್ ಗಳಿಸಿ ಜಯಿಸಿತು.

ರಾಯಲ್ಸ್ ತಂಡದ ಆರಂಭಿಕ ಬ್ಯಾಟರ್ ಜೈಸ್ವಾಲ್ ಮೊದಲ ಓವರ್‌ನಲ್ಲಿ 26 ರನ್ ಸೂರೆ ಮಾಡಿ ತಂಡದ ಗೆಲುವಿಗೆ ಮುನ್ನುಡಿ ಬರೆದರು. ಎರಡನೇ ಓವರ್‌ನಲ್ಲಿ ಜೋಸ್ ಬಟ್ಲರ್ ತಮ್ಮ ಖಾತೆ ತೆರೆಯುವ ಮುನ್ನವೇ ರನ್‌ಔಟ್ ಆಗಿ ಮರಳಿದರು. ಜೈಸ್ವಾಲ್ ಜೊತೆಗೂಡಿದ ನಾಯಕ ಸಂಜು ಸ್ಯಾಮ್ಸನ್ (ಔಟಾಗದೆ 48) ಕೂಡ ಅಬ್ಬರಿಸಿದರು. ಇವರಿಬ್ಬರ ಜೊತೆಯಾಟದಲ್ಲಿ 121 ರನ್‌ಗಳು ಸೇರಿದವು.

13 ಎಸೆತಗಳಲ್ಲಿ ಅರ್ಧಶತಕ: ಜೈಸ್ವಾಲ್ ಕೇವಲ 13 ಎಸೆತಗಳಲ್ಲಿ ಅರ್ಧಶತಕ ಗಳಿಸಿದ ದಾಖಲೆ ಮಾಡಿದರು. ಈ ಹಿಂದೆ ಕೆ.ಎಲ್. ರಾಹುಲ್ ಮತ್ತು ಪ್ಯಾಟ್ ಕಮಿನ್ಸ್ (14 ಎಸೆತಗಳು) ಮಾಡಿದ್ದ ದಾಖಲೆಯನ್ನು ಮೀರಿನಿಂತರು.

ಟೂರ್ನಿಯಲ್ಲಿ ಜೈಸ್ವಾಲ್ ಈಗಾಗಲೇ ಒಂದು ಶತಕ ಗಳಿಸಿದ್ದಾರೆ. ಇಲ್ಲಿ ಎರಡನೇ ಶತಕ ದಾಖಲಿಸುವ ಅವಕಾಶ ಕೊಂಚ ವ್ಯತ್ಯಾಸದಲ್ಲಿ ಕೈತಪ್ಪಿತು.

ಚಾಹಲ್ ಮೋಡಿ: ಕೋಲ್ಕತ್ತ ತಂಡದ ಆರಂಭಿಕ ಬ್ಯಾಟರ್‌ಗಳಾದ ಜೇಸನ್ ರಾಯ್ ಹಾಗೂ ರೆಹಮಾನುಲ್ಲಾ ಗುರ್ಬಾಜ್ ಅವರ ಜೊತೆಯಾಟ ಬೆಳೆಯದಂತೆ ವೇಗಿ ಟ್ರೆಂಟ್ ಬೌಲ್ಟ್ ನೋಡಿಕೊಂಡರು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಜೇಸನ್ ಹಾಗೂ ಐದನೇ ಓವರ್‌ನಲ್ಲಿ ಗುರ್ಬಾಜ್ ವಿಕೆಟ್‌ಗಳನ್ನು ಉರುಳಿಸಿದರು.

ವೆಂಕಟೇಶ್ ಅಯ್ಯರ್ (57; 42ಎ) ಮತ್ತು ನಾಯಕ ನಿತೀಶ್ ರಾಣಾ (22; 17ಎ) ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಮೂರನೇ ವಿಕೆಟ್‌ಗೆ 48 ರನ್ ಸೇರಿಸಿದರು. ಚಾಹಲ್ ಹಾಕಿದ 11ನೇ ಓವರ್‌ನಲ್ಲಿ ರಾಣಾ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು. ಅರ್ಧಶತಕ ಗಳಿಸಿದ್ದ ವೆಂಕಟೇಶ್ ಅಯ್ಯರ್, ಶಾರ್ದೂಲ್ ಠಾಕೂರ್ ಅವರಿಬ್ಬರನ್ನೂ 17ನೇ ಓವರ್‌ನಲ್ಲಿ ಔಟ್ ಮಾಡುವಲ್ಲಿ ಚಾಹಲ್ ಯಶಸ್ವಿಯಾದರು.

16 ರನ್‌ಗಳಿಸಿದ್ದ ರಿಂಕು ಸಿಂಗ್ ಮತ್ತಷ್ಟು ಅಬ್ಬರಿಸುವ ಮುನ್ನವೇ ಚಾಹಲ್ ಬೌಲಿಂಗ್‌ಗೆ ಶರಣಾದರು. ಇದರಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸುವ ಸಾಧ್ಯತೆ ಕ್ಷೀಣಿಸಿತು.

ಐಪಿಎಲ್‌ನಲ್ಲಿ ಅತಿವೇಗದ ಅರ್ಧಶತಕ ಗಳಿಸಿದವರು

ಆಟಗಾರ	ಎಸೆತ	ವರ್ಷ
ಯಶಸ್ವಿ ಜೈಸ್ವಾಲ್	13	2023
ಕೆ.ಎಲ್.ರಾಹುಲ್	14	2018
ಪ್ಯಾಟ್ ಕಮಿನ್ಸ್	14	2022
ಯೂಸುಫ್ ಪಠಾಣ್	15	2014
ಸುನಿಲ್ ನಾರಾಯಣ	15	2017
ನಿಕೊಲಸ್ ಪೂರನ್	15	2023

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	576

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಚಾಹಲ್	ರಾಜಸ್ಥಾನ	21

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 8ಕ್ಕೆ149 (20 ಓವರ್‌ಗಳಲ್ಲಿ)
ಜೇಸನ್ ಸಿ ಹೆಟ್ಮೆಯರ್ ಬಿ ಬೌಲ್ಟ್ 10 (8ಎ, 4X2)
ಗುರ್ಬಾಜ್ ಸಿ ಸಂದೀಪ್ ಬಿ ಬೌಲ್ಟ್ 18 (12ಎ, 4X1, 6X2)
ವೆಂಕಟೇಶ್ ಸಿ ಬೌಲ್ಟ್ ಬಿ ಚಾಹಲ್ 57 (42ಎ, 4X2, 6X4)
ನಿತೀಶ್ ಸಿ ಹೆಟ್ಮೆಯರ್ ಬಿ ಚಾಹಲ್ 22 (17ಎ, 4X2)
ರಸೆಲ್ ಸಿ ಅಶ್ವಿನ್ ಬಿ ಅಸೀಫ್ 10 (10ಎ, 6X1)
ರಿಂಕುಸಿಂಗ್ ಸಿ ರೂಟ್ ಬಿ ಚಾಹಲ್ 16 (18ಎ, 6X1)
ಶಾರ್ದೂಲ್ ಎಲ್‌ಬಿಡಬ್ಲ್ಯು ಬಿ ಚಾಹಲ್ 1 (2ಎ)
ಅನುಕೂಲ್ ಔಟಾಗದೆ 6 (6ಎ)
ಸುನಿಲ್ ಸಿ ರೂಟ್ ಬಿ ಸಂದೀಪ್ 6 (5ಎ, 4X1)
ಇತರೆ: 3 (ಲೆಗ್‌ಬೈ 2, ವೈಡ್1)
ವಿಕೆಟ್ ಪತನ: 1–14 (ಜೇಸನ್ ರಾಯ್; 2.2), 2–29 (ರೆಹಮಾನುಲ್ಲಾ ಗುರ್ಬಾಜ್; 4.1), 3–77 (ನಿತೀಶ್ ರಾಣಾ; 10.2), 4–107 (ಆ್ಯಂಡ್ರೆ ರಸೆಲ್; 13.3), 5–127 (ವೆಂಕಟೇಶ್ ಅಯ್ಯರ್; 16.1), 6–129 (ಶಾರ್ದೂಲ್ ಠಾಕೂರ್; 16.4), 7–140 (ರಿಂಕು ಸಿಂಗ್; 18.4), 8–149 (ಸುನಿಲ್ ನಾರಾಯಣ್; 19.6)
ಬೌಲಿಂಗ್: ಟ್ರೆಂಟ್ ಬೌಲ್ಟ್ 3–0–15–2, ಸಂದೀಪ್ ಶರ್ಮಾ 4–0–34–1, ಆರ್. ಅಶ್ವಿನ್ 4–0–32–0, ಜೋ ರೂಟ್ 2–0–14–0, ಯಜುವೇಂದ್ರ ಚಾಹಲ್ 4–0–25–4, ಕೆ.ಎಂ. ಆಸಿಫ್ 3–0–27–1

ರಾಜಸ್ಥಾನ ರಾಯಲ್ಸ್ 1 ವಿಕೆಟ್‌ಗೆ 151 (13.1 ಓವರ್‌ಗಳಲ್ಲಿ)
ಯಶಸ್ವಿ ಅಜೇಯ 98 (47ಎ, 4X13, 6X5)
ಬಟ್ಲರ್ ರನ್‌ಔಟ್ (ರಸೆಲ್) 0 (3ಎ)
ಸಂಜು ಅಜೇಯ 48 (29ಎ, 4X2, 6X5)
ಇತರೆ: 5 (ಬೈ 1, ಲೆಗ್‌ಬೈ1, ವೈಡ್ 3) **ವಿಕೆಟ್ ಪತನ:** 1–30 (ಜೋಸ್ ಬಟ್ಲರ್; 1.4).
ಬೌಲಿಂಗ್: ನಿತೀಶ್ ರಾಣಾ 1–0–26–0, ಹರ್ಷಿತ್ ರಾಣಾ 2–0–22–0, ಶಾರ್ದೂಲ್ ಠಾಕೂರ್ 1.1–0–18–0, ವರುಣ ಚಕ್ರವರ್ತಿ 3–0–28–0, ಸುನಿಲ್ ನಾರಾಯಣ 2–0–13–0, ಸುಯಶ್ ಶರ್ಮಾ 3–0–22–0, ಅನುಕೂಲ್ ರಾಯ್ 1–0–20–0
ಫಲಿತಾಂಶ: ರಾಜಸ್ಥಾನ ರಾಯಲ್ಸ್ ತಂಡಕ್ಕೆ 9 ವಿಕೆಟ್‌ಗಳ ಜಯ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	11	8	3	0	16	0.951
ಚೆನ್ನೈ	12	7	4	1	15	0.493
ರಾಜಸ್ಥಾನ	12	6	6	0	12	0.633
ಮುಂಬೈ	11	6	5	0	12	-0.255
ಲಖನೌ	11	5	5	1	11	0.294
ಬೆಂಗಳೂರು	11	5	6	0	10	-0.345
ಕೋಲ್ಕತ್ತ	12	5	7	0	10	-0.357
ಪಂಜಾಬ್	11	5	6	0	10	-0.441
ಹೈದರಾಬಾದ್	10	4	6	0	8	-0.472
ಡೆಲ್ಲಿ	11	4	7	0	8	-0.605

ಗುರುವಾರದ ಪಂದ್ಯದ ಅಂತ್ಯಕ್ಕೆ


ಯಜುವೇಂದ್ರ ಚಾಹಲ್ ಬೌಲಿಂಗ್ –ಪಿಟಿಐ ಚಿತ್ರ

ಚಾಹಲ್‌ಗೆ ಅತಿ ಹೆಚ್ಚು ವಿಕೆಟ್

ಸ್ಪಿನ್ನರ್ ಯಜುವೇಂದ್ರ ಚಾಹಲ್ ಐಪಿಎಲ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರು. ಅವರು ಒಟ್ಟು 143 ಪಂದ್ಯಗಳನ್ನು ಆಡಿ 187 ವಿಕೆಟ್‌ಗಳನ್ನು ಗಳಿಸಿದ್ದಾರೆ.

183 ವಿಕೆಟ್ ಪಡೆದಿದ್ದ ಡ್ವೇನ್ ಬ್ರಾವೊ ಅವರ ದಾಖಲೆಯನ್ನು ಚಾಹಲ್ ಮುರಿದರು. ಗುರುವಾರ ನಡೆದ ಪಂದ್ಯದಲ್ಲಿ ನಿತೀಶ್ ರಾಣಾ ಅವರ ವಿಕೆಟ್ ಪಡೆದು ಈ ದಾಖಲೆ ಮೀರಿದರು. ಮುಂಬೈ ಇಂಡಿಯನ್ಸ್ ತಂಡದ ಪೀಯೂಷ್ ಚಾವ್ಲಾ (174) ಮೂರನೇ ಸ್ಥಾನದಲ್ಲಿದ್ದಾರೆ.

ರ‍್ಯಾಂಕಿಂಗ್: 3ನೇ ಸ್ಥಾನಕ್ಕೆ ಭಾರತ

ದುಬೈ(ಪಿಟಿಐ): ಭಾರತ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಏಕದಿನ ವಿಭಾಗದ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನಕ್ಕೆ ಕುಸಿದಿದೆ. ಆಸ್ಟ್ರೇಲಿಯಾ ಅಗ್ರಸ್ಥಾನ ಗಳಿಸಿದೆ.

ಆಸ್ಟ್ರೇಲಿಯಾ ತಂಡವು ರೇಟಿಂಗ್ ಅಂಕಗಳನ್ನು 113 ರಿಂದ 118ಕ್ಕೇರಿದ್ದರಿಂದ ಅಗ್ರಸ್ಥಾನ ಅಲಂಕರಿಸಿತು. ಪಾಕಿಸ್ತಾನ ತಂಡವು 116 ಪಾಯಿಂಟ್ ಗಳಿಸಿದ್ದು ಎರಡನೇ ಸ್ಥಾನದಲ್ಲಿದೆ. ಭಾರತ ತಂಡ 115 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದಿದೆ.

‘ಪಾಕಿಸ್ತಾನ ತಂಡವು 112 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿತ್ತು. ಆದರೆ ಈಚೆಗೆ ನ್ಯೂಜಿಲೆಂಡ್ ಎದುರಿನ ಏಕದಿನ ಸರಣಿಯ ನಾಲ್ಕನೇ ಪಂದ್ಯದಲ್ಲಿ ಜಯಿಸಿ, ಅಂಕಗಳನ್ನು ಹೆಚ್ಚಿಸಿಕೊಂಡಿತ್ತು’ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರೋಹಿತ್–ಹಾರ್ದಿಕ್ ಸೆಣಸು

ಮುಂಬೈ ಇಂಡಿಯನ್ಸ್‌ಗೆ ಗುಜರಾತ್ ಟೈಟನ್ಸ್ ಸವಾಲು



ಗುಜರಾತ್ ಟೈಟನ್ಸ್ ತಂಡದ ರಶೀದ್ ಖಾನ್ ಹಾಗೂ ಹಾರ್ದಿಕ್ ಪಾಂಡ್ಯ

ಮುಂಬೈ (ಪಿಟಿಐ): ಐಪಿಎಲ್ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್ ತಂಡವು ಅಗ್ರಸ್ಥಾನದಲ್ಲಿರುವ ಗುಜರಾತ್ ಟೈಟನ್ಸ್ ತಂಡವನ್ನು ಶುಕ್ರವಾರ ಎದುರಿಸಲಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಗೆದ್ದರೆ ಆತಿಥೇಯ ತಂಡಕ್ಕೆ ಪ್ಲೇ ಆಫ್ ಹಾದಿ ಮತ್ತಷ್ಟು ಸುಗಮವಾಗಲಿದೆ. ಐದು ಬಾರಿಯ ಚಾಂಪಿಯನ್ ಮುಂಬೈ ತಂಡವು ಈಚೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎದುರು ಭರ್ಜರಿ ಜಯ ಸಾಧಿಸಿತ್ತು.

ಹಾಲಿ ಚಾಂಪಿಯನ್ ಗುಜರಾತ್ ತಂಡವು 16 ಅಂಕ ಗಳಿಸಿದೆ. ಈ ಪಂದ್ಯದಲ್ಲಿ ತಂಡವು ಸೋತರೆ ಮೊದಲ ಸ್ಥಾನಕ್ಕೆ ಸಂಚಕಾರವಿಲ್ಲ. ಆದರೆ ಮುಂಬೈ ತಂಡವು ಬಲಿಷ್ಠವಾಗಿರುವ ಗುಜರಾತ್ ತಂಡವನ್ನು ಮಣಿಸಲು ತನ್ನ ಸಂಪೂರ್ಣ ಸಾಮರ್ಥ್ಯ ವಿನಿಯೋಗಿಸುವುದು ಅನಿವಾರ್ಯ.

ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ತಿಲಕ್ ವರ್ಮಾ, ನೇಹಲ್ ವಡೇರಾ ಹಾಗೂ ಟಿಮ್ ಡೇವಿಡ್ ಅವರು ತಮ್ಮ ಲಯದಲ್ಲಿಯೇ ಮುಂದುವರಿದರೆ ಮುಂಬೈಗೆ ಹೆಚ್ಚು ಅನುಕೂಲವಾಗಲಿದೆ. ನಾಯಕ ರೋಹಿತ್ ಶರ್ಮಾ ಅವರು ಲಯ ಕಂಡುಕೊಳ್ಳುವಲ್ಲಿ ಸತತ ವೈಫಲ್ಯ ಅನುಭವಿಸುತ್ತಿದ್ದಾರೆ. ಗುಜರಾತ್ ತಂಡದ ಬೌಲರ್‌ಗಳಾದ ಅನುಭವಿ ಮೋಹಿತ್, ಮೊಹಮ್ಮದ್ ಶಮಿ, ಸ್ಪಿನ್ನರ್ ರಶೀದ್ ಖಾನ್ ಹಾಗೂ ನೂರ್ ಅಹಮದ್ ಅವರನ್ನು ಎದುರಿಸುವ ಸವಾಲು ಮುಂಬೈ ಬ್ಯಾಟರ್‌ಗಳಿಗೆ ಇದೆ.

ಗುಜರಾತ್ ತಂಡದ ಬ್ಯಾಟಿಂಗ್ ಕೂಡ ಉತ್ತಮವಾಗಿದೆ. ನಾಯಕ ಹಾರ್ದಿಕ್ ಪಾಂಡ್ಯ, ಆರಂಭಿಕ ಬ್ಯಾಟರ್ ಶುಭಮನ್ ಗಿಲ್, ವೃದ್ಧಿಮಾನ್ ಸಹಾ, ಡೇವಿಡ್ ಮಿಲ್ಲರ್ ಹಾಗೂ ಸಾಯಿ ಕಿಶೋರ್ ಉತ್ತಮವಾಗಿ ಆಡುತ್ತಿದ್ದಾರೆ.

ಈ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಲು ಮುಂಬೈ ತಂಡದ ಬೌಲರ್‌ಗಳಾದ ಸಂದೀಪ್ ವಾರಿಯರ್, ಸ್ಪಿನ್ನರ್ ಪೀಯೂಷ್ ಚಾವ್ಲಾ, ಕುಮಾರ್ ಕಾರ್ತಿಕೇಯ ಹಾಗೂ ಕ್ರಿಸ್ ಜೋರ್ಡಾನ್ ಅವರು ತಮ್ಮ ಬತ್ತಳಿಕೆಯಲ್ಲಿರುವ ಅಸ್ತ್ರಗಳನ್ನು ಶಿಸ್ತುಬದ್ಧವಾಗಿ ಪ್ರಯೋಗಿಸಬೇಕು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಏಷ್ಯಾ ಕಪ್ ಫುಟ್‌ಬಾಲ್: ‘ಬಿ’ ಗುಂಪಿನಲ್ಲಿ ಭಾರತ

ದೋಹಾ (ಪಿಟಿಐ/ ಎಎಫ್‌ಪಿ): ಮುಂದಿನ ವರ್ಷ ನಡೆಯಲಿರುವ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ಲೀಗ್ ಹಂತದಲ್ಲೇ ಕಠಿಣ ಸವಾಲು ಎದುರಾಗಲಿದೆ.

ಭಾರತ ತಂಡವು ಆಸ್ಟ್ರೇಲಿಯಾ, ಸಿರಿಯಾ ಮತ್ತು ಉಜ್ಬೆಕಿಸ್ತಾನ ತಂಡಗಳ ಜತೆ ‘ಬಿ’ ಗುಂಪಿನಲ್ಲಿ ಸ್ಥಾನ ಪಡೆದಿದೆ. ಟೂರ್ನಿಯ ‘ಡ್ರಾ’ ಎತ್ತುವ ಪ್ರಕ್ರಿಯೆ ದೋಹಾದಲ್ಲಿ ಗುರುವಾರ ನಡೆಯಿತು. ಏಷ್ಯಾ ಕಪ್ ಟೂರ್ನಿ ದೋಹಾದಲ್ಲಿ ಜನವರಿ 12 ರಿಂದ ನಡೆಯಲಿದೆ.

24 ತಂಡಗಳನ್ನು ಆರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ನಾಕೌಟ್‌ಗೆ ಅರ್ಹತೆ ಪಡೆಯಲಿವೆ.

ಭಾರತ ತಂಡವು ಫಿಫಾ ರ‍್ಯಾಂಕಿಂಗ್‌ನಲ್ಲಿ 101ನೇ ಸ್ಥಾನದಲ್ಲಿದೆ. ‘ಬಿ’ ಗುಂಪಿನ ಇತರ ತಂಡಗಳಾದ ಆಸ್ಟ್ರೇಲಿಯಾ (29), ಉಜ್ಬೆಕಿಸ್ತಾನ (74) ಮತ್ತು ಸಿರಿಯಾ (90) ತಂಡಗಳು ಭಾರತಕ್ಕಿಂತ ಮೇಲಿನ ಸ್ಥಾನದಲ್ಲಿವೆ.

ಭಾರತವು ಸತತ ಎರಡನೇ ಏಷ್ಯಾ ಕಪ್‌ನಲ್ಲಿ ಆಡಲಿದ್ದು, ಒಟ್ಟಾರೆಯಾಗಿ ಇದು ಐದನೇ ಟೂರ್ನಿ ಎನಿಸಿದೆ.

ಗುಂಪುಗಳು

‘ಎ’: ಕತಾರ್, ಚೀನಾ, ತಜಿಕಿಸ್ತಾನ, ಲೆಬನಾನ್
‘ಬಿ’: ಆಸ್ಟ್ರೇಲಿಯಾ, ಉಜ್ಬೆಕಿಸ್ತಾನ, ಸಿರಿಯಾ, ಭಾರತ
‘ಸಿ’: ಇರಾನ್, ಯುಎಇ, ಹಾಂಗ್‌ಕಾಂಗ್, ಪ್ಯಾಲೆಸ್ಟೀನ್
‘ಡಿ’: ಜಪಾನ್, ಇಂಡೊನೇಷ್ಯಾ, ಇರಾಕ್, ವಿಯೆಟ್ನಾಂ
‘ಇ’: ದಕ್ಷಿಣ ಕೊರಿಯಾ, ಮಲೇಷ್ಯಾ, ಜೋರ್ಡಾನ್, ಬಹರೇನ್, ‘ಎಫ್’: ಸೌದಿ ಅರೇಬಿಯಾ, ಥಾಯ್ಲೆಂಡ್, ಕಿರ್ಗಿಸ್ತಾನ, ಒಮಾನ್



ಕರ್ನಾಟಕ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು (ಕೆಬಿಎ) ಈಚೆಗೆ ಆಯೋಜಿಸಿದ್ದ ರಾಜ್ಯ ಯೂತ್ (16 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಎಚ್‌ಬಿಆರ್‌ಬಿಎ ತಂಡಕ್ಕೆ ಕೆಬಿಎ ಅಧ್ಯಕ್ಷ ಕೆ.ಗೋವಿಂದರಾಜ್ ಟ್ರೋಫಿ ವಿತರಿಸಿದರು. ತಂಡದ ಆಟಗಾರರಾದ ಆರ್.ಸಂವೇಗ್, ರಿಶಿತ್, ಜೈರಾಮ್, ದಿಶಾಲ್, ಹೃದಯ್, ಅಯಾನ್ ಅಲಿ, ಆದಿತ್ಯ, ಅನಿಲ್, ಶ್ರೇಯಾಂಕ್ ಗೌಡ, ಶೋಭಿತ್, ಸೌಮಿಲ್, ಎಂ.ಡಿ.ರೋಶನ್ ಮತ್ತು ಪೂವಯ್ಯ ಇದ್ದಾರೆ

‘ಪ್ರಧಾನಿ ಮೋದಿ ಅಮೆರಿಕ ಪ್ರವಾಸ: ಬಾಂಧವ್ಯ ವೃದ್ಧಿ’

ವಾಷಿಂಗ್ಟನ್ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ತಿಂಗಳು ಅಮೆರಿಕಕ್ಕೆ ನೀಡಲಿರುವ ಭೇಟಿ ಐತಿಹಾಸಿಕವಾಗಲಿದ್ದು, ಉಭಯ ದೇಶಗಳ ನಡುವಿನ ಬಾಂಧವ್ಯವು ಜನಪರ ಮತ್ತು ಜನ ಕೇಂದ್ರಿತ ಎಂಬುದಕ್ಕೆ ಒತ್ತು ನೀಡಲಿದೆ’ ಎಂದು ಅಮೆರಿಕದಲ್ಲಿನ ಭಾರತದ ರಾಯಭಾರಿ ತರಂಜೀತ್ ಸಿಂಗ್ ಸಂಧು ಹೇಳಿದರು.

ಪ್ರಧಾನಿ ಭೇಟಿ ಉಭಯ ದೇಶಗಳ ನಡುವಿನ ಬಾಂಧವ್ಯ ಗಟ್ಟಿಗೊಳಿಸಲಿದೆ. ಅಮೆರಿಕನ್ನರು ಮತ್ತು ಭಾರತೀಯರ ನಡುವಿನ ಸಂಪರ್ಕ ವೃದ್ಧಿಸಲಿದೆ’ ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕರೀನ್ ಜೀನ್ ಪಿಯರ್ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಭೇಟಿ ಕುರಿತಂತೆ ಮಾತನಾಡಿದ ಸಂಧು, ‘ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಬೈಡನ್ ಇಬ್ಬರೂ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಗಣನೀಯ ಕೊಡುಗೆಯನ್ನು ನೀಡಿದ್ದಾರೆ ಉದ್ದೇಶಿತ ಭೇಟಿಯು ಉಭಯ ನಾಯಕರಿಗೆ ಪ್ರಗತಿ ಪರಿಶೀಲಿಸಲು, ಅಗತ್ಯ ಮಾರ್ಗದರ್ಶನ ನೀಡಲು ವೇದಿಕೆಯಾಗಲಿದೆ’ ಎಂದು ಅವರು ತಿಳಿಸಿದರು.

‘ಮಂಕಿಪಾಕ್ಸ್: ತುರ್ತು ಪರಿಸ್ಥಿತಿ ಅಂತ್ಯ’

ಜಿನೀವಾ (ಎಎಫ್‌ಪಿ): ಮಂಕಿಪಾಕ್ಸ್‌ಗೆ ಸಂಬಂಧಪಟ್ಟಂತೆ ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿ ಅಂತ್ಯಗೊಂಡಿದೆ ಎಂದು ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯುಎಚ್‌ಒ) ಗುರುವಾರ ಘೋಷಿಸಿದೆ.

ವಿಶ್ವದ ಹಲವೆಡೆ ಈ ರೋಗ ಕಾಣಿಸಿಕೊಂಡಿದ್ದ ಕಾರಣ ವರ್ಷದ ಹಿಂದೆ ಆರೋಗ್ಯ ತುರ್ತುಪರಿಸ್ಥಿತಿ ಘೋಷಿಸಲಾಗಿತ್ತು. ಮಂಕಿಪಾಕ್ಸ್ ಪ್ರಕರಣಗಳು ಇಳಿಮುಖವಾಗಿವೆ. ತುರ್ತುಸ್ಥಿತಿ ಸಮಿತಿ ವರದಿ ಆಧರಿಸಿ ಇದನ್ನು ಜಾಗತಿಕ ತುರ್ತು ಅಲ್ಲ ಎಂದು ಘೋಷಿಸಲು ಸಂತಸವಾಗುತ್ತಿದೆ ಎಂದು ಡಬ್ಲ್ಯುಎಚ್‌ಒ ಅಧ್ಯಕ್ಷ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ತಿಳಿಸಿದರು.

ಎಚ್–1ಬಿ ವೀಸಾ ವಿತರಣೆ ಸರಳಗೊಳಿಸಲು ಮಸೂದೆ ಮಂಡನೆ

ಗ್ರೀನ್ ಕಾರ್ಡ್ ಮಿತಿ ರದ್ದಾಗುವ ಸಾಧ್ಯತೆ

ವಾಷಿಂಗ್ಟನ್ (ಪಿಟಿಐ): ಗ್ರೀನ್ ಕಾರ್ಡ್ ವಿತರಣೆಗಾಗಿ ದೇಶಗಳಿಗೆ ನಿಗದಿಪಡಿಸಿರುವ ಕೋಟಾ ಮಿತಿ ಕೈಬಿಡಲು ಮತ್ತು ಎಚ್–1ಬಿ ವೀಸಾ ವಿತರಣೆಯಲ್ಲಿ ಅಗತ್ಯ ಬದಲಾವಣೆಗೆ ಅವಕಾಶ ಕಲ್ಪಿಸುವ ‘ಪೌರತ್ವ ಕಾಯ್ದೆ’ಯ ಮಸೂದೆಯನ್ನು ಡೆಮಾಕ್ರಟಿಕ್ ಪಕ್ಷವು ಬುಧವಾರ ಮಂಡಿಸಿತು.

ಸಂಸತ್ ಸದಸ್ಯೆ ಲಿಂಡಾ ಸ್ಯಾಂಚೆಜ್ ಅವರು ‘ಅಮೆರಿಕ ಪೌರತ್ವ ಕಾಯ್ದೆ 2023’ ಮಸೂದೆ ಮಂಡಿಸಿದರು. ದಾಖಲೆಯಿಲ್ಲದ ಸುಮಾರು 1.1 ಕೋಟಿ ವಲಸಿಗರು, ಟಿಪಿಎಸ್ ಹೊಂದಿರುವವರು, ಕೆಲ ಕೃಷಿ ಕಾರ್ಮಿಕರಿಗೆ ಪೌರತ್ವ ಪಡೆಯಲು ಅನುಸರಿಸಬೇಕಾದ ಮಾರ್ಗಗಳನ್ನು ಮಸೂದೆ ಒಳಗೊಂಡಿದೆ.

ವಲಸಿಗರಿಗೆ ಗಡೀಪಾರು ಭೀತಿಯಿಲ್ಲದಂತೆ ನಿಗದಿತ ತೆರಿಗೆ ಪಾವತಿಸಿ ಐದು ವರ್ಷಗಳ ಅವಧಿವರೆಗೂ ಪೌರತ್ವ ಪಡೆಯುವ ಹಾದಿಯನ್ನು ಸುಗಮಗೊಳಿಸಲು ಮಸೂದೆಯು ಅನುವು ಮಾಡಿಕೊಡಲಿದೆ.

ಆಮೂಲಾಗ್ರ ಬದಲಾವಣೆ ಉದ್ದೇಶ –ಲಿಂಡಾ

ವಾಷಿಂಗ್ಟನ್ (ಪಿಟಿಐ): ಮೆಕ್ಸಿಕೊದ ವಲಸಿಗ ತಂದೆ–ತಾಯಿಯ ಮಗಳಾಗಿ ‘ಅಮೆರಿಕ ಪೌರತ್ವ ಕಾಯ್ದೆ’ ಮಂಡಿಸಲು ನನಗೆ ಹೆಮ್ಮೆ ಆಗುತ್ತಿದೆ. ಇದು ದಿಟ್ಟ, ಆಮೂಲಾಗ್ರ ಬದಲಾವಣೆಗೆ ಒತ್ತು ನೀಡಲು, ಹಾಲಿ ವ್ಯವಸ್ಥೆಯಲ್ಲಿನ ಲೋಪ ಸರಿಪಡಿಸಲು ನೆರವಾಗಲಿದೆ’ ಎಂದು ಮಸೂದೆ ಮಂಡಿಸಿದ ಲಿಂಡಾ ಸ್ಯಾಂಚೆಜ್ ಹೇಳಿದರು.

ದೇಶದ ಆರ್ಥಿಕತೆ ವೃದ್ಧಿಗೆ, ಗಡಿಯನ್ನು ಇನ್ನಷ್ಟು ಸುರಕ್ಷಿತವಾಗಿ ಇಡಲು, ಈಗಾಗಲೇ ನೆಲೆಯೂರಿರುವ ಲಕ್ಷಾಂತರ ವಲಸಿಗರ ಪೌರತ್ವ ಹಾದಿ ಸುಗಮಗೊಳಿಸಲು ಇದು ಸಹಕಾರಿ ಎಂದು ಪ್ರತಿಪಾದಿಸಿದರು.

ಈ ಮಾತಿಗೆ ದನಿಗೂಡಿಸಿದ ಡೆಮಾಕ್ರಟಿಕ್ ಪಕ್ಷದ ನಾಯಕ ಹಕೀಮ್ ಜೆಫ್ರೀಸ್, ‘ಅಮೆರಿಕದ ಪ್ರಗತಿಯಲ್ಲಿ ವಲಸಿಗರ ಪಾತ್ರ ಗಣನೀಯವಾಗಿದೆ. ಸಮಗ್ರವಾದ ವಲಸಿಗರ ಕಾಯ್ದೆಯ ಅಗತ್ಯವಿದೆ’ ಎಂದು ಹೇಳಿದರು.


ಗ್ರೀನ್ ಕಾರ್ಡ್ ವಿತರಣೆಗೆ ಈಗಿನ ಮಿತಿ ಕೈಬಿಡುವುದಕ್ಕೆ ಪೂರಕವಾಗಿ ಉದ್ಯೋಗ ಆಧಾರಿತ ವಲಸೆ ವ್ಯವಸ್ಥೆಯಲ್ಲಿ ಅಗತ್ಯ ಬದಲಾವಣೆ ತರಲು ಉದ್ದೇಶಿಸಲಾಗಿದೆ.

ಅಮೆರಿಕ ವಿಶ್ವವಿದ್ಯಾಲಯಗಳ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ ವಿಷಯಗಳ (ಸ್ಟೆಮ್) ಪದವೀಧರರು ದೇಶದಲ್ಲೇ ಉಳಿಯಲು, ಕಡಿಮೆ ವೇತನದ ಉದ್ಯಮಗಳಲ್ಲಿನ ನೌಕರರಿಗೆ ಗ್ರೀನ್ ಕಾರ್ಡ್ ಪಡೆಯಲು, ಎಚ್–1ಬಿ ವೀಸಾ ವುಳ್ಳ ಅವಲಂಬಿತರಿಗೆ ಕೆಲಸದ ಅನುಮೋದನೆ ಪಡೆಯುವುದು, ಎಚ್–1ಬಿ ಹೊಂದಿದ ಮಕ್ಕಳು ವ್ಯವಸ್ಥೆಯಿಂದ ಹೊರಗುಳಿಯದಂತೆ ಮಸೂದೆ ನಿಯಮಗಳನ್ನು ಸರಳಗೊಳಿಸಲಿದೆ.

ಕುಟುಂಬ ಆಧಾರಿತ ವಲಸೆ ವ್ಯವಸ್ಥೆ: ಸಮಗ್ರ ಸುಧಾರಣೆಗೆ ಮಸೂದೆಯು ಒತ್ತು ನೀಡಲಿದ್ದು, ಕುಟುಂಬ ಆಧಾರಿತ ವಲಸೆ ವ್ಯವಸ್ಥೆ ಜಾರಿಗೊಳಿಸಲಿದೆ. ಇದು, ಕುಟುಂಬ ಒಟ್ಟಾಗಿರಲು ನೆರವಾಗಲಿದೆ. ಸಂಗಾತಿ (ಪತಿ–ಪತ್ನಿ), ಮಕ್ಕಳನ್ನು ಕುಟುಂಬ ಎಂದು ಪರಿಗಣಿಸಿ, ಹಿಂದಿನ ವರ್ಷದ ವೀಸಾ ಆಧರಿಸಿ ಬ್ಯಾಕ್‌ಲಾಗ್ ಇತ್ಯರ್ಥಪಡಿಸುವುದು ಕುಟುಂಬ ಆಧರಿತ ವಲಸೆಗೆ ಪೂರಕವಾಗಿ ಮಿತಿ ರದ್ದುಪಡಿಸುವುದು ಸೇರಿದೆ.

ಎಲ್‌ಜಿಬಿಟಿಕ್ಯೂ ಗುಂಪಿನವರಿಗೆ ಆಗುತ್ತಿದ್ದ ತಾರತಮ್ಯ ನಿವಾರಣೆ, ಅನಾಥರು, ವಿಧವೆಯರು, ಮಕ್ಕಳಿಗೆ ರಕ್ಷಣೆ ಒದಗಿಸುವುದು, ಕೌಟುಂಬಿಕ ದಾವೆಗಳಲ್ಲಿ ಪೂರಕ ಮಾನ್ಯತೆಯನ್ನು ಆಧರಿಸಿ ಗ್ರೀನ್ ಕಾರ್ಡ್‌ನ ನಿರೀಕ್ಷೆಯಲ್ಲಿ ಇರುವ ಅವಧಿಯಲ್ಲೂ ಅರ್ಜಿದಾರರು ತಾತ್ಕಾಲಿಕವಾಗಿ ಅಮೆರಿಕದಲ್ಲಿರುವ ತನ್ನ ಕುಟುಂಬದ ಜೊತೆಗೆ ಇರಲು ಅವಕಾಶ ಕಲ್ಪಿಸುವುದು ಉದ್ದೇಶಿತ ಮಸೂದೆಯಲ್ಲಿ ಸೇರಿದೆ.

‘ಪ್ರತಿದಾಳಿಗೆ ಹೆಚ್ಚು ಸಮಯ ಬೇಕು’


ವೊಲೊಡಿಮಿರ್ ಝೆಲೆನ್‌ಸ್ಕಿ

ಕೀವ್/ಲಂಡನ್ (ಎಪಿ): ರಷ್ಯಾದ ಆಕ್ರಮಣಕಾರರನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಪ್ರತಿದಾಳಿ ನಡೆಸಲು ಸೇನೆಗೆ ಹೆಚ್ಚಿನ ಸಮಯಾವಕಾಶ ಬೇಕು ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಬಿಬಿಸಿಗೆ ನೀಡಿರುವ ಸಂದರ್ಶನದಲ್ಲಿ ಝೆಲೆನ್‌ಸ್ಕಿ ಅವರು, ‘ಈಗ ನಾವು ಪ್ರತಿ ದಾಳಿ ಆರಂಭಿಸಿದರೆ ಬಹಳಷ್ಟು ಜೀವ ಹಾನಿಯಾಗಲಿದೆ. ಇದಕ್ಕೆ ನಾವು ಸಿದ್ಧರಿಲ್ಲ’ ಎಂದು ಹೇಳಿದ್ದಾರೆ. ಉಕ್ರೇನ್ ಅಧ್ಯಕ್ಷರ ಸಂದರ್ಶನವನ್ನು ಬಿಬಿಸಿ ಗುರುವಾರ ಪ್ರಸಾರ ಮಾಡಿದೆ.

‘ನಾವು ಮುನ್ನುಗ್ಗಬಹುದು ಮತ್ತು ಇದರಲ್ಲಿ ಯಶಸ್ವಿಯೂ ಆಗಬಹುದು. ಆದರೆ, ನಾವು ಈಗಾಗಲೇ ಬಹಳಷ್ಟು ಜನರನ್ನು ಕಳೆದುಕೊಂಡಿದ್ದೇವೆ. ಹಾಗಾಗಿ ನಾವು ಕಾಯಬೇಕು. ಪ್ರತಿದಾಳಿ ನಡೆಸಲು ಇನ್ನೂ ಸಮಯ ಬೇಕು’ ಎಂದು ಝೆಲೆನ್‌ಸ್ಕಿ ಸಂದರ್ಶನದಲ್ಲಿ ತಿಳಿಸಿರುವುದಾಗಿ ಬಿಬಿಸಿ ಹೇಳಿದೆ.

ರಷ್ಯಾ ಪಡೆಗಳನ್ನು ಹಿಮ್ಮೆಟ್ಟಿಸಲು ನೆರವಾಗುವಂತಹ ದೂರ ವ್ಯಾಪ್ತಿ ಗುರಿ ಭೇದಿಸುವ ಕ್ರೂಸ್ ಕ್ಷಿಪಣಿಗಳನ್ನು ಪೂರೈಸುವುದಾಗಿ ಬ್ರಿಟನ್ ರಕ್ಷಣಾ ಕಾರ್ಯದರ್ಶಿ ಬೆನ್ ವ್ಯಾಲೆಸ್ ಗುರುವಾರ ತಿಳಿಸಿದ್ದಾರೆ.

ಬ್ರಿಟನ್ ಸಂಸತ್‌ನಲ್ಲಿ ಸಂಸದರಿಗೆ ಈ ವಿಷಯ ತಿಳಿಸಿದ ಅವರು, ಸ್ಟಾರ್ಮ್ ಶ್ಯಾಡೊ ಕ್ಷಿಪಣಿಗಳನ್ನು ಉಕ್ರೇನ್‌ಗೆ ಕೊಡಲಾಗುತ್ತಿದೆ ಎಂದರು. ಆದರೆ, ಎಷ್ಟು ಕ್ಷಿಪಣಿಗಳನ್ನು ಕೊಡಲಾಗುತ್ತಿದೆ ಅಥವಾ ಈ ಕ್ಷಿಪಣಿಗಳು ಈಗಾಗಲೇ ಉಕ್ರೇನ್ ತಲುಪಿವೆಯೇ ಎನ್ನುವುದನ್ನು ಅವರು ಬಹಿರಂಗಪಡಿಸಲಿಲ್ಲ.

ಈ ಕ್ಷಿಪಣಿಗಳು ರಷ್ಯಾ ಆಕ್ರಮಿತ ಉಕ್ರೇನ್ ಪ್ರದೇಶಗಳು ಸೇರಿ, ಕ್ರಿಮಿಯಾ ದ್ವೀಪವನ್ನು ತಲುಪುವ ಸಾಮರ್ಥ್ಯ ಹೊಂದಿವೆ. ಈ ಕ್ಷಿಪಣಿಗಳನ್ನು ರಷ್ಯಾ ನೆಲದ ಮೇಲೆ ದಾಳಿ ನಡೆಸಲು ಬಳಸದಿರುವುದಾಗಿ ಉಕ್ರೇನ್ ವಾಗ್ದಾನ ನೀಡಿರುವುದಾಗಿ ಬ್ರಿಟನ್ ಮಾಧ್ಯಮಗಳು ವರದಿ ಮಾಡಿವೆ.

14 ತಿಂಗಳಿಗೂ ಹೆಚ್ಚು ಸಮಯದಿಂದ ರಷ್ಯಾ ನಡೆಸುತ್ತಿರುವ ಆಕ್ರಮಣದ ವಿರುದ್ಧ ಉಕ್ರೇನ್ ಪ್ರತಿ ಹೋರಾಟ ನಡೆಸುತ್ತಿದೆ. ಉಕ್ರೇನ್‌ಗೆ ಯುದ್ಧ ಟ್ಯಾಂಕ್‌ಗಳು, ಇತರ ಶಸ್ತ್ರಸಜ್ಜಿತ ವಾಹನಗಳು ಸೇರಿ ಪಾಶ್ಚಾತ್ಯ ಸುಧಾರಿತ ಶಸ್ತ್ರಾಸ್ತ್ರಗಳು ಪೂರೈಕೆಯಾಗಿವೆ. ಅಲ್ಲದೆ, ಉಕ್ರೇನ್ ಪಡೆಗಳಿಗೆ ಪಶ್ಚಿಮದ ಯುದ್ಧ ನಿಪುಣ ಸೈನಿಕರಿಂದ ತರಬೇತಿ ನೀಡಲಾಗುತ್ತಿದೆ.

ರಷ್ಯಾ ಪಡೆಗಳು ಉಕ್ರೇನ್‌ನ ಪೂರ್ವ ಪ್ರದೇಶಗಳಲ್ಲಿ ಈಗಾಗಲೇ ಆಳವಾಗಿ ಬೇರೂರಿವೆ. ಸುಮಾರು 20 ಕಿ.ಮೀ. ದೂರದವರೆಗೂ ರಕ್ಷಣಾತ್ಮಕ ರೇಖೆಗಳನ್ನು ಎಳೆದಿವೆ. ಪ್ರತಿ ದಾಳಿಗೆ ಉಕ್ರೇನ್ ಪಡೆ ಇಳಿದರೆ, ನೆಲ ಬಾಂಬುಗಳು, ಯುದ್ಧ ಟ್ಯಾಂಕ್ ವಿರೋಧಿ ತಡೆಗಳ ಸವಾಲನ್ನು ಬಹುಶಃ ಎದುರಿಸಬೇಕಾಗಬಹುದು.

ಜಿನ್ನಾ ಹೌಸ್ ಮೇಲೆ ದಾಳಿ: ಬೆಲೆ ಬಾಳುವ ವಸ್ತುಗಳ ಲೂಟಿ ಆರೋಪ

ಇಮ್ರಾನ್ ಖಾನ್ ಸೇರಿ 1,500 ಮಂದಿ ವಿರುದ್ಧ ಪ್ರಕರಣ

ಲಾಹೋರ್ (ಪಿಟಿಐ): ಉನ್ನತ ಸೇನಾಧಿಕಾರಿ ಮನೆಗೆ ಬೆಂಕಿ ಹಚ್ಚಿರುವ ಘಟನೆ ಸಂಬಂಧ ಭ್ರಷ್ಟಾಚಾರ ಆರೋಪ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಪಾಕಿಸ್ತಾನ್ ತೆಹ್ರೀಕ್–ಇ- ಇನ್ಸಾಫ್ (ಪಿಟಿಐ) ಪಕ್ಷದ 1500 ಕಾರ್ಯಕರ್ತರ ವಿರುದ್ಧ ಲಾಹೋರ್ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಇಮ್ರಾನ್ ಖಾನ್ ಅವರನ್ನು ಮಂಗಳವಾರ ಪಾಕಿಸ್ತಾನ ಅರೆಸೇನಾ ಪಡೆಯ ರೇಂಜರ್ಸ್ ಯೋಧರು ಬಂಧಿಸಿದ್ದನ್ನು ವಿರೋಧಿಸಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸೇನಾ ಪ್ರಧಾನ ಕಚೇರಿಗೆ ಮುತ್ತಿಗೆ ಹಾಕಿದರು. ಸೇನಾ ವಾಹನಗಳು ಮತ್ತು ಸೇನಾ ನೆಲೆಗಳ ಮೇಲೆ ದಾಳಿ ನಡೆಸಿದ ವೇಳೆ, ಲಾಹೋರ್ ಕಾರ್ಪ್ಸ್ ಕಮಾಂಡರ್ ನಿವಾಸಕ್ಕೂ ಬೆಂಕಿ ಹಚ್ಚಿದ್ದರು.

ಇಮ್ರಾನ್ ಆಪ್ತ ಖುರೇಶಿ ಬಂಧನ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಆಪ್ತ ಶಾ ಮೆಹಮೂದ್ ಖುರೇಶಿ ಅವರನ್ನು ಗುರುವಾರ ಬಂಧಿಸಲಾಗಿದೆ.

ಇಮ್ರಾನ್ ಖಾನ್ ಬಂಧಿಸಿದ್ದ ಕಾರಣ ಈಗಾಗಲೇ ಪಾಕಿಸ್ತಾನದಾದ್ಯಂತ ಗಲಭೆಗಳು ಭುಗಿಲೆದ್ದಿದ್ದು, ಸುಮಾರು ಎಂಟು ಮಂದಿ ಮೃತಪಟ್ಟಿದ್ದಾರೆ. ಪ್ರತಿಭಟನೆಗೆ ಪ್ರಚೋದನೆ ನೀಡಿದ್ದಕ್ಕಾಗಿ ಮತ್ತು ದೇಶದ ಶಾಂತಿಗೆ ಭಂಗ ಉಂಟುಮಾಡಿದ್ದಕ್ಕಾಗಿ ಖುರೇಶಿ ಅವರನ್ನು ಬಂಧಿಸಲಾಗಿದೆ ಎನ್ನಲಾಗಿದೆ.

ಸಾದಾ ಉಡುಗೆ ಧರಿಸಿದ್ದ ಜನರ ಗುಂಪೊಂದು ಖುರೇಶಿ ಅವರನ್ನು ಕರೆದುಕೊಂಡು ಹೋಗುತ್ತಿರುವ ವಿಡಿಯೊವನ್ನು ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷವು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದೆ. ಜೊತೆಗೆ, ಅವರನ್ನು ಅಪರಿಚಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ ಎಂದು ಆರೋಪಿಸಿದೆ.

ಲಾಹೋರ್ ಕಂಟೋನ್‌ಮೆಂಟ್‌ನ ‘ಜಿನ್ನಾ ಹೌಸ್’ ಎಂದೇ ಹೆಸರಾದ ಕಾರ್ಪ್ಸ್ ಕಮಾಂಡರ್ ನಿವಾಸದ ಮೇಲೆ ಮಂಗಳವಾರ ದಾಳಿ ನಡೆಸಿದ ಆರೋಪಕ್ಕೆ ಸಂಬಂಧಿಸಿ ಪಿಟಿಐ ಅಧ್ಯಕ್ಷರೂ ಆದ ಇಮ್ರಾನ್ ಖಾನ್, ಉಪಾಧ್ಯಕ್ಷ ಶಾ ಮಹಮೂದ್ ಖುರೇಷಿ ಮತ್ತು ಇತರರ ವಿರುದ್ಧ ಕೊಲೆ, ಭಯೋತ್ಪಾದನೆ ಪ್ರಕರಣ ಹಾಗೂ ಇತರ 20 ಮಂದಿ ವಿರುದ್ಧ ಘೋರ ಅಪರಾಧಗಳ ಪ್ರಕರಣ ದಾಖಲಿಸಲಾಗಿದೆ.

ಜಿನ್ನಾ ಹೌಸ್‌ನಿಂದ 15 ಕೋಟಿ ಪಾಕಿಸ್ತಾನಿ ರೂಪಾಯಿ (₹4.27 ಕೋಟಿ) ಮೌಲ್ಯದ ಬೆಲೆಬಾಳುವ ವಸ್ತುಗಳನ್ನು ಲೂಟಿ ಮಾಡಿರುವ ಆರೋಪವನ್ನು ಖಾನ್ ಮತ್ತು ಇತರರ ಮೇಲೆ ಹೊರಿಸಲಾಗಿದೆ. ದಾಳಿಯ ವೇಳೆ ಇಬ್ಬರು ಮೃತಪಟ್ಟಿದ್ದಾರೆ. ಖಾನ್ ಮತ್ತು ಪಕ್ಷದ ಇತರ ಹಿರಿಯ ನಾಯಕರ ಆಜ್ಞೆಯ ಮೇರೆಗೆ 1,500ಕ್ಕೂ ಹೆಚ್ಚು ಪಿಟಿಐ ಕಾರ್ಯಕರ್ತರು ಸೇನಾ ಅಧಿಕಾರಿಯ ಮನೆ ಮೇಲೆ ದಾಳಿ ನಡೆಸಿರುವುದಾಗಿ ಬುಧವಾರ ಎಫ್‌ಐಆರ್ ದಾಖಲಿಸಲಾಗಿದೆ.


ಪಾಕ್ ಸೇನೆ ಮೇಲೆ ಪಿಟಿಐ ಕಾರ್ಯಕರ್ತರ ಆಕ್ರೋಶ

ಖಾನ್ ಅವರನ್ನು ಬಂಧಿಸಿರುವುದಕ್ಕೆ ಪಾಕ್ ಸೇನೆ ಮೇಲೆ ಹೊಣೆ ಹೊರಿಸಿರುವ ಪಿಟಿಐ ಕಾರ್ಯಕರ್ತರು, ಸೇನೆ ವಿರುದ್ಧ ಆಕ್ಷೇಪಾರ್ಹ ಘೋಷಣೆಗಳನ್ನು ಕೂಗಿದ್ದಾರೆ. ಸೇನಾ ಕಚೇರಿಗಳು, ಸೇನಾಧಿಕಾರಿ ನಿವಾಸ, ಪೊಲೀಸ್ ಠಾಣೆಗಳ ಮೇಲೂ ದಾಳಿ ನಡೆಸಿ ಬೆಂಕಿ ಹಚ್ಚಿದ್ದಾರೆ.

ಸಾರ್ವಜನಿಕ ಆಸ್ತಿ ಲೂಟಿ ಮಾಡಿ, ಹಾನಿಗೊಳಿಸಿದ್ದಾರೆ. ದೇಶದ ಹಲವೆಡೆ ಗುರುವಾರ ಕೂಡ ಪ್ರತಿಭಟನೆ ತಣ್ಣಗಾಗಿಲ್ಲ. ಘರ್ಷಣೆಯಿಂದ ಸಾವಿನ ಸಂಖ್ಯೆ 8ಕ್ಕೆ ಏರಿಕೆಯಾಗಿದೆ. ಪ್ರತಿಭಟನಕಾರರೊಂದಿಗಿನ ಘರ್ಷಣೆಯಲ್ಲಿ ಹಲವು ಮಂದಿ ಪೊಲೀಸ್ ಅಧಿಕಾರಿಗಳೂ ಗಾಯಗೊಂಡಿದ್ದಾರೆ.

ಪಿಟಿಐ ಅಧ್ಯಕ್ಷ, ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಮೇಲೆ ಪೊಲೀಸರು ಹತ್ತಾರು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ.

ಬುಧವಾರ ಗುಲ್ಬರ್ಗ್ ಪ್ರದೇಶದ ಅಸ್ಕರಿ ಟವರ್ ಮೇಲೆ ದಾಳಿ ನಡೆಸಿದ ಪ್ರತಿಭಟನಕಾರರು, ಟವರ್‌ಗೆ ಬೆಂಕಿ ಹಚ್ಚಿದರು. ಇದರಿಂದ ಒಬ್ಬ ವ್ಯಕ್ತಿ ಸತ್ತಿದ್ದಾರೆ.


ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಬಿಡುಗಡೆ ಮಾಡಲು ಪಾಕಿಸ್ತಾನದ ಸುಪ್ರೀಂ ಕೋರ್ಟ್ ಆದೇಶಿಸಿದ ಬಳಿಕ ಅಭಿಮಾನಿಗಳು ಪೇಶಾವರದಲ್ಲಿ ಗುರುವಾರ ಸಂಭ್ರಮಿಸಿದರು – ಎಎಫ್‌ಪಿ ಚಿತ್ರ

ಇಮ್ರಾನ್ ಖಾನ್ ಬಿಡುಗಡೆ

ಒಂದನೇ ಪುಟದಿಂದ...

ಕೋರ್ಟ್ ಕೊಠಡಿ ಪ್ರವೇಶಿಸುತ್ತಿದ್ದಂತೆ ಪ್ರವೇಶ ಬಂದ್ ಮಾಡಿ, ವಿಚಾರಣೆ ನಡೆಸಲಾಯಿತು.

‘ನಿಮ್ಮನ್ನು ನೋಡಿ ಸಮಾಧಾನವಾಯಿತು’ ಎಂದು ಮುಖ್ಯ ನ್ಯಾಯಮೂರ್ತಿ ಬಂದಿಯಾಲ್ ಅವರು ಇಮ್ರಾನ್ ಖಾನ್ ಅವರನ್ನು ಉದ್ದೇಶಿಸಿ ಹೇಳಿದರು. ‘ಈ ಬಂಧನ ಪ್ರಕ್ರಿಯೆ ಕಾನೂನು ಬಾಹಿರ ಎಂದು ನಾವು ಭಾವಿಸುತ್ತೇವೆ’ ಎಂದು ಹೇಳಿದರು. ಇಸ್ಲಾಮಾಬಾದ್ ಹೈಕೋರ್ಟ್ ಶುಕ್ರವಾರವೇ ಪ್ರಕರಣದ ವಿಚಾರಣೆ ನಡೆಸಬೇಕು ಹಾಗೂ ಕೋರ್ಟ್ ತೀರ್ಮಾನವನ್ನು ನೀವು ಒಪ್ಪಿಕೊಳ್ಳಬೇಕು ಎಂದು ಇಮ್ರಾನ್ ಅವರನ್ನು ಉದ್ದೇಶಿಸಿ ನ್ಯಾಯಮೂರ್ತಿ ಹೇಳಿದರು.

ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್: 10 ಮೀ. ಏರ್ ಪಿಸ್ತೂಲ್‌ನಲ್ಲಿ ಸಾಧನೆ

ದಿವ್ಯಾ– ಸರಬ್ಜೋತ್ ಜೋಡಿಗೆ ಚಿನ್ನ

ಬಾಕು, ಅಜರ್‌ಬೈಜಾನ್ (ಪಿಟಿಐ): ಭಾರತದ ಟಿ.ಎಸ್. ದಿವ್ಯಾ ಹಾಗೂ ಸರಬ್ಜೋತ್ ಸಿಂಗ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಜಯಿಸಿದರು.

ಚಿನ್ನದ ಪದಕ ನಿರ್ಣಯಿಸಲು ಗುರುವಾರ ನಡೆದ ಸ್ಪರ್ಧೆಯಲ್ಲಿ ಭಾರತದ ಜೋಡಿ 16–14 ರಲ್ಲಿ ಸರ್ಬಿಯದ ದಾಮಿರ್ ಮಿಕೆಚ್ ಮತ್ತು ಜೊರಾನಾ ಅರುನೊವಿಚ್ ಅವರನ್ನು ಮಣಿಸಿತು.

ಇದಕ್ಕೂ ಮುನ್ನ ನಡೆದಿದ್ದ ಅರ್ಹತಾ ಸುತ್ತಿನಲ್ಲಿ ದಿವ್ಯಾ ಮತ್ತು ಸರಬ್ಜೋತ್ ಅವರು 581 ಪಾಯಿಂಟ್ಸ್‌ಗಳನ್ನು ಕಲೆಹಾಕುವ ಮೂಲಕ ಕಣದಲ್ಲಿದ್ದ 55 ತಂಡಗಳಲ್ಲಿ ಅಗ್ರಸ್ಥಾನ ಪಡೆದುಕೊಂಡಿದ್ದರು.

ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಇಶಾ ಸಿಂಗ್ ಮತ್ತು ವರುಣ್ ತೋಮರ್ ಪದಕ ಸುತ್ತು ತಲುಪಲು ವಿಫಲರಾದರು. ಅವರು ಅರ್ಹತಾ ಹಂತದಲ್ಲಿ 578 ಪಾಯಿಂಟ್ಸ್‌ಗಳೊಂದಿಗೆ ಐದನೇ ಸ್ಥಾನ ಪಡೆದರು.



ಸರಬ್ಜೋತ್ ಸಿಂಗ್ ಹಾಗೂ ಟಿ.ಎಸ್ ದಿವ್ಯಾ

ಸರಬ್ಜೋತ್ ಅವರು ಸತತ ಎರಡು ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಚಿನ್ನ ಗೆದ್ದ ಸಾಧನೆ ಮಾಡಿದರು. ಭೋಪಾಲ್‌ನಲ್ಲಿ ಮಾರ್ಚ್ ತಿಂಗಳಲ್ಲಿ ನಡೆದಿದ್ದ ಕೂಟದಲ್ಲಿ ಏರ್ ಪಿಸ್ತೂಲ್ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಜಯಿಸಿದ್ದರು. ದಿವ್ಯಾ ಅವರಿಗೆ ಸೀನಿಯರ್ ವಿಭಾಗದಲ್ಲಿ ಲಭಿಸಿದ ಮೊದಲ ಪದಕ ಇದಾಗಿದೆ. ಟರ್ಕಿಯ ಇಸ್ಮಾಯಿಲ್ ಕೆಲೆಸ್ ಮತ್ತು ಸಿಮಲ್ ಯಿಲ್ಮಾಜ್ ಅವರು ಕಂಚಿನ ಪದಕ ಪಡೆದುಕೊಂಡರು.

ಚಿನ್ನದ ಪದಕಕ್ಕಾಗಿ ನಡೆದ ಪೈಪೋಟಿಯಲ್ಲಿ ಭಾರತ ಮತ್ತು ಸರ್ಬಿಯದ ಜೋಡಿ 14–14 ರಲ್ಲಿ ಸಮಬಲ ಸಾಧಿಸಿತ್ತು. ತಮ್ಮ ಕೊನೆಯ ಪ್ರಯತ್ನದಲ್ಲಿ ಸರಬ್ಜೋತ್ 10.6 ಮತ್ತು ದಿವ್ಯಾ 9.9 ಪಾಯಿಂಟ್ಸ್ ಗಳಿಸಿದರು. ಸರ್ಬಿಯದ ದಾಮಿರ್ 10.3 ಪಾಯಿಂಟ್ಸ್ ಗಳಿಸಿದರೂ, ಜೊರಾನಾ ನಿಖರ ಗುರಿ ಹಿಡಿಯುವಲ್ಲಿ ವಿಫಲರಾಗಿ 8.6 ಪಾಯಿಂಟ್ಸ್ ಮಾತ್ರ ಗಳಿಸಿದರು. ಇದರಿಂದ ಭಾರತದ ಜೋಡಿಗೆ ಚಿನ್ನ ಒಲಿಯಿತು.

10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದ ಮೊದಲ ಎರಡೂ ಸ್ಥಾನಗಳನ್ನು ಚೀನಾ ತನ್ನದಾಗಿಸಿಕೊಂಡಿತು. ಜೆಕ್ ರಿಪಬ್ಲಿಕ್ ಮೂರನೇ ಸ್ಥಾನ ಗಳಿಸಿತು. ಈ ವಿಭಾಗದಲ್ಲಿ ಕಣದಲ್ಲಿದ್ದ ಭಾರತದ ತಿಲೋತ್ತಮ ಸೇನ್ ಮತ್ತು ಹೃದಯ್ ಹಜಾರಿಕಾ ಅವರು 17ನೇ ಸ್ಥಾನ ಪಡೆದರೆ, ರಮಿತಾ– ರುದ್ರಾಕ್ಷ್ ಪಾಟೀಲ್ ಅವರು 28ನೇ ಸ್ಥಾನ ಗಳಿಸಿದರು.

ತಲಾ ಒಂದು ಚಿನ್ನ ಮತ್ತು ಕಂಚು ಗೆದ್ದಿರುವ ಭಾರತ ತಂಡ, ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಒಂದು ಚಿನ್ನ ಮತ್ತು ಬೆಳ್ಳಿ ಜಯಿಸಿರುವ ಚೀನಾ, ಅಗ್ರಸ್ಥಾನದಲ್ಲಿದೆ.

ಟಾಪ್ಸ್ ಯೋಜನೆ ಅತನು, ಮೆಹುಲಿ ಸೇರ್ಪಡೆ

ನವದೆಹಲಿ (ಪಿಟಿಐ): ಆರ್ಚರಿ ಪಟು ಅತನು ದಾಸ್ ಮತ್ತು ಶೂಟರ್ ಮೆಹುಲಿ ಘೋಷ್ ಅವರನ್ನು ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಗೆ (ಟಾಪ್ಸ್) ಮರು ಸೇರ್ಪಡೆ ಮಾಡಲಾಗಿದೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕೂಟಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವುದರಿಂದ ಅತನು ಅವರಿಗೆ ಮತ್ತೆ ಅವಕಾಶ ಲಭಿಸಿದೆ. ಟರ್ಕಿಯಲ್ಲಿ ಈಚೆಗೆ ನಡೆದಿದ್ದ ವಿಶ್ವಕಪ್‌ನ ರಿಕರ್ವ್ ವಿಭಾಗದಲ್ಲಿ ಅವರು ನಾಲ್ಕನೇ ಸ್ಥಾನ ಗಳಿಸಿದ್ದರು.

ಮೆಹುಲಿ ಅವರು ರಾಷ್ಟ್ರೀಯ ಶೂಟಿಂಗ್ ಟ್ರಯಲ್ಸ್‌ನಲ್ಲಿ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಅಗ್ರಸ್ಥಾನ ಪಡೆದಿದ್ದರು. 15 ವರ್ಷದ ಯುವ ಶೂಟರ್ ತಿಲೋತ್ತಮ ಸೇನ್ ಅವರಿಗೂ ಅವಕಾಶ ನೀಡಲಾಗಿದೆ.

ಟಾಪ್ಸ್ ಯೋಜನೆಗೆ ಹೊಸದಾಗಿ 27 ಕ್ರೀಡಾಪಟುಗಳನ್ನು ಸೇರಿಸಲಾಗಿದ್ದು, ಈ ಯೋಜನೆಯಡಿ ತರಬೇತಿ ಪಡೆಯುತ್ತಿರುವವರ ಒಟ್ಟು ಸಂಖ್ಯೆ 270ಕ್ಕೆ ಏರಿಕೆಯಾಗಿದೆ.

ಕ್ರೀಡಾ ಇಲಾಖೆಗೆ ಎನ್‌ಎಚ್‌ಆರ್‌ಸಿ ನೋಟಿಸ್

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಸೇರಿದಂತೆ ಕೆಲವು ಕ್ರೀಡಾ ಫೆಡರೇಷನ್‌ಗಳು ಲೈಂಗಿಕ ದೌರ್ಜನ್ಯ ಆರೋಪಗಳಿಗೆ ಸಂಬಂಧಿಸಿದ ದೂರು ಸ್ವೀಕರಿಸಲು ಆಂತರಿಕ ದೂರು ಸಮಿತಿಯನ್ನು ನೇಮಿಸದ ಕಾರಣ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ), ಕೇಂದ್ರ ಕ್ರೀಡಾ ಇಲಾಖೆಗೆ ಗುರುವಾರ ನೋಟಿಸ್ ನೀಡಿದೆ.

ಭಾರತ ಕ್ರೀಡಾ ಪ್ರಾಧಿಕಾರ, ಬಿಸಿಸಿಐ ಮತ್ತು ಡಬ್ಲ್ಯುಎಫ್‌ಐ ಸೇರಿದಂತೆ ಇತರ ಕೆಲವು ಕ್ರೀಡಾ ಫೆಡರೇಷನ್‌ಗಳಿಗೂ ನೋಟಿಸ್ ಜಾರಿಗೊಳಿಸಿದೆ ಎಂದು ಮೂಲಗಳು ಹೇಳಿವೆ.

ದೀಪಕ್, ಹುಸಾಮುದ್ದೀನ್, ನಿಶಾಂತ್ ಇಂದು ಕಣಕ್ಕೆ

ವಿಶ್ವ ಬಾಕ್ಸಿಂಗ್: ಫೈನಲ್‌ನತ್ತ ಚಿತ್ತ

ತಾಷ್ಕೆಂಟ್ (ಪಿಟಿಐ): ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ ಭಾರತದ ದೀಪಕ್ ಬೊರಿಯಾ, ಮೊಹಮ್ಮದ್ ಹುಸಾಮುದ್ದೀನ್ ಮತ್ತು ನಿಶಾಂತ್ ದೇವ್ ಅವರು ಶುಕ್ರವಾರ ಕಣಕ್ಕಿಳಿಯಲಿದ್ದು, ಫೈನಲ್ ಪ್ರವೇಶಿಸಿ ಐತಿಹಾಸಿಕ ಸಾಧನೆ ಮಾಡುವ ವಿಶ್ವಾಸದಲ್ಲಿದ್ದಾರೆ.

ಬುಧವಾರ ಸೆಮಿಫೈನಲ್ ಪ್ರವೇಶಿಸಿದಾಗಲೇ ಈ ಮೂವರು ಪದಕ ಖಚಿತಪಡಿಸಿಕೊಂಡಿದ್ದರು. ಇನ್ನೊಂದು ಹೆಜ್ಜೆ ಮುಂದಿಟ್ಟು, ಚಿನ್ನ ಅಥವಾ ಬೆಳ್ಳಿ ಜಯಿಸಲು ಪ್ರಯತ್ನಿಸಲಿದ್ದಾರೆ. 2019ರ ಚಾಂಪಿಯನ್‌ಷಿಪ್‌ನಲ್ಲಿ ಅಮಿತ್ ಪಂಘಲ್ ಅವರು ಫೈನಲ್ ಪ್ರವೇಶಿಸಿದ್ದು ಭಾರತದ ಬಾಕ್ಸರ್ ಒಬ್ಬರ ಶ್ರೇಷ್ಠ ಸಾಧನೆ ಆಗಿದೆ. ಅವರು ಬೆಳ್ಳಿ ಜಯಿಸಿದ್ದರು.

ಶುಕ್ರವಾರ ನಡೆಯಲಿರುವ 51 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ದೀಪಕ್, ಫ್ರಾನ್ಸ್‌ನ ಬಿಲಾಲ ಬೆನ್ನಾಮಾ ಎದುರು ಕಣಕ್ಕಿಳಿಯುವರು. 2022ರ ಯುರೋಪಿಯನ್ ಚಾಂಪಿಯನ್ ಆಗಿರುವ ಬೆನ್ನಾಮಾ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಈ ಹಿಂದೆ ಎರಡು ಸಲ ಕಂಚು ಜಯಿಸಿದ್ದರು. ಅವರು ಕೂಡಾ ಈ ಬಾರಿ ಫೈನಲ್ ಮೇಲೆ ಕಣ್ಣಿಟ್ಟಿದ್ದಾರೆ.

25 ವರ್ಷದ ದೀಪಕ್, 2019ರ ಏಷ್ಯನ್ ಚಾಂಪಿಯನ್‌ಷಿಪ್ ಮತ್ತು 2021ರ ಸ್ಟ್ರಾಂಜಾ ಮೆಮೋರಿಯಲ್ ಟೂರ್ನಿಯಲ್ಲಿ ಬೆಳ್ಳಿ ಗೆದ್ದಿದ್ದರು. ಈ ಚಾಂಪಿಯನ್‌ಷಿಪ್‌ನಲ್ಲಿ ಅವರು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಕಜಕಸ್ತಾನದ ಸಕೇನ್ ಬಿಬೊಸಿನೊವ್ ಅವರಿಗೆ ಆಘಾತ ನೀಡಿದ್ದರು.





ನಿಶಾಂತ್ ದೇವ್ (ಎಡ) ಮತ್ತು ಹುಸಾಮುದ್ದೀನ್

ಹುಸಾಮುದ್ದೀನ್ ಅವರು 57 ಕೆ.ಜಿ. ವಿಭಾಗದ ನಾಲ್ಕರಘಟ್ಟದ ಹಣಾಹಣಿಯಲ್ಲಿ ಕ್ಯೂಬಾದ ಸೈದೆಲ್ ಹೊರ್ಟಾ ಅವರ ಸವಾಲು ಎದುರಿಸುವರು. ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವ ಹಾಗೂ ಏಷ್ಯನ್ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಕಜಕಸ್ತಾನದ ಸೆರಿಕ್ ತೆಮಿರ್ಜನೊವ್ ಅವರನ್ನು ಮಣಿಸಿದ್ದ ಹೊರ್ಟಾ, ಭಾರತದ ಬಾಕ್ಸರ್‌ಗೆ ಪ್ರಬಲ ಪೈಪೋಟಿ ನೀಡುವ ಸಾಧ್ಯತೆಯಿದೆ.

ನಿಶಾಂತ್ ಅವರು 71 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ 2022ರ ಏಷ್ಯನ್ ಚಾಂಪಿಯನ್, ಮತ್ತು 2018ರ ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಕಜಕಸ್ತಾನದ ಅಸ್ಲನ್‌ಬೆಕ್ ಶಿಂಬರ್ಜೆನೊವ್ ಅವರನ್ನು ಎದುರಿಸುವರು.



ಕಿದಂಬಿ ಶ್ರೀಕಾಂತ್

ಶ್ರೀಕಾಂತ್‌ಗೆ ವೀಂಪಿ ಮಹಾರ್ಡಿ ಕೋಚ್

ನವದೆಹಲಿ (ಪಿಟಿಐ): ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸಿರುವ ಬ್ಯಾಡ್ಮಿಂಟನ್ ಆಟಗಾರ ಕಿದಂಬಿ ಶ್ರೀಕಾಂತ್ ಅವರಿಗೆ ತರಬೇತಿ ನೀಡಲು ಇಂಡೋನೇಷ್ಯಾದ ವೀಂಪಿ ಮಹಾರ್ಡಿ ನೇಮಕವಾಗಿದ್ದಾರೆ.

2024ರ ಮೇ 1ರಿಂದ ಒಲಿಂಪಿಕ್ ಕೂಟದ ಅರ್ಹತಾ ಸುತ್ತು ಆರಂಭವಾಗಲಿದೆ. ಪ್ರಸ್ತುತ ಶ್ರೀಕಾಂತ್ ಉತ್ತಮ ಲಯದಲ್ಲಿ ಇಲ್ಲ. ಆದ್ದರಿಂದ ತಮ್ಮ ಕೌಶಲಗಳನ್ನು ಸುಧಾರಿಸಿಕೊಳ್ಳುವತ್ತ ಗಮನ ನೆಟ್ಟಿದ್ದಾರೆ.

’ಡಿಸೆಂಬರ್ 2021ರಲ್ಲಿ ಆಗಿನ ನನ್ನ ಕೋಚ್ ಆಗಸ್ ಬಿಟ್ಟ ನಂತರ ನೂತನ ಕೋಚ್ ನೇಮಕಕ್ಕಾಗಿ ಪ್ರಯತ್ನಿಸಿದ್ದೆ. ಈಗ ಇಂಡೋನೇಷ್ಯಾ ಮೂಲದ ಕೋಚ್ ವೀಂಪಿ ಸಿಕ್ಕಿದ್ದಾರೆ. ಈ ಹಿಂದೆ ನಾನು ಇಂಡೋನೇಷ್ಯಾದಲ್ಲಿ ನಡೆದ ಮೂರು ವಾರಗಳ ತರಬೇತಿಗೆ ಹೋಗಿದ್ದೆ. ಆಗ ಅವರನ್ನು ಭೇಟಿಯಾಗಿದ್ದೆ. ಹೋದ ತಿಂಗಳು ಅವರು ಭಾರತಕ್ಕೆ ಬಂದಿದ್ದಾರೆ‘ ಎಂದು ಶ್ರೀಕಾಂತ್ ತಿಳಿಸಿದ್ದಾರೆ.

ಒಲಿಂಪಿಕ್ಸ್ ಪದಕ ಮಾರಲಿರುವ ನಿಜೆಲ್ ಅಮೊಸ್

ಲಂಡನ್ (ರಾಯಿಟರ್ಸ್): ಬೋಟ್ಸವಾನಾದ ಅಥ್ಲೀಟ್ ನಿಜೆಲ್ ಅಮೊಸ್ ಅವರು ತಾವು 2012ರ ಲಂಡನ್ ಒಲಿಂಪಿಕ್ ಕೂಟದಲ್ಲಿ ಜಯಿಸಿದ್ದ ಬೆಳ್ಳಿ ಪದಕವನ್ನು ಮಾರಾಟ ಮಾಡುವುದಾಗಿ ತಿಳಿಸಿದ್ದಾರೆ.

ಉದ್ದೀಪನ ಮದ್ದು ಸೇವನೆಯ ಪ್ರಕರಣದಲ್ಲಿ ಅವರಿಗೆ ಮೂರು ವರ್ಷಗಳ ನಿಷೇಧ ಶಿಕ್ಷೆಯನ್ನು ಹೋದವಾರ ಪ್ರಕಟಿಸಲಾಗಿತ್ತು.

‘ಸದ್ಯದ ಪರಿಸ್ಥಿತಿಯಲ್ಲಿ ನನಗಿರುವ ಏಕೈಕ ಪಿಂಚಣಿ ಅಥವಾ ಹೂಡಿಕೆಯ ಮೂಲವೆಂದರೆ ಒಲಿಂಪಿಕ್ ಬೆಳ್ಳಿ ಪದಕವವಷ್ಟೇ. ನನ್ನ ಮತ್ತು ಕುಟುಂಬದ ನಿರ್ವಹಣೆಗಾಗಿ ಈ ಹೆಜ್ಜೆ ಇಡಲೇಬೇಕಾಗಿದೆ. ಅಂದಾಜು ಮೌಲ್ಯ ₹ 2.78 ಕೋಟಿ ಸಿಗಬಹುದು. ಇನ್ನು ಕೆಲದಿನಗಳಲ್ಲಿ ನನ್ನ ಬಯೋಪಿಕ್ ನೆಟ್‌ಫ್ಲಿಕ್ಸ್‌ನಲ್ಲಿ ಪ್ರಸಾರವಾಗಲಿದೆ. ಅದರ ನಂತರ ಈ ಮೌಲ್ಯ ದುಪ್ಪಟ್ಟಾಗುವ ಸಾಧ್ಯತೆ ಇದೆ‘ ಎಂದು ಅವರು ಹೇಳಿದ್ದಾರೆ.